ತಿರುಮಲೆ ತಾತಾಚಾರ್ಯ ಶರ್ಮರ ಬದುಕು- ಬರಹ

(ಇತಿಹಾಸ ಎಂ.ಫಿಲ್. ಪದವಿಗಾಗಿ ಹಂಪಿ
ಕನ್ನಡ ವಿಶ್ವ ವಿದ್ಯಾನಿಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕ:
ಚಿದಾನಂದ
REG.No. KARSMH - 00637

ಮಾರ್ಗದರ್ಶಕರು:
ಡಾ. ಬಿ.ಎಸ್. ಪುಟ್ಟಸ್ವಾಮಿ ಎಂ.ಎ. ಪಿ.ಹೆಚ್.ಡಿ.,
ಸಹ- ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಕಾಲೇಜು,
ಕೃಷ್ಣರಾಜೇಂದ್ರ ರಸ್ತೆ, ಬೆಂಗಳೂರು.

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2012-13

ಶಂ.ಶಂ.ಕ. ಅಕೌ

1071

ತಿರುಮಲೆ ತಾತಾಚಾರ್ಯ ಶರ್ಮರ ಬದುಕು-ಬರಹ

(ಇತಿಹಾಸ ಎಂ.ಫಿಲ್ ಪದವಿಗಾಗಿ, ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ಸಂಶೋಧನ ಪ್ರಬಂಧ)

ಸಂಶೋಧಕರು:

ಚಿದಾನಂದ

REG.NO.KARSMH-00637

ಮಾರ್ಗದರ್ಶಕರು :

ಡಾ॥ ಬಿ.ಎಸ್.ಪುಟ್ಟಸ್ವಾಮಿ. ಎಂ. ಎ., ಪಿಹೆಚ್.ಡಿ.,

ಸಹ - ಪ್ರಾಧ್ಯಾಪಕರು,ಇತಿಹಾಸ ವಿಭಾಗ,

ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಕಾಲೇಜು

ಕೃಷ್ಣರಾಜೇಂದ್ರರಸ್ತೆ, ಬೆಂಗಳೂರು.

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾಕೇಂದ್ರ,

ಕರ್ನಾಟಕ ಸಂಘ(ರಿ),ಮಂಡ್ಯ

(ಕನ್ನಡ ವಿ.ವಿ ಹಂಪಿಯಿಂದ ಮಾನ್ಯತೆ ಪಡೆದಿದೆ)

2012-13

ಸಂಶೋಧಕನ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವ ವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ. ಎಲ್. ಶ್ರೀಕಂಠೇಶಗೌಡ, ಸಂಶೋಧನ ಕೇಂದ್ರದಲ್ಲಿ 2012-13ನೇ ಸಾಲಿಗೆ ಇತಿಹಾಸ ಎಂ.ಫಿಲ್., ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್., ಅಧ್ಯಯನದ ಅಂಗವಾಗಿ ಸಂಶೋಧನ ನಿಬಂಧ ರಚಿಸಲು **"ತಿರುಮಲೆ ತಾತಾಚಾರ್ಯ ಶರ್ಮರ ಬದುಕು-ಬರಹ"** ವಿಷಯವನ್ನು ಆಯ್ಕೆಮಾಡಿಕೊಂಡು ಡಾ. ಬಿ.ಎಸ್. ಪುಟ್ಟಸ್ವಾಮಿಯವರ ಮಾರ್ಗ ದರ್ಶನದಲ್ಲಿ ಸಂಶೋಧನೆ ನಡೆಸಿ, ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಅಧ್ಯಯನವನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ. ಮತ್ತು ಕನ್ನಡ ವಿಶ್ವವಿದ್ಯಾನಿಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತೇನೆ.

[signature]

(ಚಿದಾನಂದ)
ಸಂಶೋಧಕ, ಚರಿತ್ರೆ ವಿಭಾಗ,
ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನ ಕೇಂದ್ರ,
ಕರ್ನಾಟಕ ಸಂಘ (ರಿ), ಮಂಡ್ಯ.

ದಿನಾಂಕ: 30/07/2013
ಸ್ಥಳ:ಮಂಡ್ಯ

ಮಾರ್ಗದರ್ಶಕರ ಪ್ರಮಾಣ ಪತ್ರ

"ತಿರುಮಲೆ ತಾತಾಚಾರ್ಯ ಶರ್ಮರ ಬದುಕು – ಬರಹ" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯದ ...ರಿತ್ರೆ ಎಂ.ಫಿಲ್., ಪದವಿಗಾಗಿ ಶ್ರೀ. ಚಿದಾನಂದರವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ...ಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ...ೃಢೀಕರಿಸುತ್ತೇನೆ.

B S Putta...

Dr. B.S. PUTTASWAMY, M.A., Ph. D.,
Associate Professor of History
Visveswarapura College of Arts & Commer...
K.R. Road, Bangalore - 560 004.

(ಡಾ. ಬಿ.ಎಸ್. ಪುಟ್ಟಸ್ವಾಮಿ)
ಸಹ–ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಕಾಲೇಜು,
ಕೃಷ್ಣ ರಾಜೇಂದ್ರ ರಸ್ತೆ, ಬೆಂಗಳೂರು.

ದಿನಾಂಕ: 29-07-2013
ಸ್ಥಳ:ಮಂಡ್ಯ

ಪರಿವಿಡಿ

ಅಧ್ಯಾಯ – ಒಂದು

ಪೀಠಿಕೆ

ಭಾರತದ ಇತಿಹಾಸದ ಮಹಾ ಕಥನದಲ್ಲಿ ಭವ್ಯ ಭಾರತವು ದಾಸ್ಯಕ್ಕೆ ಬಲಿಯಾದ ಕಾಲಘಟ್ಟವು ಒಂದು ದುರಂತ ಕಥನ. ಈ ದಾಸ್ಯ ದುಃಖದಿಂದ ಬಿಡುಗಡೆ ಹೊಂದಿ ಭಾರತವು ಪುನಃ ತನ್ನ ಗತವೈಭವವನ್ನು, ಪರಂಪರಾಗತವಾದ "ಜೀವನ ಭಾಗ್ಯ ಸಂಪದ" ವನ್ನು ಮತ್ತೆ ಪಡೆದುಕೊಂಡ ಪ್ರಸಂಗವು ವಿಶ್ವದ ಇತಿಹಾಸದಲ್ಲಿಯೇ ಪ್ರತ್ಯೇಕ ಮತ್ತು ಏಕೈಕ. ಭಾರತದ ಇತಿಹಾಸದ ಈ ಮಹಾಪರ್ವದಲ್ಲಿ "ರಕ್ತಪಾತ"–ಹಿಂಸೆ–ಸಾವು ಇವೆಲ್ಲವೂ ಮರೆಯಾಗಿ, "ಸತ್ಯ – ಅಹಿಂಸೆ – ಸತ್ಯಾಗ್ರಹ" ಎಂಬ ಮೂರು ಮಹಾನ್ ಶಕ್ತಿಗಳು ಮರುಹುಟ್ಟು ಪಡೆದುಕೊಂಡವು. ಈ ಮಹಾನ್ ತತ್ವದ ಪುನರುಪದೇಶ ಮಾಡಿದ "ಪೂಜ್ಯ ಮಹಾತ್ಮ ಗಾಂಧಿಜೀಯವರ ನೇತೃತ್ವ – ನಾಯಕತ್ವದ ಆ ಜನಾಂದೋಲನ" ಇವೆಲ್ಲ ವಿಶ್ವದ ಇತಿಹಾಸದಲ್ಲೇ, ಹಾಗೂ ಮಾನವನ ಜನಪದ ಇತಿಹಾಸದಲ್ಲೇ ಪ್ರಥಮ್ಯೆಕ ಪ್ರಥಮ.

ನಿಶ್ಚೇತನರಾಗಿ, ಗುಲಾಮ ಜೀವನ ನಡೆಸುತ್ತಿದ್ದ ಭಾರತೀಯ ಜನತೆ ಪುನಶ್ಚೇತನ ಗೊಂಡದ್ದು ಒಂದು ರೋಮಾಂಚ ಕಥನ. ಭಾರತದ ಪ್ರಾಚೀನ ಪುರಾಣೇತಿಹಾಸಗಳ ಸನ್ನಿವೇಶಗಳೆಲ್ಲ ಪುನರಾವರ್ತನೆಗೊಂಡು, ಭಾರತೀಯರನ್ನೆಲ್ಲ "ದೈವೀ ಹೃದಯ ಸಂಪನ್ನ"ರನ್ನಾಗಿ ಪರಿವರ್ತಿಸಿದ ಒಂದು ಆಶ್ಚರ್ಯದ–ಅದ್ಭುತದ "ಮಹಾಪರ್ವ" ಈ ಭಾರತದ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯ ಹೋರಾಟದ ಕಥನ. ಈ ಕಥನದ ಮೂರನೇ ಹಂತವೇ "ಗಾಂಧಿಯುಗ" ಈ ಕಥಾನಾಯಕಗಣದ ಮಹದಾಚಾರ್ಯರು ಆಚಾರ್ಯ, "ರಾಷ್ಟ್ರಪಿತ"ರೆನಿಸಿದ ಮಹಾತ್ಮ ಗಾಂಧೀಜಿ ಅವರು.

'ತಿರುಮಲೆ ತಾತಾಚಾರ್ಯ ಶರ್ಮ'ರು ಈ "ಮಹಾಪರ್ವ" ದ "ಯುದ್ಧಕಾಂಡ" ದ ಕಾಲದಲ್ಲಿ ಬಾಳಿ, ಬದುಕಿ, ಆ ಬಾಳನ್ನು ಸಾರ್ಥಕಪಡಿಸಿಕೊಂಡವರು ಅಷ್ಟು ಮಾತ್ರವಲ್ಲ; ಒಡನಾಡಿ ನಾಡ ಬಂಧು– ಬಾಂಧವರನೆಲ್ಲಾ ತಮ್ಮತ್ತ ಸೆಳೆದು, ಆ ಜನಕ್ಕೆಲ್ಲ ಸತ್ಯ –ಧರ್ಮ, ನ್ಯಾಯ–ನೀತಿಗಳ ಸಾರ್ಥಕ ಜೀವನದ ದಾರಿ ತೋರಿಸಿದವರು ತಿ. ತಾ. ಶರ್ಮರವರು. ಭಾರತದ ಭವ್ಯತೆಯ ಜೊತೆಜೊತೆಗೆ, ಕರ್ನಾಟಕದ ಪ್ರಕೃತಿಭಾಗ್ಯ ನಾಡು – ನುಡಿ ಹಾಗೂ ಅದರ ಜೀವನ ಸಂಸ್ಕೃತಿಯ ಮೋಡಿಯನ್ನು ಅನಾವರಣ ಮಾಡಿದವರು ಶರ್ಮಾಜಿ. ಅವರು ಅಪ್ರತಿಮ ದೇಶಭಕ್ತರು; ನಾಡಸೇವಕರು; ನುಡಿ ಪಾಲನ ಭಕ್ತರಾಗಿದ್ದವರು. ಕರ್ನಾಟಕದ ಮಹಾನ್ ಜೀವನ ಸಂಸ್ಕೃತಿಯ ಕನಸನ್ನು ನನಸಾಗಿಸಲು ಸಂಕಲ್ಪಮಾಡಿ ದುಡಿದವರು. "ಭಾರತವು ಸ್ವತಂತ್ರವಾಗಬೇಕು; – ಕರ್ನಾಟಕ ಏಕೀಕರಣದಲ್ಲಿ ಆ ಭವ್ಯ ಜೀವನ ಸಂಸ್ಕೃತಿಯು ಮರುಹುಟ್ಟು ಪಡೆದುಕೊಳ್ಳಬೇಕೆಂದು ಕನಸು ಕಂಡವರು." ಆ ಕನಸನ್ನು ನನಸಾಗಿಸುವುದೇ ತಮ್ಮ ಬಾಳಿನ ಗುರಿ ಎಂದು ನಿರ್ಧರಿಸಿ, ಅದಕ್ಕಾಗಿ ಜೀವನಪರ್ಯಂತ ಶ್ರಮಿಸಿದವರು.

ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನದಲ್ಲಿ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಕಹಳೆಯೂದಿ, ಭಾರತದ ಜೊತೆಗೆ ಕರ್ನಾಟಕದ ಭವ್ಯತೆಗೆ ಕೀರ್ತಿಯ ಬೆಳಕು ಕಾಣಿಸಿ ಕನ್ನಡದ ನಾಡು–ನುಡಿಗೆ, ಕನ್ನಡದ ಬಾಳ್ವೆಗೆ, ನವಚೈತನ್ಯ ತುಂಬಿದ ಮಹಾನ್ ಭಾವಜೀವಿ – ಕ್ರೀಯಾಶೀಲ ದೇಶಪ್ರೇಮಿ, ಸಂಸ್ಕೃತಿಯ ಆರಾಧಕರಾಗಿದ್ದರು ಶರ್ಮರು. ಕನ್ನಡ ಭಾಷೆಯ ಬೆಳವಣಿಗೆ, ಕರ್ನಾಟಕದ ಏಳಿಗೆಗೆ ಶ್ರಮಿಸಿದ ಮಹಾನ್ ಚೇತನ. ದೇಶದ ಸ್ವಾತಂತ್ರ್ಯ ಗಂಗೆಯ ಸಾವಿರಾರು ತೊರೆಗಳಲ್ಲಿ ಅವರೂ ಒಬ್ಬರು.

ಬ್ರಿಟಿಷರ ಅನ್ಯಾಯ, ದಬ್ಬಾಳಿಕೆ, ಹಾಗೂ ದುರಾಡಳಿತಗಳನ್ನು ಬುಡಸಮೇತ ಕಿತ್ತೆಸೆದು ದೇಶವನ್ನು ಸ್ವಾತಂತ್ರ್ಯಗೊಳಿಸುವುದಕ್ಕಾಗಿ ಗಾಂಧೀಜಿಯವರ ಜೊತೆಯಲ್ಲಿ ಕೈಜೋಡಿಸಿದರು. ಈ ದೆಸೆಯಲ್ಲಿ ಎಡರು–ತೊಡರು, ನಷ್ಟ– ಕಷ್ಟಗಳನ್ನು ಅನುಭವಿಸಿ ದರೂ, ಅವನ್ನೆಲ್ಲ ಮೆಟ್ಟಿ ಮುನ್ನುಗ್ಗಿದರು. ಭಾರತವನ್ನು ಬ್ರಿಟೀಷರ ವಸಾಹತುಶಾಹಿ ಆಳ್ವಿಕೆಯಿಂದ ವಿಮುಕ್ತಿಗೊಳಿ ಸುವುದಕ್ಕಾಗಿ, ಕರ್ನಾಟಕವನ್ನು ಏಕೀಕರಣಗೊಳಿಸಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದಕ್ಕಾಗಿ ಜೀವದ ಹಂಗು ತೊರೆದು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಹೋರಾಡಿದ ರಾಷ್ಟ್ರಭಕ್ತರು. ಕರ್ನಾಟಕದ ಏಕೀಕರಣಕ್ಕಾಗಿ ಅವರು ಸಲ್ಲಿಸಿದ ಸೇವೆ ಆಧುನಿಕ ಕರ್ನಾಟಕದ ಇತಿಹಾಸದಲ್ಲಿ ಚಿರಸ್ಮರಣೀಯ.

ಸ್ವಾತಂತ್ರ್ಯ ಪ್ರೇಮಿ, ದೇಶಾಭಿಮಾನಿ ಹಾಗೂ ಸ್ವಾಭಿಮಾನಿಯಾಗಿದ್ದ ಶರ್ಮರು ಸ್ವಾತಂತ್ರ್ಯ ಮತ್ತು ಸ್ವಾಭಿಮಾನದ ಸಂಕೇತವಾಗಿದ್ದ ಗಾಂಧಿಜೀಯವರ ಅಪ್ಪಟ ಅನುಯಾಯಿಯಾಗಿದ್ದರು. ತಿ.ತಾ ಶರ್ಮರು ಸ್ವಾತಂತ್ರ್ಯ ಹೋರಾಟಗಾರರೂ ಹೌದು; ಗಾಂಧೀ ವಾದಿಗಳೂ ಹೌದು. ಸಂಶೋಧಕರು, ವಾಗ್ಮಿಗಳು, ವಿಮರ್ಶಕರು, ಸಾಹಿತಿಗಳು, ಕೆಚ್ಚೆದೆಯ ಪತ್ರಕರ್ತರು, ಬರಹಗಾರರು, ಇತಿಹಾಸಕಾರರು, ಅದ್ಭುತ ಭಾಷಾಂತಕರು, ಶೈಲಿ ಶಿಲ್ಪಿ, ಸಾಂಸ್ಕೃತಿಕ ಸೇನಾನಿ, ಸತ್ಯಾಗ್ರಹ ಪಂಥದ ಉಪಾಸಕರು, ಹಾಗೂ ಸಮಾಜಸೇವಕರಾಗಿ ಅವರು ಸಾಹಸ ಮುಖಿ – ಸಹಸ್ರ ಬಾಹು ಗಳಾಗಿದ್ದರೆಂದರೆ ತಪ್ಪಿಲ್ಲ. 'ಭಾರತವಿಲ್ಲದೆ ಕರ್ನಾಟಕವಿಲ್ಲ; ಕರ್ನಾಟಕದ ಏಳಿಗೆ ಅದು ಭಾರತದ ಏಳಗೆಯೇ' ಎಂಬುದು ಶರ್ಮರ ಸ್ಪಷ್ಟ ಭಾವನೆಯಗಿತ್ತು[1]. ಕನ್ನಡಿಗರ 'ಋಣ' ಕರ್ನಾಟಕದ ಮೂಲಕವೇ ಭಾರತಕ್ಕೆ ಸಲ್ಲಬೇಕು ಎಂದು ಅವರು ನಂಬಿದ್ದರು. ಒಂದು ಕಡೆ ಭಾರತ; ಮತ್ತೊಂದು ಕಡೆ ಕರ್ನಾಟಕ: ಈ ದೃಷ್ಟಿಯಲ್ಲಿ ಶರ್ಮಾಜೀಯವರು ತಮ್ಮ ಪತ್ರಿಕೆಗೆ 'ವಿಶ್ವಕರ್ಣಾಟಕ' ಎಂದು ಹೆಸರಿಟ್ಟರು. ಆ ಹೆಸರು 'ಭಾರತದ ವಿಶ್ವತೋಮುಖ ವನ್ನೂ, ಕರ್ನಾಟಕದ ವಿಶ್ವ ಭ್ರಾತೃತ್ವವನ್ನೂ ಬಿಂಬಿಸುತ್ತದೆ.' ತಿರುಮಲೆ ತತಾಚಾರ್ಯ ಶರ್ಮರನ್ನು "ಕರ್ನಾಟಕದ ಪತ್ರಿಕೋದ್ಯಮದ ಭೀಷ್ಮ" ಎಂದು ಬಣ್ಣಿಸಲಾಗಿದೆ[2]. ಶರ್ಮರವರು ಕೃಷಿ ಮಾಡಿದ ಹಲವಾರು ಕ್ಷೇತ್ರಗಳಲ್ಲಿ ಪತ್ರಿಕೋ ದ್ಯಮವು ಪ್ರಮುಖ. ಇದನ್ನು ಅವರು ತಮ್ಮ ವೃತ್ತಿಯನ್ನಾಗಿಸಿ ಕೊಂಡಿದ್ದರು. ಪತ್ರಿಕೆಗಳಲ್ಲಿ ಕ್ರಾಂತಿಕಾರಿ ಲೇಖನಗಳನ್ನು ಬರೆಯುವುದರ ಮೂಲಕ ಜನರಲ್ಲಿ ನಾಡು–ನುಡಿಯ ಬಗೆಗೆ

ಜಾಗೃತಿಯನ್ನು ಬಡಿದೆಬ್ಬಿಸಿದ ಕೀರ್ತಿ ತಿ.ತಾ. ಶರ್ಮರವರಿಗೆ ಸಲ್ಲುತ್ತದೆ. ಕರ್ನಾಟಕವನ್ನು 'ವಿಶ್ವಕರ್ಣಾಟಕ' ವನ್ನಾಗಿ ಕಂಡರು– ಪ್ರತಿಪಾದಿಸಿದರು. ಕರ್ನಾಟಕದ ಇಂಪು – ಕಂಪುಗಳನ್ನು, ಪ್ರಭೆ – ಪ್ರತಿಷ್ಠೆಗಳನ್ನು ದಿಗಂತದೆತ್ತರಕ್ಕೇರಿಸಲು ಪ್ರಯತ್ನಿಸಿದರು. ಕನ್ನಡ ಪತ್ರಿಕೋದ್ಯಮ ಕ್ಷೇತ್ರಕ್ಕೆ ಅವರ ಕೊಡುಗೆ ಮೌಲ್ಯಯುತ ವಾದದ್ದಾಗಿದೆ. ಕನ್ನಡ ಪತ್ರಿಕಾ ಪ್ರಪಂಚಕ್ಕೆ ಕಾಲಧರ್ಮೋಚಿತವಾದ ಕನ್ನಡ "ಭಾಷಾಶೈಲಿ" ಯೊಂದನ್ನು ಸಹಜತೆಯಲ್ಲಿ ರೂಪಿಸಿ ಕೊಡುಗೆಯಾಗಿ ನೀಡಿದವರು ಅವರು. ಅವರ ಸಾರ್ವಜನಿಕಬದುಕು–ಬಾಳ್ವೆ ಮಾದರಿಯುತ ವಾಗಿದ್ದಿತ್ತು. ಅವರು ಸತ್ಯ–ಶಾಂತಿ, ನ್ಯಾಯ – ನೀತಿ, ಧರ್ಮಗಳನ್ನು ತಮ್ಮ ಜೀವನದುದ್ದಕ್ಕೂ ಪಾಲಿಸಿದರು. ಸಾರ್ವಜನಿಕ ಸೇವೆ ಹಾಗೂ ದೇಶ ಸೇವೆಗಳನ್ನು ತಮ್ಮ ಬದುಕಿನ ಒಂದು ಅವಿಭಾಜ್ಯ ಅಂಗವನ್ನಾಗಿಸಿಕೊಂಡಿದ್ದರು.

ಶರ್ಮಾಜಿ ಒಬ್ಬ ರಸಜ್ಞರು. ನಾಡ ಜೀವನದಲ್ಲಿ 'ಜೀವನ ರಸದ' ಸವಿಯನ್ನೂ; ಅನುಭವಿಸಬಹುದಾದ ಕಷ್ಟ –ಸುಖಗಳನ್ನೂ ಸ್ವಯಂ ಅನುಭವಿಸಿದರು. ಜನಪದ ಜೀವನದಲ್ಲಿ ಪಾಲ್ಗೊಂಡರು. ಜೀವನವೆ ಒಂದು ನಾಟಕರಂಗ. ಹಾಡು ಹಾಡುವುದೇ ಸಂತಸದ 'ಸುರಿಮಳೆ'; ಕಣ್ಣೀರು ಸುರಿಸುವುದೇ ನೋವಿನ, ದುಃಖದ, ಹೃದಯ ವಿಲಾಪದ ಸಂಕೇತ. ಇವೆರಡರ ಸಂಗಮವೇ ಶರ್ಮಾಜಿ. ಅವರು ಸಂಗೀತವನ್ನು ಬಲ್ಲವರಾಗಿದ್ದರು. ನಾಟಕಗಳಲ್ಲಿ ಪಾತ್ರ ವಹಿಸಿದ್ದರು. ಸಾಹಿತ್ಯದಲ್ಲಿ ಗದುಗಿನ ನಾರಣಪ್ಪನ ನುಡಿಯಂತೆ 'ಹಲಗೆ ಬಳಪವ ಪದವಿಟ್ಟಳಿಸದೊಂದಗ್ಗಳಿಕ್ಕೆ' ಅವರದು. ಕರ್ನಾಟಕದ ಸಾಹಿತ್ಯ–ಸಾಂಸ್ಕೃತಿಕ ಪರಂಪರೆಗೆ ಅವರು ನೀಡಿದ ಕೊಡುಗೆ ಅಮೂಲ್ಯ[3].

ಕರ್ನಾಟಕದ ನಾಡ ಜೀವನ ವಿಸ್ತಾರದಲ್ಲಿ ಸಮಕಾಲೀನ ಜೀವನದ ಏರುಪೇರುಗಳಲ್ಲಿ ಶರ್ಮಾಜಿ ಒಬ್ಬ ಅವತಾರ ಪುರುಷರು. ಶರ್ಮರ ಮಾತು, ಅವರ ಬರಹ, ಎರಡರಲ್ಲಿಯೂ ಆನಂದವಿದೆ, ಆಕ್ರೋಶವಿದೆ; ವಿನಯವಿದೆ, ವಿಪ್ಲವವೂ ಇದೆ. ಭಕ್ತಿಯಿದೆ; ಆಸೆಯ ಆದರ್ಶದ ಅನಂತವಿದೆ. ಅವರ ಮಾತು ತುಟಿಯಿಂದ ಹೊರ ಬಂದದ್ದಲ್ಲ; ಹೃದಯದಿಂದ ಹೊಮ್ಮಿ ಚಿಮ್ಮಿ ಬಂದದ್ದು!. ಅವರ ಅಭಿಪ್ರಾಯ ಅಭಿಮತಗಳು ಸಾಮೂಹಿಕ ಪ್ರೇರಣೆಯ ಪರಿಣಾಮವಲ್ಲ; ವಿಚಾರದ, ವಿವೇಕದ, ಮನಸ್ಫೋಟದ ಅಗೋಚರ ಪರಮ ಸತ್ವದ ಶಕ್ತಿಯ ಪ್ರತಿರೂಪಗಳು.

ಶರ್ಮರು ವಿಭಿನ್ನ ವ್ಯಕ್ತಿತ್ವ ಹೊಂದಿದ್ದ ಅಸಾಧಾರಣ ಪುರುಷರಾಗಿದ್ದರು. ಪ್ರಗತಿಪರ ಚಿಂತಕರಾಗಿ, ಸ್ವಾತಂತ್ರ್ಯ ಹೋರಾಟಗಾರ, ಸತ್ಯಾಗ್ರಹಿಯಾಗಿ ಅನುಪಮ ದೇಶಭಕ್ತರಾಗಿ, ಶರ್ಮರು ಸಲ್ಲಿಸಿದ ಸೇವೆ ಅಮೋಘ ಅನನ್ಯ ಕರ್ನಾಟಕದ ಇತಿಹಾಸ ರಚನೆಗೆ ತಮ್ಮನ್ನು ತಾವು ಸಮರ್ಪಿಸಿಕೊಂಡವರು. ಕರ್ನಾಟಕದ ಇತಿಹಾಸ ರಚನೆಗೆ ಪ್ರಾಮಾಣಿಕವಾಗಿ, ವಿಧ್ಯುಕ್ತ ಪ್ರಯತ್ನ ಮಾಡಿದ ಮೊದಲಿಗರಲ್ಲಿ ಶರ್ಮರದು ಪ್ರಮುಖ ಸ್ಥಾನವಾಗಿದೆ[4].

ಹತ್ತೊಂಭತ್ತು ಮತ್ತು ಇಪ್ಪತ್ತನೇ ಶತಮಾನದ ಕರ್ನಾಟಕದಲ್ಲಿ ಹುಟ್ಟಿ, ಬಾಳಿ, ತಮ್ಮ ಆಜನ್ಮ ಪ್ರತಿಭಾ ವಲಯದಲ್ಲಿ ಕನ್ನಡ ಸಾಹಿತ್ಯ–ಕರ್ನಾಟಕ ಇತಿಹಾಸ – ಅದರ

ಸಂಸ್ಕೃತಿಯ ಘನತೆ ಈ ಎಲ್ಲ ಆಯಾಮಗಳಲ್ಲೂ ತಮ್ಮ ಕೊಡುಗೆ ಇತ್ತವರು ತಿರುಮಲೆ ತಾತಾಚಾರ್ಯ ಶರ್ಮರು. ಕಾಲಧರ್ಮದಲ್ಲಿ ಅವರಿಗೆ ಪೂಜ್ಯ ಗಾಂಧೀಜಿ ಅವರ ಸನಿಹದ ಭಾಗ್ಯ ಒದಗಿತು; ಪರಿಣಾಮ ಶರ್ಮರ ಬರಹಗಳ ಹಿಂದೆ ಭಾರತ ಸ್ವಾತಂತ್ರ್ಯದ ಧ್ವನಿ ಅಡಗಿರುತ್ತಿತ್ತು.

"ಶರ್ಮರು ವ್ಯಕ್ತಿಯಲ್ಲ, ಒಂದು ಅಪೂರ್ವ ಶಕ್ತಿ" ಎಂದು ಗುರುತಿಸಲಾಗಿದೆ. ಕರ್ನಾಟಕದ ರೂಪನಾ ಸಾಹಸದ ಕಾರ್ಯದಲ್ಲಿ ಮೊದಲ ಸಾಲಿನವರು ಶರ್ಮಾಜಿ. ಭಾರತದ ಸ್ವಾತಂತ್ರ್ಯ–ಕರ್ನಾಟಕದ ಹುಟ್ಟು–ಕನ್ನಡ ಸಾಹಿತ್ಯದ ವಿಶ್ವತೋಮುಖ ಕೀರ್ತಿಯ ಬೆಳೆಗಾರರಲ್ಲಿ ಶರ್ಮಾಜಿ ಆದ್ಯರೂ – ಗಣ್ಯರೂ – ಅನನ್ಯರೂ ಆಗಿದ್ದು ಚಿರಂತನ ಸ್ಮರಣಾರ್ಹರಾಗಿದ್ದಾರೆ.

ಕನ್ನಡ ನಾಡು–ನುಡಿಯ ಅಭಿವೃದ್ಧಿಗಾಗಿ ಸ್ಥಾಪಿತವಾಗಿದ್ದ "ಕನ್ನಡ ಸಾಹಿತ್ಯ ಪರಿಷತ್ತಿನ" ಆರಂಭಿಕ ಕಾರ್ಯಕರ್ತರಲ್ಲಿ ಶರ್ಮರೂ ಒಬ್ಬರಾಗಿದ್ದರು. "ಕಾಸರಗೊಡು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ"ರಾಗಿದ್ದು ಆನಂತರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆದರು[5]. ಅಧ್ಯಕ್ಷರಾಗಿ ಅವರಿತ್ತ ಕನ್ನಡ–ನಾಡು ನುಡಿ ಸಂದೇಶಗಳು ಕನ್ನಡಿಗರಿಗೆ ಸದಾ ಸ್ಫೂರ್ತಿಯ ಚಿಲುಮೆಗಳಂತಿವೆ. ತಿ.ತಾ ಶರ್ಮರು ಪ್ರಚಂಡ ಆಶಾವಾದಿ, ಹಾಗೂ ಆದರ್ಶವಾದಿಯಾಗಿದ್ದರು.[6] ರಾಜಗುರುಗಳ ವಂಶದಿಂದ ಬಂದ ಅವರಿಗೆ ಕನ್ನಡ ನಾಡಿನ "ದಿವ್ಯದರ್ಶನ" ವಾಯಿತು. ದೊಡ್ಡ ವಂಶದಲ್ಲಿ ಹುಟ್ಟಿಬಂದು, ದೊಡ್ಡದೊಡ್ಡವರ ಕಾಲದಲ್ಲಿ ಜೀವಿಸಿದ್ದು, ಅವರಲ್ಲಿ ಹಲವಾರು ಮಂದಿಯೊಂದಿಗೆ ಓಡಾಡಿ, ನುಡಿದಾಡಿ, ಚೈತನ್ಯಶೀಲ ರಾದರು; ಅದನ್ನೆಲ್ಲ ನಾಡಿಗೆ ನೀಡಿ ಧನ್ಯರಾದರು ಶರ್ಮಾಜಿ.

ಅಧ್ಯಯನದ ವಸ್ತು ಮಹತ್ವ ಮತ್ತು ಉದ್ದೇಶ:

ಬ್ರಿಟಿಷರ ದುರಾಡಳಿತ– ದಬ್ಬಾಳಿಕೆಗಳನ್ನು ಬುಡಸಮೇತ ಕಿತ್ತೊಗೆದು, ದೇಶವನ್ನು ಬ್ರಿಟೀಷರ ಸಾಮ್ರಾಜ್ಯ ಸಂಕೋಲೆಯಿಂದ ವಿಮೋಚನೆಗೊಳಿಸುವುದಕ್ಕಾಗಿ ಸಹಸ್ರಾರು ಮಂದಿ ಜೀವದ ಹಂಗು ತೊರೆದು ಹೋರಾಡಿದರು. ತಮ್ಮ ತ್ಯಾಗ ಬಲಿದಾನಗಳ ಮೂಲಕ ಭಾರತವನ್ನು ಸ್ವಾತಂತ್ರ್ಯಗೊಳಿಸಿದರು. ಅಂತಹ ನಿಸ್ವಾರ್ಥ ವ್ಯಕ್ತಿಗಳ ಬದುಕಿನ ವಿವಿಧ ಮಜಲುಗಳನ್ನು ತಿಳಿಯುವುದು ಅತ್ಯಗತ್ಯವಾಗಿದೆ. ಅವರ ಬದುಕೇ ಈ ಒಂದು ಮಾರ್ಗದರ್ಶಿ; ಇಂದಿನ ಜನತೆಗೆ ಆದರ್ಶದ ಸೂಚಿ. ಚಿಕ್ಕಂದಿನಿಂದಲೆ ನಾಡಭಕ್ತಿ, ದೇಶಪ್ರೇಮಗಳನ್ನು ಬೆಳೆಸಿಕೊಂಡುಬಂದ ಶರ್ಮರು ಗಾಂಧೀಜಿಯವರಿಂದ ಸ್ಫೂರ್ತಿಗೊಂಡು ಅವರ ಆಶಯದಂತೆ ಬದುಕನ್ನು ಸರಳೀಕರಿಸಿಕೊಂಡು ತಮ್ಮ ಸುತ್ತಮುತ್ತಲಿನ ಪರಿಸರವನ್ನೆಲ್ಲ ಸತ್ಯ, ಅಹಿಂಸೆ, ನ್ಯಾಯ, ನೀತಿ, ಪ್ರಾಮಾಣಿಕತೆಗಳಿಂದ ಕೂಡಿರುವಂತೆ ಮಾಡಲು ಶ್ರಮಿಸಿದರು ಶರ್ಮಾಜಿ.

ತಿ.ತಾ ಶರ್ಮರ ಬದುಕಿನ ಹೋರಾಟದ ವಿವಿಧ ಕ್ಷೇತ್ರಗಳ ಅವರ ಸಾಧನೆ, ನಾಡಿನ ಇತಿಹಾಸ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಗಳು ಗಮನಾರ್ಹವಾಗಿವೆ. ಅವರು ವಿದ್ವಾಂಸರ, ಓದುಗರ, ನಾಡ ಹೋರಾಟಗಾರರ, ಇತಿಹಾಸ ಪ್ರಿಯರ, ಕರ್ನಾಟಕ ಏಕೀಕರಣ ಸಂಕಲ್ಪಿಗಳೆಲ್ಲರ ಪ್ರೇರಕ ಶಕ್ತಿಯಾಗಿದ್ದರು. ಅವರ ಹೋರಾಟದ ಬದುಕು, ಇತಿಹಾಸ– ಶಿಲಾಶಾಸನ ಸಂಶೋಧನ ಕ್ಷೇತ್ರದಲ್ಲಿ ಅವರ ಸಾಧನೆ; ಕನ್ನಡ ಪತ್ರಿಕಾ ರಂಗದಲ್ಲಿ ಅವರು ಕೈಗೊಂಡ ಪ್ರಜಾಜಾಗೃತಿ, ಭಾಷಾ ಪ್ರೇಮ, ಕನ್ನಡನಾಡು–ನುಡಿಗಾಗಿ ಕೈಗೊಂಡ ಸಾಂಸ್ಕೃತಿಕ ಚಟುವಟಿಕೆಗಳು, ಕಾರ್ಯಕ್ರಮಗಳು, ಇವುಗಳನ್ನೆಲ್ಲ ಒಂದೆಡೆ ದಾಖಲಿಸುವುದು ಅಗತ್ಯ ವೆಂಬುದಾಗಿ ಇಲ್ಲಿ ಭಾವಿಸಲಾಗಿದೆ. ಬದುಕಿನುದ್ದಕ್ಕೂ ಆದರ್ಶಸಾಧಕರಾಗಿ ಬಾಳಿದ ಶರ್ಮರ ಸ್ವಚ್ಛ ಬದುಕು ಎಂದೆಂದಿಗೂ ಅನುಕರಣೀಯವಾದದ್ದು. ಅವರ ಇತಿಹಾಸಪ್ರಜ್ಞೆ ಸಂಶೋಧನ ಪ್ರವೃತಿ, ನಾಡಸೇವೆಯ ಭಕ್ತಿ, ನೇರ ದಿಟ್ಟ ನಡೆ–ನುಡಿ, ಮಾತುಗಾರಿಕೆಯ ಶೈಲಿ, ಕೆಚ್ಚೆದೆಯ ಬರಹ, ಮಾತೃವಾತ್ಸಲ್ಯದ ರಾಷ್ಟ್ರ ಪ್ರೇಮ, ಮೌಲ್ಯಯುತ ಬದುಕು ಇವೆಲ್ಲವೂ ಅವಿಸ್ಮರಣೀಯವಾದವು.

ವಿಷಯದ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೃತಿಗಳು ಹಾಗೂ ಲೇಖನಗಳ ಸಮೀಕ್ಷೆ:–

ತಿ.ತಾ ಶರ್ಮರನ್ನು ಕುರಿತು ಹಲವು ಗ್ರಂಥಗಳಲ್ಲಿ ಮಾಹಿತಿ ಇದೆ. ಶರ್ಮರ ಆತ್ಮಕಥೆ 'ನನ್ನ ಜೀವನ ಮತ್ತು ಧ್ಯೇಯ' ಕೃತಿಯು ಅವರ ಬದುಕು–ಹೋರಾಟಗಳ ವಿವಿಧ ಮಜಲುಗಳನ್ನು ಪರಿಚಯಿಸುತ್ತದೆ. ಡಾ॥ ಕೆ. ವಸಂತಲಕ್ಷ್ಮಿಯವರು ಬರೆದಿರುವ 'ವಿಶ್ವಕರ್ನಾಟಕದ ತಿ.ತಾ ಶರ್ಮ' ಕೃತಿಯು ಅವರ ಸಂಪೂರ್ಣ ಮಾಹಿತಿಯನ್ನು ಒದಗಿಸುತ್ತದೆ. ಜಿ.ಎಸ್.ಭಟ್‌ರವರ ತಿರುಮಲೆ ತಾತಾಚಾರ್ಯ ಶರ್ಮ ಕೃತಿಯು ಅವರ ಬೆಳಕು ಚೆಲ್ಲುವ ಮತ್ತೊಂದು ಕೃತಿಯಾಗಿದೆ. 1947 ರ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಶರ್ಮರು ಮಾಡಿದ ಭಾಷಣವು ನಾಡಿನ ಬಗೆಗೆ ಹೊಂದಿದ್ದ ಕಾಳಜಿ–ಕನಸುಗಳುನ್ನು ತಿಳಿಸುತ್ತದೆ. ಕರ್ನಾಟಕ ಮಾಧ್ಯಮ ಅಕಾಡಮಿಯು ಹೊರತಂದಿರುವ 'ಕನ್ನಡ ಪತ್ರಿಕಾ ಲೋಕದ ಧೀಮಂತರು–04 ಕೃತಿಯು ಶರ್ಮರ ಪತ್ರಿಕೆ ಹಾಗೂ ಲೇಖನಗಳ ಬಗ್ಗೆ ಮಾಹಿತಿ ನೀಡುತ್ತದೆ. ಶರ್ಮರ ಸಂಪಾದಕತ್ವದ 'ವಿಶ್ವಕರ್ನಾಟಕ' ಪತ್ರಿಕೆ, ಲೇಖನಗಳು, ಸಂಪಾದಕಿಯಗಳು ಮತ್ತು ಅವರ ಕೃತಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಆಧಾರಗಳು:

ತಿ.ತಾ ಶರ್ಮರ ಬಗ್ಗೆ ಸಂಶೋಧನ ಪ್ರಬಂಧ ರಚಿಸಲು ಪ್ರಮುಖವಾಗಿ ಮೂಲ ಮತ್ತು ಅನುಷಂಗಿಕ ಆಧಾರಗಳನ್ನು ಅವಲಂಬಿಸಲಾಗಿದೆ. ಪುರಾತತ್ವ ಇಲಾಖೆಯಲ್ಲಿ ಶಾಸನ ಸಂಶೋಧನ ವಿಭಾಗದಲ್ಲಿ ಸಹಾಯಕರಾಗಿ ಶರ್ಮರು ನಿರ್ವಹಿಸಿದ

ಕಾರ್ಯವನ್ನು ಆಧಾರವಾಗಿ ಬಳಸಲಾಗಿದೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಹಾಗೂ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಶರ್ಮರು ಕೈಗೊಂಡ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ಆಧರಿಸಲಾಗಿದೆ. ಅಹಮದಾಬಾದಿನ ಕಾಂಗ್ರೆಸ್ ಅಧಿವೇಶನ, 1924ರ ಬೆಳಗಾಂ ಕಾಂಗ್ರೆಸ್ ಅಧಿವೇಶನಗಳಲ್ಲಿ ಭಾಗವಹಿಸಿದ ಮಾಹಿತಿಯನ್ನೂ ಆಧರಿಸಲಾಗಿದೆ. ವಿಶ್ವಕರ್ಣಾಟಕ ಎಂಬ ಪತ್ರಿಕೆಯಲ್ಲಿ ಕ್ರಾಂತಿಕಾರಕ ಲೇಖನಗಳನ್ನು ಬರೆಯುವುದರ ಮೂಲಕ ದೇಶಸೇವೆಗೆ, ನಾಡಸೇವೆಗೆ ಜನರನ್ನು ಹೇಗೆ ಪ್ರೇರೇಪಿಸಿದರು ಎಂಬುದನ್ನು ತಿಳಿಯಲು ಆಯ್ದ ಲೇಖನಗಳನ್ನು ಬಳಸಿಕೊಳ್ಳಲಾಗಿದೆ. ಮತ್ತು ಶರ್ಮರು ಬರೆದಿರುವ ಕೃತಿಗಳನ್ನು ಇಲ್ಲಿ ಆಧಾರವಾಗಿ ಪರಿಗಣಿಸಲಾಗಿದೆ.

ಸಂಶೋಧನಾ ವಿಧಾನ:-

ತಿ.ತಾ ಶರ್ಮರ ಬದುಕು-ಬಾಳ್ವೆಯ - ಇತಿಹಾಸ ಸಂಶೋಧನಾ ಮಾರ್ಗದಲ್ಲಿ ಹಲವು ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ವಿಶ್ಲೇಷಣಾತ್ಮಕ ಮತ್ತು 'ವಿಮರ್ಶಾತ್ಮಕ' ಮಾರ್ಗಗಳನ್ನು ಅನುಸರಿಸಲಾಗಿದೆ. ಜೀವನ ಮತ್ತು ಸಾಧನೆಗಳನ್ನು ಮೂಲ ಆಧಾರಗಳ ನೆರವಿನಿಂದ ಅಧ್ಯಯನ ಮಾಡಲಾಗಿದೆ. ಅವರಿಗೆ ಸಂಬಂಧಪಟ್ಟ ಎಲ್ಲ ಗ್ರಂಥಗಳನ್ನೂ, ಲೇಖನಗಳನ್ನು ಅವಲೋಕಿಸಿ, ಟಿಪ್ಪಣಿಸಿ ಸಾಧನೆಗಳನ್ನು ಗುರುತಿಸಲಾಗಿದೆ. ಶರ್ಮರ ಮಕ್ಕಳು ಹಾಗೂ ಅವರ ಕಿರಿಯ ಮಿತ್ರರಿಂದ ಶರ್ಮಾಜಿಯವರ ಸಹಜ ಪ್ರೇಮದ ಅನುಭವ ಪಡೆದು, ಸಂದರ್ಶಿಸಿ ಮಾಹಿತಿ ಪಡೆದು ಈ ಪ್ರಬಂಧವನ್ನು ರೂಪಿಸಲಾಗಿದೆ. ಬಾಹ್ಯ ಮತ್ತು ಆಂತರಿಕ ವಿಮರ್ಶನಾ ವಿಧಾನವನ್ನು ಅನುಸರಿಸಿ ವೈಜ್ಞಾನಿಕ ರೀತಿಯಲ್ಲಿ ಈ ಪ್ರಬಂಧವನ್ನು ಸಿದ್ಧಗೊಳಿಸಲಾಗಿದೆ. ಈ ಸಂದರ್ಭದಲ್ಲಿ ಪ್ರಕಟಿತ, ಅಪ್ರಕಟಿತ ಕೃತಿಗಳನ್ನೂ, 'ವಿಶ್ವಕರ್ಣಾಟಕ ಪತ್ರಿಕೆಯ ಕೆಲವು ಮೂಲ ಪ್ರತಿ'ಗಳನ್ನು ಅವಲೋಕಿಸಿ ತಿ.ತಾ ಶರ್ಮರ ಬದುಕು ಬರಹವನ್ನು ಕುರಿತು ಈ ಪ್ರಬಂಧವನ್ನು ರಚಿಸಲಾಗಿದೆ. ಶರ್ಮರ ಸಮಕಾಲೀನ ಸಾಹಿತ್ಯಾಧಾರಗಳಿಂದಲೂ ಸತ್ಯಾಂಶವನ್ನು ತಿಳಿಯುವ ತಾಳೆನೋಡುವ ಪ್ರಯತ್ನ ಮಾಡಲಾಗಿದೆ. ಅನಂತರ ಶರ್ಮರ ಜೀವನ ಸಾಧನೆಗಳನ್ನು ಕುರಿತು ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಲಾಗಿದೆ. ಅಧ್ಯಯನದ ದೃಷ್ಟಿಯಿಂದ ಈ ಸಂಶೋಧನ ವಿಷಯವನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

:ಅಧ್ಯಾಯಗಳ ವರ್ಗೀಕರಣ:

ಅಧ್ಯಾಯ ಒಂದು ಪೀಠಿಕೆ:

ಈ ಅಧ್ಯಾಯದಲ್ಲಿ ತಿ.ತಾ ಶರ್ಮರ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಆನಂತರ ಪ್ರಸ್ತುತ ಸಂಶೋಧನಾ ವಿಷಯದ ಮಹತ್ವವನ್ನು ಚರ್ಚಿಸಿದೆ. ಶರ್ಮರು ಸ್ವಾತಂತ್ರ್ಯ ಹೋರಾಟಗಾರರಾಗಿ ಗಾಂಧಿವಾದಿಯಾಗಿ ಸಂಶೋಧಕರಾಗಿ, ವಿಮರ್ಶಕರಾಗಿ, ಸಾಹಿತಿ ಗಳಾಗಿ, ಕೆಚ್ಚೆದೆಯ ಪತ್ರಕರ್ತರಾಗಿ, ಇತಿಹಾಸಕಾರರಾಗಿ, ಹಾಗೂ ಸಮಾಜ

ಸೇವಕರಾಗಿ ಗಣನೀಯವಾದ ಸಾಧನೆಗೈದು ವ್ಯಕ್ತಿ ಚರಿತ್ರೆಯ ಇತಿಹಾಸದಲ್ಲಿ ಶಾಶ್ವತವಾದ ಸ್ಥಾನ ಗಳಿಸಿದ್ದಾರೆ. ಈ ಅಧ್ಯಾಯದಲ್ಲಿ ತಿ.ತಾ.ಶರ್ಮರ ಬಗ್ಗೆ ಪ್ರಕಟವಾಗಿರುವ ಗ್ರಂಥಗಳ ಪರಿಚಯವನ್ನು ನೀಡಲಾಗಿದೆ. ಈ ಪ್ರೌಢ ಪ್ರಬಂಧವನ್ನು ರಚಿಸಲು ಉಪಯೋಗಿಸಿದ ಮೂಲ ಆಧಾರಗಳ ಬಗ್ಗೆಯೂ ಹಾಗೂ ಈ ಪ್ರಬಂಧವನ್ನು ಸಿದ್ಧಪಡಿಸಲು ಅನುಸರಿಸಿದ ಸಂಶೋಧನಾ ವಿಧಾನದ ಬಗ್ಗೆಯೂ ಚರ್ಚಿಸಲಾಗಿದೆ.

ಅಧ್ಯಾಯ ಎರಡು: ತಿ.ತಾ ಶರ್ಮರ ಬಾಲ್ಯ, ವಿದ್ಯಾಭ್ಯಾಸ-ಜೀವನ:

ಎರಡನೇ ಅಧ್ಯಾಯದಲ್ಲಿ ತಿ.ತಾ ಶರ್ಮರ ವ್ಯಕ್ತಿ ಜೀವನದ-ಹೋರಾಟದ ಸಮಗ್ರ ವಿವರಣೆಯನ್ನು ನೀಡಲಾಗಿದೆ. ಶರ್ಮರ ಹುಟ್ಟು, ಬಾಲ್ಯ, ವಿದ್ಯಾಭ್ಯಾಸ, ವಿವಾಹ; ನಾಡಿಗಾಗಿ ಹೋರಾಟ, ಶಾಸನ ಸಂಶೋಧನಾ ಇಲಾಖೆಯ ಕಾರ್ಯನಿರ್ವಹಣೆ, ಪತ್ರಿಕೋದ್ಯಮದ ವೃತ್ತಿ ಜೀವನ,ಸಮಾಜ ಸೇವಾ ಕಾರ್ಯ, ಕನ್ನಡ ನಾಡು ಕಟ್ಟುವ ಕಾರ್ಯ – ಮೊದಲಾದವುಗಳ ಸಂಪೂರ್ಣ ಮಾಹಿತಿಯನ್ನು ನೀಡಲಾಗಿದೆ.

ಅಧ್ಯಾಯ ಮೂರು: ತಿ.ತಾ ಶರ್ಮರವರ ಕರ್ನಾಟಕ ಚರಿತ್ರೆಯ ಶಿಲಾಶಾಸನಗಳ ಶೋಧನೆಗಳು:

ಮೂರನೇ ಅಧ್ಯಾಯದಲ್ಲಿ ತಿ.ತಾ ಶರ್ಮರು ಕರ್ನಾಟಕ ಚರಿತ್ರೆಗೆ ಸಂಬಂಧಿಸಿದಂತೆ ಶೋಧಿಸಿದ ಶಾಸನಗಳ ಬಗ್ಗೆ ವಿವರವಾದ ಮಾಹಿತಿ ನೀಡಲಾಗಿದೆ. ಶರ್ಮರ ಶಾಸನ ಪಾಠ, ಪಾಠದ ಅರ್ಥವಿವರಣೆಯನ್ನು ಈ ಅಧ್ಯಾಯವು ಒಳಗೊಂಡಿದೆ.

ಅಧ್ಯಾಯ ನಾಲ್ಕು: ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿಗೆ ಶರ್ಮರ ಕೊಡುಗೆಗಳು:

ನಾಲ್ಕನೇ ಅಧ್ಯಾಯದಲ್ಲಿ ಶರ್ಮರು ಕನ್ನಡಪರ ಹೋರಾಟಗಾರರಾಗಿ, ಏಕೀಕರಣ ಚಳುವಳಿಯ ನಿಷ್ಠಾವಂತ ಕಾರ್ಯಕರ್ತರಾಗಿ ದುಡಿದ ಬಗ್ಗೆ ಮಾಹಿತಿ ಇದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಮಿಥಿಕ್ ಸೊಸೈಟಿಯ ಅಧ್ಯಕ್ಷರಾಗಿ ಶರ್ಮರು ಕೈಗೊಂಡ ಕನ್ನಡ ಪರ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ವಿವರಿಸಲಾಗಿದೆ. 'ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ'ರಾಗಿ ಶರ್ಮರು ಕನ್ನಡ ನಾಡಿಗೆ ನೀಡಿದ ದಿವ್ಯ ಸಂದೇಶವನ್ನು ಸ್ಮರಿಸಲಾಗಿದೆ.

ಅಧ್ಯಾಯ ಐದು: ಪತ್ರಿಕೆ ಮತ್ತು ಲೇಖನ:

ಈ ಅಧ್ಯಾಯದಲ್ಲಿ ತಿ.ತಾ ಶರ್ಮರ ವಿಶ್ವಕರ್ಣಾಟಕ ಪತ್ರಿಕೆಯ ಹುಟ್ಟು; ಬೆಳವಣಿಗೆ; ಹೋರಾಟ ಮುಂತಾದವುಗಳನ್ನು ವಿವರಿಸಲಾಗಿದೆ. ವಿಶ್ವಕರ್ಣಾಟಕ ವಾರ ಮತ್ತು ದಿನ ಪತ್ರಿಕೆಗಳ ಸಂಪಾದಕಿಯಗಳು, ಪ್ರಧಾನ ಲೇಖನಗಳು ಹಾಗೂ ಪ್ರಮುಖ ಮಾಹಿತಿಯನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ ಆರು: ತಿ.ತಾ ಶರ್ಮರ ಕೃತಿಗಳು ಮತ್ತು ಅವುಗಳ ವಿಮರ್ಶೆ:

ಕನ್ನಡದ ಸೃಜನ ಶೀಲ ಬರಹಗಾರರಾಗಿ ಶರ್ಮರು ಹಲವಾರು ಕೃತಿಗಳು ಹಾಗೂ ಗ್ರಂಥಗಳನ್ನು ರಚಿಸಿದ್ದಾರೆ. ಈ ಗ್ರಂಥಗಳು ಒಳಗೊಂಡಿರುವ ಮಾಹಿತಿ ಮತ್ತು

ಅವು ಪ್ರಕಟಗೊಂಡ ವರ್ಷ ಮುದ್ರಕರು ಮುಂತಾದವುಗಳನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಏಳು: ಉಪಸಂಹಾರ:–

ಈ ಅಧ್ಯಾಯದಲ್ಲಿ ಪ್ರಸ್ತುತ ಪ್ರೌಢ ಪ್ರಬಂಧದ ಫಲಿತಾಂಶದ ವಿವರಣೆಯನ್ನು ನೀಡಲಾಗಿದೆ. ತಿ.ತಾ ಶರ್ಮರು ಸ್ವಾತಂತ್ರ್ಯ ಹೋರಾಟಗಾರರಾಗಿ, ಇತಿಹಾಸ ತಜ್ಞರಾಗಿ, ಶಾಸನಶೋಧಕರಾಗಿ, ಕನ್ನಡಪರ ಹೋರಾಟಗಾರರಾಗಿ, ಧೀರ ಪತ್ರಕರ್ತರಾಗಿ ಕನ್ನಡದ ಹೋರಾಟಗಾರರಾಗಿ ದುಡಿದು ಕೀರ್ತಿಗಳಿಸಿದ್ದಾರೆ.

: : ಅಡಿ ಟಿಪ್ಪಣಿ : :

1. ಸಂಶೋಧಕನಿಂದ ತಿ.ತಾ.ಶರ್ಮರ ಹಿರಿಯ ಪುತ್ರನ ಸಂದರ್ಶನ 15/03/2013
2. ಕನ್ನಡ ಪತ್ರಿಕಾ ಲೋಕದ ಧೀಮಂತರು ಪು.ಸಂ – 24
3. ಸಂಶೋಧಕನಿಂದ ಹೋ.ಶ್ರೀನಿವಾಸಯ್ಯ, ಅಧ್ಯಕ್ಷರು, ಗಾಂಧಿಭವನ ಬೆಂಗಳೂರು, ಸಂದರ್ಶನ 28/03/2013
4. ಸಂಶೋಧಕನಿಂದ ಹೆಚ್.ಎಸ್.ದೊರೆಸ್ವಾಮಿ, ಹಿರಿಯ ಸ್ವತಂತ್ರ ಹೋರಾಟಗಾಗರು, ಬೆಂಗಳೂರು, ಸಂದರ್ಶನ: 16/04/2013
5. ಎಸ್.ವಿ.ಶ್ರೀನಿವಾಸಯ್ಯ,– ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಪು.ಸಂ –
6. ಶರ್ಮರ ಆತ್ಮ ಚರಿತ್ರೆ, ನನ್ನ ಜೀವನ ಮತ್ತು ಧ್ಯೇಯ ಪು.ಸಂ – 05

ಅಧ್ಯಾಯ ಎರಡು

ತಿ.ತಾ ಶರ್ಮರ ಬಾಲ್ಯ, ವಿದ್ಯಾಭ್ಯಾಸ–ಜೀವನ:–

ತಿರುಮಲೆ ತಾತಾಚಾರ್ಯ ಶರ್ಮರವರದು 'ರಾಜಗುರುಗಳ' ಮನೆತನ. ತಿ. ತಾ. ಶರ್ಮರು ಪಂಡಿತರ ಮನೆತನದಲ್ಲಿ 1895 ರ ಏಪ್ರಿಲ್ 22 ರಂದು ಕೋಲಾರ ಜಿಲ್ಲೆಯ "ಚಿಕ್ಕಬಳ್ಳಾಪುರ" ದ ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದರು. ರಾಜರಕ್ಷಕರ ವಂಶ, ಒಂದು ವಿಶಿಷ್ಟ ಸಾಂಸ್ಕೃತಿಕ ಪರಂಪರೆಯ ಮನೆತನ. ತಿ.ತಾ ಶರ್ಮರವರಿಗೆ ಅವರ ಹಿರಿಯರು ಇಟ್ಟ ಹೆಸರು 'ಲಕ್ಷ್ಮೀಕುಮಾರ ತಾತಾಚಾರ್ಯ'[1] ಮನೆಯವರು ಮಾತ್ರ ಅವರನ್ನು ಪ್ರೀತಿಯಿಂದ 'ರಾಜ' ಎಂದು ಕರೆಯುತ್ತಿದ್ದರು.

ಅವರ ತಂದೆ ಶ್ರೀನಿವಾಸ ತಾತಾಚಾರ್ಯರು. ತಾಯಿ ಜಾನಕಮ್ಮ. ತಿ.ತಾ ಶರ್ಮರು, ತಮ್ಮ ಚಿಕ್ಕ ತಾತ ಶ್ರೀರಂಗಾಚಾರ್ಯರು ಮತ್ತು ಪತ್ನಿ ಅಲಮೇಲಮ್ಮನರಿಗೆ ದತ್ತು ಪುತ್ರ ರಾಗಿದ್ದರು. ಶರ್ಮರವರ ಮನೆತನ ಹಾಗೂ ಅವರ ಪರಂಪರೆ ಅವರ ವ್ಯಕ್ತಿತ್ವಕ್ಕೊಂದು ಮೆರಗು ಕೊಟ್ಟಿತು. ಶರ್ಮರ ತಂದೆ ಶ್ರೀನಿವಾಸ ತಾತಾಚಾರ್ಯರು 1917 ರಲ್ಲಿ ಪ್ಲೇಗ್ ರೋಗದಿಂದ ಮರಣಹೊಂದಿದರು. ಶರ್ಮಾಜಿಯವರಿಗೆ ಐವರು ಅಣ್ಣತಮ್ಮಂದಿರು. ಐದು ಮಂದಿಯಲ್ಲಿ ಹಿರಿಯವರನ್ನು ಮತ್ತು ಕೊನೆಯವರನ್ನು ಶರ್ಮರು ಕಂಡಿದ್ದರು. ಆದರೆ ಮಧ್ಯದ ಮೂರು ಮಂದಿ ಬಾಲ್ಯದಲ್ಲೆ ಮರಣಹೊಂದಿದ್ದರು.

ಶರ್ಮಾಜಿಯವರ ಮನೆ ಚಿಕ್ಕಬಳ್ಳಾಪುರದ ರಾಜಬೀದಿಯಲ್ಲಿತ್ತು. ಅದು ಮಣ್ಣಿನಮನೆ ಆ ಮನೆ 128 ಅಂಕಣಗಳದ್ದು.. ಶರ್ಮಾಜಿಯವರು ಆ ಮನೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವ ವೇಳೆಗೆ ಅದರ ಅಂಕಣ ಎಂಬತ್ತಕ್ಕೆ ಇಳಿದಿತ್ತು[2]. ಉಳಿದವು ಉರುಳಿ ಬಿದ್ದು ಹೋಗುವ ಸ್ಥಿತಿಯಲ್ಲಿದ್ದವು. ಮನೆಯೊಳಗೆ ಒಂದು ಬಾವಿ, ಎರಡು ಕಲ್ಯಾಣ ವೇದಿಕೆಗಳಿದ್ದವು. ಅಂತೆಯೇ ನಾನಾ ವಾದ್ಯಗಳು, ಚರ್ಮವಾದ್ಯಗಳೂ ಇದ್ದವು. ಇಪ್ಪತ್ತೊಂದು ಕತ್ತಿಗಳಿದ್ದವು. ಅವುಗಳನ್ನು ತಾವೇ ಎಣಿಕೆ ಮಾಡಿದ್ದಾಗಿ ಶರ್ಮರು ತಮ್ಮ ಆತ್ಮ ಚರಿತ್ರೆಯಲ್ಲಿ ಹೇಳಿಕೊಂಡಿದ್ದಾರೆ. ಶ್ರೀಕೃಷ್ಣದೇವರಾಯನ ಆನಂತರ ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿದ್ದ ಹಲವಾರು ಪಾಳೆಗಾರರು (ನಾಯಕರುಗಳು) ತಾವು ಸ್ವತಂತ್ರರೆಂದು ಘೋಷಿಸಿಕೊಂಡರು. ಈ ಸಂದರ್ಭದಲ್ಲಿ ಉದಯಿಸಿದ ಅನೇಕ ಚಿಕ್ಕಪುಟ್ಟ ಪಾಳೆಗಾರರಲ್ಲಿ ಚಿಕ್ಕಬಳ್ಳಾಪುರದ ಪಾಳೆಗಾರ ವಂಶವು ಒಂದು. ಅವರ ಆಶ್ರಯದಲ್ಲಿದ್ದ ರಾಜಗುರುಗಳ ಮನೆತನದ ಕುಡಿಯೇ ತಿ.ತಾ ಶರ್ಮರು. ಹತ್ತೊಂಭತ್ತನೆಯ ಶತಮಾನದ ಸೂರ್ಯನ ಸಂಧ್ಯಾಕಾಲವದು; ಹತ್ತೊಂಭತ್ತನೆಯ ಶತಮಾನದ ಸೂರ್ಯ ತನ್ನ ಕರ್ತವ್ಯ ಮುಗಿಸಿ ನಿದ್ದೆಗೆ ಜಾರುತ್ತಿದ್ದ ಸಮಯದಲ್ಲಿ ಹುಟ್ಟಿಬಂದವರು ತಿ.ತಾ.ಶರ್ಮರು. ಅವರು ಎದ್ದು ನಿಂತು ಜಾಗೃತರಾಗಿ ಓಡಾಡಲು, ನಡೆದಾಡಲು ಆರಂಭಿಸಿದ ಕಾಲಕ್ಕೆ ಇಪ್ಪತ್ತನೇ ಶತಮಾನದ ಸೂರ್ಯ ಉದಯಿಸಿದ್ದ.

ಇಪ್ಪತ್ತನೇ ಶತಮಾನದ ಪೂರ್ವಾರ್ಧ ಕಾಲವು ಭಾರತದಲ್ಲಿ "ನವಮನ್ವಂತರ"ವನ್ನು ಹುಟ್ಟುಹಾಕಿತು. ಭಾರತದಲ್ಲಿ ಇದೇ ಗುಲಾಮಗಿರಿಯ ಕಾಲಾವಧಿಯಲ್ಲಿ ಭಾರತೀಯ ರಾಜಕೀಯರಂಗದಲ್ಲಿ ಸತ್ಯ ಅಹಿಂಸೆಯ ಸಾಕಾರಮೂರ್ತಿಯೊಬ್ಬರು ಅವತರಿಸಿದರು. ಅವರೇ ಭಾರತದ 'ರಾಷ್ಟ್ರಪಿತ'. ಗಾಂಧೀಜಿ. ಇವರು ದೇಶದ ದಾಸ್ಯ ಸಂಕೋಲೆಯ ವಿಮೋಚನೆಗಾಗಿ ಸ್ವಾತಂತ್ರ್ಯ ಚಳುವಳಿ ಧುಮ್ಮುಕ್ಕಿದ ಪವಿತ್ರ ಕಾಲದಲ್ಲಿ ಶರ್ಮಾಜಿಯವರು ಜೀವಿಸಿದ್ದರು. ಆ ಕಾಲದ ಹೋರಾಟದಲ್ಲಿ, ಗಾಂಧಿಯುಗದ ಅಸಹಕಾರ ಯೋಗದಲ್ಲಿ ಅವರು ಹೆಜ್ಜೆಗಳಿಟ್ಟಿದ್ದಾರೆ. ಈ ಸನ್ನಿವೇಶಗಳಲ್ಲಿಯೇ ಅವರು ಮಹಾತ್ಮಗಾಂಧಿ ಅವರ ಸನಿಹದಲ್ಲಿ ಸುಳಿದಾಡಿದ್ದಾರೆ. ಹಾಗೂ ದೇಶದ ಭವಿಷ್ಯ ಕುರಿತು ಅವರೊಂದಿಗೆ ಮಾತಾಡಿದ್ದಾರೆ.

ವಿಭಿನ್ನ ವಯೋಮಾನದ, ವಿಭಿನ್ನ ವ್ಯಕ್ತಿತ್ವದ ವ್ಯಕ್ತಿಗಳು ಶರ್ಮಾಜಿಯವರ ಇಡೀ ಜೀವನ ಯಾನದ ಕಾಲಘಟ್ಟಗಳಲ್ಲಿ ನಾನಾ ಪ್ರಭಾವ ಬೀರಿ ಹೋಗಿದ್ದಾರೆ. ಶರ್ಮಾಜಿಯವರು ಅವರ ಆ ಪ್ರಭಾವಕ್ಕೆ ಅವರ ಪ್ರೀತಿಗೆ – ಸ್ನೇಹಕ್ಕೆ, ವಾತ್ಸಲ್ಯಕ್ಕೆ ಒಳಗಾದವರು. ಇದರಿಂದಾಗಿಯೇ ಅವರು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ಸಾರ್ಥಕ ಮೂರ್ತಿಯಾದರು. ಡಿ.ವಿ. ಗುಂಡಪ್ಪ, ಗಾಂಧೀಜಿ, ಪಟ್ಟಾಭಿ ಸೀತಾರಾಮಯ್ಯ, ಹೋಸಕೋಟೆ ಕೃಷ್ಣಶಾಸ್ತ್ರಿ, ಸ್ವಾಮಿ ಶ್ರದ್ಧಾನಂದರು, ಆಂಧ್ರ ಕೇಸರಿ ಟಿ.ಪ್ರಕಾಶಂ, ಸಾಹಿತಿಗಳು, ಕಲಾಕಾರರು, ದೇಶಪ್ರೇಮಿಗಳು, ನಾಯಕ–ನಟರು, ಪತ್ರಿಕಾ ಸಂಪಾದಕರು, ವಿಮರ್ಶಕರು, ಸಾಮಾಜಿಕ–ರಾಜಕೀಯ ವ್ಯಕ್ತಿಗಳು, ಹಾಗೂ ಮಠಾಧೀಶರುಗಳು ಅವರ ಮೇಲೆ ಪ್ರಭಾವ ಬೀರಿದ್ದಾರೆ. ಅನೇಕ ದಿವ್ಯ, ಭವ್ಯ ವ್ಯಕ್ತಿತ್ವಗಳಿಂದ ಶರ್ಮ ಪ್ರಭಾವಿತರಾಗಿದ್ದಾರೆ.

ಶರ್ಮರ "ಮನೆಮಾತು ತೆಲುಗು". 'ಪೆದ್ದಿಲ್ಲು' ಎಂಬುದು ಅವರ ಮನೆತನದ ಮನೆಯ ಹೆಸರು. 'ಪೆದ್ದಿಲ್ಲು' ತೆಲುಗುಪದ ಇದರ ಕನ್ನಡ ಅರ್ಥ 'ದೊಡ್ಡಮನೆ' ಎಂಬುದಾಗಿದೆ. ಶರ್ಮಾಜಿಯವರ ಐವರು ತಾತಂದಿರಲ್ಲಿ ಮೂರನೆಯವರು ಸಂಸ್ಕೃತ ವಿದ್ವಾಂಸರಾದ ರಾಜಗೋಪಾಲಾಚಾರ್ಯರು. ಅವರು ಮನೆಯಲ್ಲಿ ಸಂಸ್ಕೃತ ಪಾಠಶಾಲೆ ಸ್ಥಾಪಿಸಿದರು. ಅಂದಿನಿಂದ ಆ ದೊಡ್ಡಮನೆಗೆ "ಪಾಠಶಾಲೆ ಮನೆ" ಎಂದು ಹೆಸರಿಸಲಾಯಿತು. ಆ ಮನೆಯನ್ನು "ಗುರುಕುಲ" ಎಂದೂ ಕರೆಯಲಾಗುತಿತ್ತು. ಶರ್ಮಾಜಿಯವರ ಕುಟುಂಬದ ಹಿರಿಯರೆಲ್ಲ ಮಹಾನ್ ಪಂಡಿತರು, ವಿದ್ವಾಂಸರು, ಕಲಾವಿದರೂ ಆಗಿದ್ದರು.

ಈ ಅಂಶಗಳೆಲ್ಲ ಶರ್ಮರಿಗೆ ಅವಶ್ಯಕವಾದ ಶಕ್ತಿಸಾಮರ್ಥ್ಯಗಳ ಬೀಜ ಬಿತ್ತಿದವು. ಶರ್ಮಾಜಿಯವರಿಗೆ ಅವರ ಎಂಟನೇ ವಯಸ್ಸಿನಲ್ಲಿ 'ಬ್ರಹ್ಮೋಪದೇಶ'ವಾಯಿತು[3]. ದೊಡ್ಡ ಮನೆಯಲ್ಲಿ ಉತ್ಸವದ ಸಿದ್ಧತೆಗಳು ಆರಂಭಗೊಂಡವು. ಎಲ್ಲೆಲ್ಲೂ ಸಡಗರ–ಸಂಭ್ರಮ, ಉಪನಯನದ ಕಾರ್ಯ ಐದು ದಿನಗಳಕಾಲ ನಡೆಯಿತು. ಪುರೋಹಿತರು ಸಂಧ್ಯಾ

ವಂದನೆಯ ಮಂತ್ರಗಳನ್ನು ಹೇಳಿಕೊಟ್ಟು ಕಂಠಪಾಠ ಮಾಡಿಸಿದರು. ಉಪನಯನದ ಆನಂತರ ಚಿಕ್ಕಬಳ್ಳಾಪುರದ ಸಮೀಪದಲ್ಲಿ ಗೌರಿಬಿದನೂರಿಗೆ ಹೋಗುವ ರಸ್ತೆಯಲ್ಲಿರುವ 'ರಂಗಸ್ಥಳ'ಎಂಬ ತೀರ್ಥಕ್ಷೇತ್ರಕ್ಕೆ ಹೋದರು. ಆ ಪ್ರಕೃತಿಯ ಮಡಿಲಲ್ಲಿ ಶ್ರೀರಂಗನಾಥನ ದೇವಾಲಯವಿದೆ. ರಂಗನಾಥನ ಸೇವೆ ಮಾಡುತ್ತಾ, ಪೂಜೆ ಸಲ್ಲಿಸುತ್ತಾ ಬಾಲ್ಯದ ದಿನಗಳನ್ನು ಅಲ್ಲಿ ಕಳೆದರು. ರಂಗನಾಥನಿಗೆ ಪ್ರತಿದಿನ ಪೂಜೆ ನಡೆಯುತ್ತಿತ್ತು. ಶರ್ಮರು ಶನಿವಾರ ಮತ್ತು ಭಾನುವಾರ ತಪ್ಪದೇ ಅಲ್ಲಿಗೆ ಹಾಜರಾಗುತ್ತಿದ್ದರು. ತಮ್ಮ ಬಾಲ್ಯದ ಬಹಳಷ್ಟು ಸಮಯವನ್ನು ರಂಗನಾಥನ ದೇವಾಲಯದ ಸುತ್ತ ಮುತ್ತಲಿನ ಪರಿಸರದಲ್ಲಿ ಕಳೆದಿದ್ದಾರೆ[4].

'ಬ್ರಹ್ಮೋಪದೇಶ'ದ ಆನಂತರ ದತ್ತು ತಂದೆತಾಯಿಗಳು ಶರ್ಮಾಜಿಯವರನ್ನು "ಸೊಲಿಕುಂಟೆ" ಎಂಬ ಹಳ್ಳಿಗೆ ಕರೆದುಕೊಂಡುಹೋದರು. ಈ ಸ್ಥಳಾಂತರದಿಂದ ಅವರು ಬಹಳ ಸಂತೋಷಗೊಂಡರು. ಆದರೆ ಆ ಸಂತೋಷದ ಜೊತೆಗೆ ದುಃಖವೂ ಕಾಡತೊಡಗಿತು. ತನ್ನ ತಂದೆತಾಯಿಗಳಿಂದ ತಾನು ದೂರನಾದೆನೆಂಬ ನೋವು ಒಂದು ಕಡೆಯಾದರೆ, ತನ್ನ ಬಾಲ್ಯದ ಜೀವನ ತಾಣ, 'ರಂಗಸ್ಥಳ' ಕ್ಕೆ ಹೋಗುವ ಅವಕಾಶ ಕೈಜಾರುತ್ತಿದೆಯಲ್ಲಾ ಎಂಬ ನೋವು ಮತ್ತೊಂದು ಕಡೆ. ಆದರೂ ಸೊಲಿಕುಂಟೆಯಲ್ಲಿ ಮುಂದಿನ ಬದುಕು ಸಾಗಿತು. ಶರ್ಮರ ತಾತಂದಿರು ಸೊಲಿಕುಂಟೆಯಲ್ಲಿ ವಾಸವಾಗಿದ್ದರು. ಇವರು ಸೊಲಿಕುಂಟೆಯ ಪಕ್ಕದಲ್ಲಿದ್ದ ಗೊಲ್ಲಹಳ್ಳಿಯ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಶರ್ಮಾಜಿಯವರು ಚಿಕ್ಕ ವಯಸ್ಸಿನಲ್ಲಿ ರಾಮಾಯಣ ಹಾಗೂ ಸಂಸ್ಕೃತದ ನೂರಾರು ಶ್ಲೋಕಗಳನ್ನು ತಮ್ಮ ದತ್ತು ತಾಯಿಯಿಂದ ಕಲಿತಿದ್ದರು. ಅವುಗಳನ್ನು ಹೇಳಿ ಹಲವಾರು ಮಂದಿಯನ್ನು ಶರ್ಮರು ಮೆಚ್ಚಿಸಿದರು.

ಶರ್ಮಾಜಿಯವರ ಅಜ್ಜಿ ಅಲಮೇಲಮ್ಮನವರು ಶರ್ಮರಿಗೆ ದತ್ತು ತಾಯಿ ಆಗಿದ್ದರು. ಅವರು ಶರ್ಮರ ಮೇಲೆ ಗಾಢವಾದ ಪ್ರಭಾವ ಬೀರಿದ್ದಾರೆ, ಶರ್ಮರನ್ನು ಪ್ರಯೋಜಕ ವ್ಯಕ್ತಿಯನ್ನಾಗಿ ಮಾಡುವಲ್ಲಿ ಅವರ ಅಜ್ಜಿ ವಹಿಸಿದ ಪಾತ್ರ ಮಹತ್ವದ್ದಾಗಿದೆ. ಶರ್ಮಾಜಿಯವರ ತಾತಂದಿರಿಗೆ ಗೊಲ್ಲಹಳ್ಳಿಯಿಂದ ಹೊಸಹಳ್ಳಿಗೆ ವರ್ಗಾವಾಯಿತು. ಈ ಸಂದರ್ಭದಲ್ಲಿ ಶರ್ಮಾಜಿ ಮತ್ತು ಅವರ ತಾತಂದಿರು ಸೊಲಿಕುಂಟೆಯಿಂದ ವಾಟದ ಹೊಸಹಳ್ಳಿಗೆ ಬಂದರು. ವಾಟದ ಹೊಸಹಳ್ಳಿಯ ಈಚಲು ಮರದ ವನ, ತಿರುಮಲರಾಯನ ಬೆಟ್ಟ, ಅದರ ತಪಲಲ್ಲಿ ಇದ್ದ ಒಡ್ಡು ಈ ರೀತಿಯ ಪರಿಸರ ಅವರ ಮೇಲೆ ಗಾಢ ಪ್ರಭಾವ ಬೀರಿತು. ಜೀವನಕ್ಕೊಂದು ಉತ್ತಮ ಸಂಸ್ಕಾರ ಒದಗಿಸಿತು.

ಶರ್ಮಾಜಿಯವರು ವಾಟದ ಹೊಸಹಳ್ಳಿಯಲ್ಲಿದ್ದಾಗ 'ಶ್ರೀನಿವಾಸಾಚಾರ್ಯ ಸ್ವಾಮಿ' ಎಂಬ ವೃದ್ಧರು ಅವರ ಮೇಲೆ ಗಾಢ ಪ್ರಭಾವ ಬೀರಿದರು. ಅವರ ಪ್ರಭಾವದಿಂದ 'ರಘುವಂಶ' ದ ಸಾರವಾದ ಮೂವತ್ತೈದು ಶ್ಲೋಕಗಳನ್ನು ಕಂಠಪಾಠ ಮಾಡಿದರು. ಅವರ ಪಾಲಿಗೆ ವಾಟದ ಹೊಸಹಳ್ಳಿಯು ಗುರುಕುಲದ ವಾಸದಂತಿತ್ತು.

ಶ್ರೀನಿವಾಸಾಚಾರ್ಯರು ಶರ್ಮರ ಆರಂಭದ ಗುರುಗಳಾಗಿದ್ದರು; ಬಾಲ್ಯದ ದಿನಗಳಲ್ಲಿ ಅಗಾಧವಾದಪ್ರಭಾವ ಬೀರಿದ್ದರು. ಈ ಅವಧಿಯಲ್ಲಿ ಅವರು ಸಂಸ್ಕೃತದ ನೂರಾರು ಶ್ಲೋಕಗಳನ್ನು ಕಲಿತರು. ಆ ಶ್ರೀನಿವಾಸಾಚಾರ್ಯರ ಜೊತೆಗೆ ಅವರ ಜೀವನದಲ್ಲಿ ಬಂದ ಮತ್ತೊಬ್ಬ ಗುರುಗಳೆಂದರೆ 'ಪಾಪಮ್ಮ ಅಕ್ಕಸಾಲೆ'. ಪಾಪಮ್ಮನಿಗೆ ಓದು ಬರಹ ಬಾರದು, ಆದರೂ ಆಕೆಯ ಮಾತುಗಳಲ್ಲಿ ಸಾವಿರ ವರ್ಷಗಳು ಜನ ನಡೆಸಿದ ಸಾರ್ಥಕ ಬದುಕಿನ ಅನುಭವದ ಸಾರವಿರುತ್ತಿತ್ತು. ವಾಟದ ಹೊಸಹಳ್ಳಿಯ 'ಬಸವಣ್ಣನ ಗುಡಿಯಲ್ಲಿ' ಶರ್ಮರ ಶಾಲಾ ಶಿಕ್ಷಣ ಆರಂಭವಾಯಿತು.(ಅಂದಿನ ಕಾಲದಲ್ಲಿ ಮಠ ಅಥವಾ ದೇವಾಲಯಗಳಲ್ಲಿ ಶಾಲೆಯು ನಡೆಯುತ್ತಿತ್ತು) ಈ ವೇಳೆಯಲ್ಲಿ ಶರ್ಮರು ಶಾಲೆ ಮತ್ತು ಮನೆಯನ್ನು ಬಿಟ್ಟರೆ ನರಸಿಂಗರಾಯರ ಮನೆ ಮತ್ತು ಕಾವೇರಮ್ಮನವರ ಮನೆಯಲ್ಲಿ ಸಮಯ ಕಳೆಯುತ್ತಿದ್ದರು.

ನರಸಿಂಗರಾಯರಿಗೆ ನಾರಾಯಣನೆಂಬ ಮಗನಿದ್ದ. ಇವನು ಚಿಕ್ಕಬಳ್ಳಾಪುರದಲ್ಲಿ ಇಂಗ್ಲೀಷ್ ಮಾಧ್ಯಮ ಶಾಲೆಯಲ್ಲಿ ಓದುತ್ತಿದ್ದ. ರಜಾ ಕಾಲದಲ್ಲಿ ನಾರಾಯಣರಾಯರು ಹಳ್ಳಿಗೆ ಬರುತ್ತಿದ್ದರು. ಈ ಸಂದರ್ಭದಲ್ಲಿ ಶರ್ಮರಿಗೆ ಇಂಗ್ಲೀಷ್ ಕಲಿಯುವ ಆಸೆಯಾಯಿತು. ಆಗ ಶರ್ಮಾಜಿಯವರು ನಾರಾಯಣರಾಯರೇ, "ನೀವು ನನಗೆ ಸ್ವಲ್ಪ ಇಂಗ್ಲೀಷ್ ಕಲಿಸಿಕೊಡಬೇಕು" ಎಂದು ಕೇಳಿಕೊಂಡರು. ಆಗ ತಿ.ತಾ ಶರ್ಮರ ಎ.ಬಿ,ಸಿ.ಡಿ ಅಕ್ಷರ ಅಭ್ಯಾಸ ಆರಂಭವಾಯಿತು. ಶರ್ಮರಿಗೆ ಇಂಗ್ಲೀಷ್ ಶಿಕ್ಷಣ ಕಲಿಯಬೇಕೆಂಬ ಹಂಬಲ ಹೆಚ್ಚಾಯಿತು. ಇದೇ ಸಂದರ್ಭದಲ್ಲಿ ಶರ್ಮರ ತಂದೆಯವರನ್ನು ಗೌರಿಬಿದನೂರು ತಾಲ್ಲೂಕು ಕಛೇರಿಗೆ ವರ್ಗಮಾಡಲಾಯಿತು. ಆಗ ಶರ್ಮರು ತಮ್ಮ ತಂದೆಯವರೊಂದಿಗೆ ಗೌರಿಬಿದನೂರಿಗೆ ಬಂದು ನೆಲೆಸಿದರು. ಚಿಕ್ಕಬಳ್ಳಾಪುರದ 'ಎ.ವಿ ಸ್ಕೂಲ್' ಅಂದರೆ 'ಆಂಗ್ಲೋವರ್ನಾಕ್ಯೂಲರ್ ಸ್ಕೂಲ್' ನಲ್ಲಿ ಒಂದನೇ ತರಗತಿಗೆ ಪ್ರವೇಶ ಪಡೆದರು[5]. ಒಂದು ಮತ್ತು ಎರಡನೇ ತರಗತಿಗಳ ವಿದ್ಯಾಭ್ಯಾಸವನ್ನು ಆಂಗ್ಲ ಭಾಷಾ ಮಾಧ್ಯಮದಲ್ಲಿ ಮುಗಿಸಿದರು. ಚಿಕ್ಕಬಳ್ಳಾಪುರದಲ್ಲಿ ಶಾಲೆಗೆ ಹೋಗಲು ಊಟ ಮತ್ತು ವಸತಿಗಾಗಿ ಬಂಧುಗಳೊಬ್ಬರ ಮನೆಯಲ್ಲಿ ವ್ಯವಸ್ಥೆ ಕಲ್ಪಿಸಲಾಯಿತು. ಇಲ್ಲಿ ವಿದ್ಯಾರ್ಥಿ ಶರ್ಮ ತುಂಬ ಕಷ್ಟದ ದಿನಗಳನ್ನು ಕಂಡರು. ರಾಜಗೋಪಾಲಾಚಾರ್ಯರ ಪತ್ನಿಯಾದ ಬಚ್ಚಮ್ಮನವರು ಒಂದು ದಿನ ಚಿಕ್ಕಬಳ್ಳಾಪುರಕ್ಕೆ ಆಗಮಿಸಿದರು; ಶರ್ಮರು ಉಳಿದು ಕೊಂಡಿದ್ದ ಮನೆಯಲ್ಲಿಯೇ ತಂಗಿದರು.

ಆ ಮನೆಯಲ್ಲಿ ಶರ್ಮರು ನಡೆಸುತ್ತಿದ್ದ ಜೀವನವನ್ನು ಕಣ್ಣಾರೆ ಕಂಡು ಮರುಗಿದರು; ದುಃಖಪಟ್ಟರು. 'ರಾಗಿ ಬೀಸುವುದು; ಬಟ್ಟೆ ಒಗೆಯುವುದು; ಎಂಜಲು ಬಳಿಯುವುದು; ಭತ್ತ ಕುಟ್ಟುವುದು; ಈ ಕೆಲಸಕ್ಕಾ ನೀವು ಮಗುವನ್ನು ಚಿಕ್ಕಬಳ್ಳಾಪುರಕ್ಕೆ ಕಳುಹಿಸಿದ್ದು?'. ಎಂದು ಅವರ ತಾತಂದಿರಿಗೆ ಪತ್ರ ಬರೆದರು. ಇದರ ಫಲ ಶರ್ಮರು ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು. ಚಿಕ್ಕಬಳ್ಳಾಪುರದಿಂದ

ಬೆಂಗಳೂರಿಗೆ ಬಂದ ಮೇಲೆ ಅಲ್ಲಿ ಉಪ್ಪಾರಪೇಟೆ ಪೋಲೀಸ್ ಠಾಣೆಯ ಬದಿಯಲ್ಲಿದ್ದ 'ಆರ್ಯನ್ ಲೋವರ್ ಸೆಕೆಂಡರಿ ಶಾಲೆ' ಯಲ್ಲಿ ಮೂರನೇ ತರಗತಿಗೆ ಪ್ರವೇಶ ಪಡೆದರು. ಅವರ ಸೋದರಮಾವ ಆನೂರು ಶ್ರೀನಿವಾಸಾಚಾರ್ಯರು ಶರ್ಮರನ್ನು ಆ ಶಾಲೆಗೆ ಸೇರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಈ ಶಾಲೆಯಲ್ಲಿ ಕಲಿಯುತ್ತಿದ್ದಾಗ ಶರ್ಮರು ಶಾಲೆಯ ಸ್ಥಾಪಕರಾದ ಶ್ರೀ ಗೋಪಾಲಾಚಾರ್ಯರ ವ್ಯಕ್ತಿತ್ವದಿಂದ ಪ್ರಭಾವಿತಗೊಂಡರು. ಶ್ರೀ ಗೋಪಾಲಾಚಾರ್ಯರ ಸನಾತನ ಧರ್ಮಾಭಿಮಾನ, ರಾಷ್ಟ್ರಪ್ರೇಮ, ಭಾರತೀಯ ಸಂಸ್ಕೃತಿಯ ಅಭಿಮಾನ, ಆತ್ಮಗೌರವ, ಸ್ವಾಭಿಮಾನ ಇವೆಲ್ಲಾ ಗುಣಗಳು ಬಾಲಕ ವಿದ್ಯಾರ್ಥಿ ಶರ್ಮರ ಮನ ಸೂರೆಗೊಂಡವು. ಗೋಪಾಲಾಚಾರ್ಯರ ವ್ಯಕ್ತಿತ್ವವು ಅವರಲ್ಲಿ ರಾಷ್ಟ್ರಾಭಿಮಾನದ ಬೀಜಬಿತ್ತಿತು. ಆರ್ಯನ್ ಶಾಲೆಯಲ್ಲಿ ವಿದ್ಯಾಭ್ಯಾಸಮಾಡಿ 'ಲೋಯರ್ ಸೆಕೆಂಡರಿ' ಪರಿಕ್ಷೆಯಲ್ಲಿ ಉತ್ತೀರ್ಣರಾದರು. ಲಂಡನ್ ಮಿಷನ್ ಸ್ಕೂಲ್ ಸೇರಿದರು. 'ಇ.ಪಿ ರೈಸ್' ಅಲ್ಲಿ ಆಗ ಪ್ರಾಂಶುಪಾಲರಾಗಿದ್ದರು.

ಶರ್ಮರು ಕಣ್ಣಿನ ದೃಷ್ಟಿದೋಶ ತೊಂದರೆಯಿಂದಾಗಿ ಕಪ್ಪುಹಲಗೆಯ ಮೇಲೆ ಬರೆದದ್ದನ್ನು ದೂರದಲ್ಲಿ ಕುಳಿತು ಓದಲು ಕಷ್ಟಪಡುತ್ತಿದ್ದರು. ಇದನ್ನು ಗಮನಿಸಿದ ಪ್ರಾಂಶುಪಾಲರಾದ ಇ.ಪಿ ರೈಸ್‌ರವರೇ ಶರ್ಮರನ್ನು ಕಣ್ಣಿನ ತಜ್ಞರ ಬಳಿ ಕರೆದುಕೊಂಡು ಹೋಗಿ, ಪರೀಕ್ಷೆ ಮಾಡಿಸಿ, ಕನ್ನಡಕಕ್ಕೆ ವ್ಯವಸ್ಥೆ ಮಾಡಿದರು[6]. ಅಂದಿನಿಂದ ಶರ್ಮರವರು ಕನ್ನಡಕ ಹಾಕಲು ಆರಂಭಿಸಿದರು. ಅವರು ಲಂಡನ್ ಮಿಷನ್ ಶಾಲೆಯಲ್ಲಿ ನಾಲ್ಕು ವರ್ಷದ ವಿದ್ಯಾಭ್ಯಾಸವನ್ನು ಮುಗಿಸಿದರು. ಮುಂದಿನ ಎರಡು ವರ್ಷಗಳ ಪ್ರೌಢ ಶಿಕ್ಷಣವನ್ನು ಹಾಸನದಲ್ಲಿ ಮುಂದುವರೆಸಿದರು.

ಪ್ರೌಢ ಶಾಲೆಯಲ್ಲಿ ಓದುತ್ತಿದ್ದಾಗಲೇ 'ರಾಜಿ' ಕಣ್ಣುಸೆಳೆದಳು. ರಾಜಾ–ರಾಜಿ ಈ ನಾಮ ಸಾಮ್ಯ ಸಹಜ ಪ್ರಭಾವಕ್ಕೆ ಒಳಗಾಗಿತು. ರಾಜಿ ಅಪರಿಚಿತಳೇನಲ್ಲ; ಬಂಧು ಸಂಬಂಧಿ. ಈ ಎಳೆಯರ ಸನಿಹತೆ, ಹಿರಿಯರ ನಿರ್ಧಾರದಲ್ಲಿ ಅವರು ಬಾಲ್ಯದಲ್ಲಿಯೇ ದಂಪತಿಗಳಾದರು. ಅದು ಆ ಕಾಲದ ಕುಟುಂಬ ಜೀವನದ ಸಂಪ್ರದಾಯ ಈ ಬಾಲ್ಯ ವಿವಾಹದ ಗಾಂಭೀರ್ಯ–ಪಾವಿತ್ರತೆ–ಅನನ್ಯ ಭಾಂದವ್ಯ ಶರ್ಮರು ಮದ್ರಾಸಿನಲ್ಲಿ ಉದ್ಯೋಗಕ್ಕೆ ಸೇರಿದ್ದು, ರಾಜಿ ಬೆಂಗಳೂರಿನಲ್ಲೇ ಉಳಿದಿದ್ದು–ಆನಂತರ ಮದ್ರಾಸು–ನೀಲಗಿರಿಗಳಲ್ಲಿ ಅವರ ದಾಂಪತ್ಯ ಜೀವನದ ಬೆಳೆಸೋ, ಸಾರ್ಥಕ ಭವ್ಯ ಜೀವನದ ಅಡಿಪಾಯವೋ–ಎಂದೆನಿಸುತ್ತದೆ. ಈ ಸಂದರ್ಭದ ಇಬ್ಬರ ಬರಹಗಳು ಗಮ್ಯ–ಗಂಭೀರ ಉದ್ಬೋಧಕ. (ಶರ್ಮರ ಪತ್ನಿಯಾದ ರಾಜಿಯೆ ಮುಂದೆ ತಿರುಮಲೆ ರಾಜಮ್ಮನಾಗಿ ಖ್ಯಾತಕವಯತ್ರಿ ಬರಹಗಾರ್ತಿಯಾಗಿ 'ಭಾರತಿ' ಎಂಬ ಕಾವ್ಯ ನಾಮಗಳಿಸಿದರು). ವಿವಾಹವು ಹಾಸನದಲ್ಲಿ ನಡೆಯಿತು. ನಂತರ ಹೈಸ್ಕೂಲ್ ವಿದ್ಯಾಭ್ಯಾಸ ಮುಂದುವರಿಸಿ ಎಸ್.ಎಸ್.ಎಲ್.ಸಿಯಲ್ಲಿ ಉತ್ತೀರ್ಣರಾದರು. ಉತ್ತಮ ದರ್ಜೆಯಲ್ಲಿ ಉತ್ತೀರ್ಣ

ರಾದ್ದರಿಂದ ಜಿಲ್ಲಾ ಸ್ಕಾಲರ್‌ಶಿಪ್ ದೊರೆಯಿತು. ಎಸ್.ಎಸ್.ಎಲ್.ಸಿಯ ನಂತರ ಕಾಲೇಜುಶಿಕ್ಷಣ ಪಡೆಯಲು ಮುಂದಾದರು. ಮದ್ರಾಸ್ ವಿಶ್ವವಿದ್ಯಾನಿಲಯದ ಇಂಟರ್ ಮೀಡಿಯಟ್ ಪರೀಕ್ಷೆ ತೆಗೆದುಗೊಂಡರು. ಮರು ವರ್ಷವೇ ಮೈಸೂರು ವಿ.ವಿ ಆರಂಭವಾಯಿತು. ಇಲ್ಲಿ ಮೊದಲನೇ ವರ್ಷದ ಬಿ.ಎ ತರಗತಿಗೆ ಪ್ರವೇಶ ಪಡೆದುಕೊಂಡರು.

ಮೈಸೂರು ವಿಶ್ವವಿದ್ಯಾಲಯದ ಮಹಾರಾಜ ಕಾಲೇಜಿಗೆ ಸೇರಿದರು. ಹಾಸ್ಟಲ್‌ನಲ್ಲಿ ತಮ್ಮ ಹೆಂಡತಿಯ ಅಣ್ಣನವರಾದ ಕಂದಾಡೆ ಕೃಷ್ಣಯ್ಯಂಗಾರರ ಜೊತೆ ಉಳಿದುಕೊಂಡರು. ಹಾಸ್ಟಲಿನಲ್ಲಿ ಪ್ರಿಫೆಕ್ಟ್ ಆಗಿ ಚುನಾಯಿತರಾದರು. ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಅಲ್ಲಿ 'ಭೋಜ ಪ್ರಬಂಧ' ಎಂಬ ನಾಟಕದಲ್ಲಿ ಕುರುಬನಪಾತ್ರ ಅಭಿನಯಿಸಿ ರಾಜ ಜನರ ಮೆಚ್ಚುಗೆ ಗಳಿಸಿದರು. ಕಾಲೇಜಿನಲ್ಲಿದ್ದ ಆ ದಿನಗಳಲ್ಲಿ "ರಾಮಲಿಂಗಾರೆಡ್ಡಿ' ಕೈಲಾಸಂ, ಕಂದಾಡೆ ಕೃಷ್ಣಯ್ಯಂಗಾರರು, ಕಾನಕಾನಹಳ್ಳಿ ವರದಾ ಚಾರ್ಯರು ಮುಂತಾದವರೆಲ್ಲಾ ಶರ್ಮರ ಮೇಲೆ ಪ್ರಭಾವ ಬೀರಿದರು.

ಕಾಲೇಜು ದಿನಗಳಲ್ಲಿ ಶರ್ಮರು 'ಭಾಷಾಂತರ' ವೆಂಬ ಒಂದು ಲೇಖನ ಬರೆದು ಇಡೀ ಕಾಲೇಜಿನಲ್ಲಿ ಖ್ಯಾತಿ ಗಳಿಸಿದರು.ಕಾಲೇಜಿನಲ್ಲಿದ್ದಾಗ ಶರ್ಮರವರಿಗೆ "ಕನ್ನಡವನ್ನು ವ್ಯಾಪಕವಾಗಿ ಕಲಿಯುವ ಆಸೆ" ಉಂಟಾಯಿತು. ಆಗ ಅವರು ತರ್ಕಶಾಸ್ತ್ರಕ್ಕೆ ಬದಲಾಗಿ ಕನ್ನಡವನ್ನು ಅಧ್ಯಯನ ಮಾಡುವುದಾಗಿ ಕಾಲೇಜಿನ ಪ್ರಾಚಾರ್ಯರಾದ 'ಥಾಮಸ್ ಡನ್ ಹ್ಯಾಂ' ರವರಿಗೆ ಮನವಿ ಸಲ್ಲಿಸಿದರು. ಆಗ ಅವರು ಕನ್ನಡದ ಪ್ರೊಫೆಸರ್ ಒಬ್ಬರಿಂದ ಶಿಫಾರಸ್ಸು ಪತ್ರ ತರುವಂತೆ ಹೇಳಿದರು.

'ಬಾಮು ಸುಬ್ಬರಾಯರೆಂಬುವರು' ಕನ್ನಡ ವಿಷಯ ತೆಗೆದುಕೊಳ್ಳಲು ಶರ್ಮರಿಗೆ ಶಿಫಾರಸ್ಸು ಪತ್ರ ನೀಡಿದರು. ಈ ವೇಳೆಯಲ್ಲಿ ವಿದ್ವಾಂಸರಾದ ಕಾನಕಾನಹಳ್ಳಿ ವರದಾ ಚಾರ್ಯರು ಇವರ ಕನ್ನಡದ ಕಲಿಕೆಗೆ ಪೂರ್ಣ ಸಹಾಯ ಮಾರ್ಗದರ್ಶನ ನೀಡಿದರು. ಈ ನಿಟ್ಟಿನಲ್ಲಿ 'ಥಾಮಸ್ ಡೆನ್‌ಹ್ಯಾಂ', ಬಾಮು ಸುಬ್ಬರಾಯರು, ಕಾನಕಾನಹಳ್ಳಿ ವರದಾಚಾರ್ಯರೂ ಶರ್ಮರ ಕನ್ನಡ ಅಭಿಮಾನ ಮತ್ತು ಅಧ್ಯಯನಕ್ಕೆ ಭದ್ರ ಬುನಾದಿ ಹಾಕಿದರು[7].

ಬಿ.ಎ ಪದವಿಯ ಮೊದಲನೇ ವರ್ಷದ ನಂತರ ಇದ್ದಕ್ಕಿದಂತೆ ಅವರು ವಿಷಮಶೀತಜ್ವರಕ್ಕೆ (ಟೈಫಾಯಿಡ್) ತುತ್ತಾದರು. ಬಡತನವು ಕಾಡತೊಡಗಿತು. ವಿಧಿ ಇಲ್ಲದೆ ನಿಸ್ಸಹಾಯಕರಾಗಿ ಮನನೊಂದು ತಮ್ಮ ಕಾಲೇಜು ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿಬಿಟ್ಟರು. ಆನಂತರ ಬೆಂಗಳೂರಿಗೆ ಬಂದರು. ಶರ್ಮಾಜಿಯವರು ಭಾರತೀಯ ಜನತೆ ತಮ್ಮ ಬಾಳಿನ ಎಲ್ಲಾ ಕ್ಷೇತ್ರಗಳಲ್ಲೂ ಪಾಶ್ಚಿಮಾತ್ಯರನ್ನು ಅನುಕರಣೆ ಮಾಡುತ್ತಿರುವುದನ್ನು ಖಂಡಿಸಿದರು. ಈ ದಿಸೆಯಲ್ಲಿ ಮೈಸೂರಿನಲ್ಲಿ ಭಾರತೀಯ ಸಂಸ್ಕೃತಿ–ನಡೆ–ನುಡಿಯನ್ನು ಉಳಿಸಿ–ಬೆಳೆಸುವುದಕ್ಕಾಗಿ 'ಪೂರ್ವಮುಖೀ' ಎಂಬ

ಸಂಘವನ್ನು ಕಟ್ಟಿದರು. ನಮ್ಮ ಸಂಸ್ಕೃತಿ, ನಮ್ಮ ಪರಂಪರೆ, ನಮ್ಮ ಇತಿಹಾಸ ದರ್ಶನ, ನಮ್ಮ ಕಲೆ,-ನಮ್ಮ ಧರ್ಮ, ಈ ನೆಲೆಯ ವಿಚಾರ ಕುರಿತ ಚರ್ಚೆ ಮಾಡುವುದು ಪೂರಕ ಗ್ರಂಥಗಳ ಅಧ್ಯಯನ ಮಾಡುವುದು, ಮುಂತಾದ ಕಾರ್ಯಕ್ರಮಗಳನ್ನು ಪೂರ್ವಮುಖೀ ನಡೆಸುತ್ತಿತ್ತು.

ಆಕಸ್ಮಿಕವಾಗಿ ಒದಗಿಬಂದ ಪರಿಸ್ಥಿತಿಯ ಪ್ರಭಾವದಿಂದಾಗಿ ಶರ್ಮರು ತಮ್ಮ ಶಿಕ್ಷಣವನ್ನು ಅರ್ಧಕ್ಕೇ ನಿಲ್ಲಿಸಿದರು. ದುಃಖ, ನೋವು, ತುಮುಲ ಈ ಮನಃಕ್ಲೇಶ ಅವರನ್ನು ಕಾಡತೊಡಗಿತು. ಮೈಸೂರು ಬಿಟ್ಟು ಬೆಂಗಳೂರಿಗೆ ಬಂದರು. ಬೆಂಗಳೂರಿನಲ್ಲಿ "ಅಮೆಚೂರ್ ನಾಟಕ ಮಂಡಳಿಗೆ" ಸೇರಿಕೊಂಡರು. ಅವರ ತುಮುಲವನ್ನು ನೀಗಿ ಉತ್ಸಾಹ ತುಂಬುವ ನೆಲೆ ಆಯಿತು. ಹೊಸ ಹೊಸ ಸ್ನೇಹಿತರ ಪರಿಚಯವಾಯಿತು. ಕವಿಗಳು, ಲೇಖಕರು, ನಟರು, ಗಾಯಕರು ಹೀಗೆ ನಾನಾ ಕಲಾವಿದರ ಪರಿಚಯವಾಯಿತು. ಹೊಸ ಪ್ರಪಂಚದಲ್ಲಿ ತಮ್ಮನ್ನು ತೊಡಗಿಸಿಕೊಂಡು ನೋವು ದುಃಖಗಳನ್ನು ಮರೆತರು ಇದೇ ವೇಳೆಯಲ್ಲಿ ಅವರಿಗೆ "ಟಿ.ಪಿ.ಕೈಲಾಸಂ" ರವರ ಆತ್ಮೀಯ ಸ್ನೇಹ ಉಂಟಾಯಿತು.

ಶರ್ಮರು ನಾಟಕ ಮಂಡಳಿಯನ್ನು ಪ್ರವೇಶಿಸಿದ ಸಂದರ್ಭದಲ್ಲಿ ಕೇವಲ ಇಂಗ್ಲೀಷ್ ನಾಟಕಗಳನ್ನು ಆಡುತ್ತಿದ್ದರು. ಆನಂತರ ತೆಲುಗು ನಾಟಕಗಳು ಆರಂಭಗೊಂಡವು ಈ ವೇಳೆಯಲ್ಲಿ ಶರ್ಮರವರು ನಾಟಕ ಮಂಡಳಿಯವರನ್ನು ಕನ್ನಡದ ನಾಟಕಗಳನ್ನೂ ಆಡಬೇಕೆಂದು ಒತ್ತಾಯಿಸಿದರು. ತಾವೇ ಕನ್ನಡದ ಐತಿಹಾಸಿಕ ನಾಟಕಗಳನ್ನು ಬರೆದು ರಂಗಭೂಮಿಯ ಮೇಲೆ ತರಬೇಕೆಂದು ನಿರ್ಧರಿಸಿದರು. ಈ ನಿಟ್ಟಿನಲ್ಲಿ ದ್ವಿಜೇಂದ್ರ ಲಾಲ್‌ರಾಯ್ ಬರೆದ 'ದುರ್ಗಾದಾಸ್' ನಾಟಕವನ್ನು ರಂಗಭೂಮಿಗೆ ಅನುಕೂಲವಾಗುವಂತೆ ತಿದ್ದಿ, ಬದಲಾವಣೆಯನ್ನು ಮಾಡಲಾಯಿತು.

ಅಮೆಚೂರ್ ನಾಟಕ ಮಂಡಳಿಯವರು 'ವಿಜಯನಗರ ಪತನ' ವೆಂಬ ತೆಲುಗು ನಾಟಕವನ್ನು ಆಡುತ್ತಿದ್ದರು. ಇದರಿಂದ ಪ್ರೇರೇಪಿತರಾದ ಶರ್ಮರು "ಶ್ರೀರಂಗಪಟ್ಟಣದ ಪತನ" ನಾಟಕ ಬರೆದರು[8]. ಈ ವೇಳೆಗೆ ಕೈಲಾಸಂ ಹೇಳಿ ಬರೆಸಿದ ನಾಟಕ 'ಟೊಳ್ಳುಗಟ್ಟಿ' ಯೂ ಸಿದ್ಧವಾಯಿತು. ಆ ನಾಟಕದಲ್ಲಿ ಶರ್ಮರು ಮೊದಲು 'ಹಿರಣ್ಣಯ್ಯ' ನ ಪಾತ್ರವನ್ನು ನಿರ್ವಹಿಸಿದರು. ನಂತರ 'ಗುಂಡೂರಾಯನ' ಪಾತ್ರ ನಿರ್ವಹಿಸಿದರು. ಈ ನಾಟಕಾಭಿನಯದ ಮೂಲಕ ಶರ್ಮರು ಅಧಿಕೃತವಾಗಿ 'ರಂಗಭೂಮಿ' ಪ್ರವೇಶಿಸಿದರು. ಕೈಲಾಸಂರವರ ಪ್ರೀತಿ-ವಾತ್ಸಲ್ಯಕ್ಕೆ ಒಳಗಾದರು ಈ ಸ್ನೇಹದಿಂದಾಗಿ ಶರ್ಮರ ಜ್ಞಾನ ಪ್ರಪಂಚ ದಿಗಂತ ಕಂಡಿತು. ಅಮೆಚೂರ್ ನಾಟಕ ಮಂಡಳಿಯ ಪ್ರವೇಶವು 'ಪಾಂಡುರಂಗಿಕೋದಂಡರಾಯ'ರ (ಪಿ.ಕೊದಂಡರಾಯ) ಪರಿಚಯಕ್ಕೆ ಕಾರಣವಾಯಿತು; ಪರಿಚಯ ಸ್ನೇಹಕ್ಕೆ ತಿರುಗಿತು. ಅವರು ಮೇಧಾವಿಗಳಾಗಿದ್ದರು. ಇವರ ಸ್ನೇಹದಿಂದಾಗಿ ಶರ್ಮರಲ್ಲಿ ನವಚೈತನ್ಯ ಉಂಟಾಯಿತು. ಬಳ್ಳಾರಿಯ ಪ್ರಸಿದ್ದ ವಕೀಲರಾಗಿದ್ಧ ತಾಡಪತ್ರಿ

ರಾಘವಾಚಾರ್ಯ ಹಾಗೂ ಎ.ವಿ ವರದಾಚಾರ್ಯರು ನಾಟಕ ಸಾರ್ವಭೌಮರಾಗಿದ್ದರು. ಇವರು ನವಕಲಾವಿದರು ಹಾಗೂ ರಸಜ್ಞರಾಗಿದ್ದ ಶರ್ಮರಿಗೆ ಸನಿಹದವರಾಗಿದ್ದರು.

ಒಮ್ಮೆ 'ಅರ್ಥಸಾಧಕ' ಪತ್ರಿಕೆಯ ಸಂಪಾದಕರಾದ ಎಲ್ ಸ್ವಾಮಿಯವರು "ಕೌಟಿಲ್ಯನ ಅರ್ಥಶಾಸ್ತ್ರ" ವನ್ನು ಕನ್ನಡಕ್ಕೆ ಭಾಷಾಂತರಿಸುವಂತೆ ಶರ್ಮರನ್ನು ಪ್ರೇರೇಪಿಸಿದರು. ಹಾಗೂ ಆ ಭಾಷಾಂತರವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವುದಾಗಿ ತಿಳಿಸಿದರು. ಶ್ರೀ ಭಾಷ್ಯಂ ರಾಮಾಚಾರ್ಯ "ಕರ್ನಾಟಕ ಪ್ರಕಾಶಿಕಾ ಮನೆತನದ ಹಿರಿಯರ" ಸಹಾಯದಿಂದ ಕೌಟಿಲ್ಯನ ಅರ್ಥಶಾಸ್ತ್ರವನ್ನು ಶರ್ಮ ಕನ್ನಡಕ್ಕೆ ಭಾಷಾಂತರಿಸಿದರು. ಆದರೆ ಕಾರಣಾಂತರಗಳಿಂದಾಗಿ ಅದು ಪ್ರಕಟಗೊಳ್ಳಲಿಲ್ಲ. ಹಸ್ತ ಪ್ರತಿಯೂ ಶರ್ಮರಿಗೆ ಹಿಂದಕ್ಕೆ ಬರಲಿಲ್ಲ. ನಾಟಕ-ಬರಹ ಬದುಕುಗಳು ಹೀಗೆಯೇ ಸಾಗುತ್ತಾ ಬರುತಿತ್ತು. ಒಂದು ದಿನ ಭಾರತ ಸರ್ಕಾರದ ಪ್ರಾಚ್ಯವಸ್ತು ಮತ್ತು ಶಿಲಾಶಾಸನಗಳ ವಿಮರ್ಶಾ ಶಾಖೆಯ ವಿಭಾಗದ ಮುಖ್ಯ ಅಧಿಕಾರಿಯಾಗಿದ್ದ ರಾವ್ ಬಹುದ್ದೂರ್ ಹೊಸಕೋಟೆ ಕೃಷ್ಣಶಾಸ್ತ್ರಿಗಳು ಬೆಂಗಳೂರಿಗೆ ಕಂದಾಡೆ ರಾಘವಚಾರ್ಯರ ಮನೆಗೆ ಬಂದಿದ್ದಾಗ ಶರ್ಮಾರನ್ನು ಕಂಡು, ವಿಚಾರಿಸಿ, ಮದ್ರಾಸಿನ ಪ್ರಾಚ್ಯವಸ್ತು ವಿಮರ್ಶಾ ಶಾಖೆಯ, "ಶಿಲಾಶಾಸನಗಳ ಪ್ರಕಟನಾ ಕೆಲಸ ಮಾಡುತ್ತಿಯಾ?" ಎಂದು ಕೇಳಿದರು. ಶರ್ಮರಿಗೆ ಅಪೂರ್ವವಾದ ಜ್ಞಾನದೀಪ್ತಿಯ ಪ್ರಾಪ್ತಿ ಒದಗಿತು. 'ಕರುಣಾಳು ಆ ಬೆಳಕು, ಮುಸುಕು ಹರಿದು ಪ್ರಾಚೀನ ಇತಿಹಾಸದ ದಿವ್ಯಜೀವನದ ದೀಪ್ತಿಯನ್ನು ಶರ್ಮರಿಗೆ ಕರುಣಿಸಿತು. ಭಾಷೆ, ಭಾವ, ಬದುಕು, ಜೀವನ, ಸಂಸ್ಕೃತಿ ಏನೆಲ್ಲಾ ಇದೆಯೋ ಆ ವಿಶ್ವರೂಪದರ್ಶನ ಶರ್ಮರಿಗಾಯಿತು'.

ಮದರಾಸಿನ ಪ್ರಾಚ್ಯವಸ್ತು ವಿಮರ್ಶಾ ಶಾಖೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಹಿರಿಯ ಸಹಾಯಕರಾದ ಗೋಪಿಶೆಟ್ಟಿಪಾಳ್ಯಂ ವೆಂಕೋಬರಾಯರು 'ಡ್ಯೂಟಿ ರಿಪೋರ್ಟ್' ನೀಡಿ ಕಛೇರಿಯ ಕೆಲಸಗಾರರನ್ನು ಪರಿಚಯಿಸಿದರು[9]. ಮದ್ರಾಸಿನಲ್ಲಿ ಶರ್ಮಾಜಿಯವರ ಈ ಸರ್ಕಾರಿ ನೌಕರಿ ಒಂದು ಅಮೂಲ್ಯ, ಅನರ್ಘ್ಯ, ವಸ್ತು-ವಿಚಾರ ಸಾಗರಕ್ಕೆ ಅವರನ್ನು ಕೊಂಡೊಯ್ಯಿತು. ಈ ವೇಳೆಯಲ್ಲಿ ಅವರು ಕೃಷ್ಣಶಾಸ್ತ್ರಿಗಳ ಮನೆಯಲ್ಲಿ ಉಳಿದುಕೊಂಡು ಕರ್ತವ್ಯಕ್ಕೆ ಹಾಜರಾಗುತ್ತಿದ್ದರು. ಈ ಸಂದರ್ಭದಲ್ಲಿ ಕೃಷ್ಣಶಾಸ್ತ್ರಿಗಳು ಸಿಂಹಾಚಲದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಆನಂತರ ಶರ್ಮರವರು ಕಾರ್ಯ ನಿಮಿತ್ತ ಸಿಂಹಾಚಲಕ್ಕೆ ಹೊರಟು ಹೋದರು.

ಮದ್ರಾಸಿನ ಕೇಂದ್ರ ಕಛೇರಿಯಲ್ಲಿದ್ದಾಗ ಶಿಲಾಶಾಸನಗಳನ್ನು, ತಾಮ್ರಶಾಸನಗಳನ್ನೂ ಹಾಗೂ ಪ್ರಾಚೀನ ಶಿಲಾಶಾಸನಗಳ ಪ್ರತಿಗಳನ್ನು ನೋಡಿದರು. ಕಛೇರಿಯ ವಾರ್ಷಿಕ ವರದಿಗಳನ್ನು ವೀಕ್ಷಿಸಿ ಅವುಗಳ ಅಧ್ಯಯನ ಮಾಡಿದರು. ಸಂಗ್ರಹವಾಗಿದ್ದ ಶಾಸನಗಳ ಪಟ್ಟಿ, ಶಾಸನ ಸಿಕ್ಕಿದ ಸ್ಥಳ, (ಗ್ರಾಮ ಹಳ್ಳಿ) ಅದು ಯಾವ ಕಾಲದ್ದು? ಯಾವ ರಾಜನ ಆಳ್ವಿಕೆಯ ಕಾಲದ್ದು? ಶಾಸನದ ಉದ್ದೇಶ? ಈ ಎಲ್ಲಾ ವಿಚಾರಗಳನ್ನು ಓದಿ ತಿಳಿದು

ಕೊಳ್ಳಲು ಆರಂಭಿಸಿದರು. ಇತಿಹಾಸ ಎಂಬ ಮಾತಿನ ಹೊಸ ಪ್ರಪಂಚದ ಪ್ರವೇಶ ಮಾಡಿದರು ಶರ್ಮಾಜಿ.

ವಾರ್ಷಿಕ ವರದಿಗಳ ಎರಡನೆಯ ಭಾಗದಲ್ಲಿ ಸಂಗ್ರಹ ಮಾಡಿದ ಶಾಸನಗಳ ಅಧ್ಯಯನದ ಫಲಶೃತಿ ಇರುತ್ತಿತ್ತು. ಚರಿತ್ರೆಯ ಅನೇಕ ಸಂಶಯ, ವಿಚಾರಗಳನ್ನು ಬಗೆಹರಿಸಲು ಇವುಗಳಲ್ಲಿ ಮಾಹಿತಿ ಸಿಗುತ್ತಿದ್ದವು. ಇತಿಹಾಸಕಾರರ ಗಮನಕ್ಕೆ ಬಾರದೇ ಇದ್ದ ಅನೇಕ ವಿವರಗಳೂ ಸ್ಪಷ್ಟವಾಗುತ್ತಿದ್ದವು. ಸಾಮಾಜಿಕ ವಿಚಾರಗಳು, ಕಲೆ–ಸಾಹಿತ್ಯಗಳಿಗೆ ಸಂಬಂಧಪಟ್ಟ ನಾನಾ ವಿಚಾರಗಳೂ ಕೂಡ ಈ ಶಾಸನಗಳ ಅಧ್ಯಯನಗಳಿಂದ ದೊರೆಯುತ್ತಿದ್ದವು. ಈ ವರದಿಗಳನ್ನು ಓದಿ ಮುಗಿಸುವುದರೊಳಗಾಗಿ ಸಿಂಹಾಚಲಕ್ಕೆ ಹೊಗಬೇಕಾಯಿತು ಶಾಸ್ತ್ರಿಗಳ ಸೂಚನೆಯಂತೆ.

ಸಿಂಹಾಚಲವೆಂಬುದು ಆಂಧ್ರಪ್ರದೇಶದ ವಿಶಾಖಪಟ್ಟಣ ಜಿಲ್ಲೆಯಲ್ಲಿದೆ. ಇದು ವಿಶಾಖ ಪಟ್ಟದಿಂದ ಹತ್ತು ಮೈಲಿ ದೂರದಲ್ಲಿರುವ ಒಂದು ಯಾತ್ರಾ ಸ್ಥಳ. ಶರ್ಮಾಜಿಯವರು ಸಿಂಹಾಚಲಕ್ಕೆ ಬರುವ ವೇಳೆಗೆ ಕೃಷ್ಣಶಾಸ್ತ್ರಿಗಳೂ ಸಿಂಹಾಚಲ ದಲ್ಲಿದ್ದರು. ಶರ್ಮ ಮತ್ತು ಕೃಷ್ಣಶಾಸ್ತ್ರಿಗಳಿಬ್ಬರೂ ಕೂಡಿ "ಸಿಂಹಾಚಲದ ಪ್ರಾಚೀನ ಪ್ರಸಿದ್ಧ ದೇವಾಲಯದಲ್ಲಿದ್ದ ಅನೇಕ ಶಾಸನಗಳ ಪುನಃ ಪಠಣ ಮಾಡಿದರು". ಗುರು – ಶಿಷ್ಯ ಕೂಡಿ ಶಾಸನ ಅಧ್ಯಯನ ಕಾರ್ಯ ಮುಂದುವರಿಸಿದರು. ಅವರು ಸಿಂಹಾಚಲದ ಬೆಟ್ಟದ ಮೇಲಿರುವ ವರಾಹನರಸಿಂಹಸ್ವಾಮಿ ದೇವಾಲಯದ ಪ್ರವಾಸಿ ಮಂದಿರದಲ್ಲಿ ಉಳಿದುಕೊಂಡಿದ್ದರು. ಇಲ್ಲಿ ಕೃಷ್ಣಶಾಸ್ತ್ರಿಗಳು ಶಾಸನದ ಅಕ್ಷರ, ಅಕ್ಷರ ಒಂದೊಂದೇ ಸಾಲುಗಳನ್ನು ಓದುತ್ತಾ ಹೋದರು. ಶರ್ಮರು ಅದನ್ನು ಬರೆದುಕೊಳ್ಳುತ್ತ ಹೋದರು. ಹೀಗೆ 'ಕೇಳಿಸಿಕೊಂಡು ಬರೆಯುವ ಕೆಲಸ' ಆರಂಭವಾಯಿತು. ಕೃಷ್ಣಶಾಸ್ತ್ರಿಗಳು ಶಾಸನಗಳನ್ನು ಓದುತ್ತಾ ಹೋಗುತ್ತಿದ್ದರು. ಅವರ ಬಳಿಯಲ್ಲಿ ನಿಂತು ಶರ್ಮರು ಬರೆದುಕೊಳ್ಳುತ್ತಿದ್ದರು. ಈಗಾಗಲೇ ಶಾಸನಗಳನ್ನು ಓದಿ, ಅದರಲ್ಲಿನ ವಿಚಾರಗಳನ್ನು ಕುರಿತು ಬರೆದಿಡಲಾಗಿತ್ತು. ಅವುಗಳನ್ನು ಮತ್ತೆ ಓದಿ ಅದರಲ್ಲಿದ್ದ ಸಂಶಯಗಳನ್ನು ಮೂಲ ಶಾಸನಗಳನ್ನು ಓದಿ ಬಗೆಹರಿಸಲಾಯಿತು. ಪ್ರಾಚೀನ ಶಾಸನಗಳನ್ನು ಓದಿ ತಪ್ಪುಗಳನ್ನು ತಿದ್ದಲಾಯಿತು. ಹೊಸ ಶಾಸನಗಳನ್ನು ಓದಿ ಅವುಗಳ ಪಾಠಗಳನ್ನು(ವರದಿಗಳನ್ನು) ತಯಾರಿಸುವ ಕಾರ್ಯ ಮುಂದುವರಿಯಿತು. ಇದು ಶರ್ಮರಿಗೆ ಇತಿಹಾಸದ ಆತ್ಮದರ್ಶನದ ವಿಶ್ವರೂಪದ ಜ್ಞಾನ ದೀಪ್ತಿಯಾಯಿತು.

ಕೆಲವು ಸಂದರ್ಭಗಳಲ್ಲಿ ಕೃಷ್ಣಶಾಸ್ತ್ರಿಗಳೇ ಬರೆಯುತ್ತಿದ್ದರು. ಶರ್ಮರು ಶಾಸನಗಳನ್ನು ಓದುತ್ತಿದ್ದರು. ತಪ್ಪುತಪ್ಪಾಗಿ ಓದಿದಾಗ ಶಾಸ್ತ್ರಿಗಳು ಅದನ್ನು ಸರಿಮಾಡಿ ಸರಿಯಾಗಿ ಓದಲು ಹೇಳುತ್ತಿದ್ದರು. ಇಲ್ಲಿ ಶರ್ಮರು ಪ್ರಾಚೀನ ಶಾಸನಗಳನ್ನು ಓದುವ, ಅದರ ಪ್ರತಿಯನ್ನು ತೆಗೆಯುವ ಕೆಲಸವನ್ನು ಕರಗತ ಮಾಡಿಕೊಂಡರು. ವರಾಹನರಸಿಂಹ ದೇವಾಲಯದ ಸುತ್ತಮುತ್ತ ಸುಮಾರು ಇನ್ನೂರೈವತ್ತಕ್ಕೂ ಹೆಚ್ಚು

ಶಾಸನಗಳು ದೊರೆತ್ತಿದ್ದು, ಅವುಗಳನ್ನು ಓದಿ ವರದಿಗಳನ್ನು ತಯಾರಿಸಿದವರು. ದಿನದಕೆಲಸ ಮುಗಿದ ನಂತರ ಸಂಜೆ ಶರ್ಮ ಮತ್ತು ಶಾಸ್ತ್ರಿಗಳು ಬೆಟ್ಟದಮೇಲೆ ಅಡ್ಡಾಡುತ್ತಿದ್ದರು. ಆಗ ಶಾಸ್ತ್ರಿಗಳು ಶರ್ಮರಿಗೆ ಬಹಳಷ್ಟು ಶಾಸನಗಳಲ್ಲಿ ಶಾಸನ ಹುಟ್ಟಿದ ವರ್ಷವನ್ನು ಸೂಚಿಸುವ ಪದ್ಯವು "ಶಾಕಾಬ್ದೇ ವಸುನಾಗ ಭೂ ಶಶಿಮಿತೇ" ಎಂದು ಆರಂಭವಾಗುತ್ತದೆ ಎಂದು ತಿಳಿಸಿದ್ದರು. (ಉದಾ ವಸ್ತು ಎಂದರೆ 8, ನಾಗ ಎಂದರೆ 8, ಭೂ ಎಂದರೆ 1, ಶಶಿ ಎಂದರೆ 1 ಇವುಗಳನ್ನೆಲ್ಲ ಕ್ರಮವಾಗಿ ಜೋಡಿಸಿದರೆ 8811 ಎಂದಾಗುತ್ತದೆ.)

ಸಿಂಹಾಚಲದ ಕಾರ್ಯದ ಆನಂತರ ಮದ್ರಾಸಿಗೆ ಹೋಗಬೇಕಾಯಿತು. ಆ ಮಾರ್ಗ ಮಧ್ಯೆ ಗುಂಟೂರು-ಅಮರಾವತಿಗಳಿಗೆ ಹೋದರು .ಅಮರಾವತಿಯ ಧರಣಿಕೋಟೆಯಲ್ಲಿ ಒಂದು ಶಾಸನದ ಅಧ್ಯಯನ ಮಾಡಿದರು. ಶಾಸ್ತ್ರಿಗಳ ಆದೇಶದಂತೆ, ಬಾಪಟ್ಲಾ ತಾಲ್ಲೂಕಿನ ಪೆದ್ದಚೆರುಕೂರಿಗೆ ಹೋಗಿ, ಅಲ್ಲಿನ ಕಂಬಶಾಸನವನ್ನು ನೋಡಿ ಅಧ್ಯಯನ ಮಾಡಿ, ವರದಿ ತಯಾರಿಸಿ ಶರ್ಮರು ಮದರಾಸಿಗೆ ವಾಪಸ್ಸಾದರು. ಆ ವೇಳೆಗೆ ಬೆಂಗಳೂರಿನಿಂದ ಪತ್ನಿ ರಾಜಮ್ಮನವರು ಮದರಾಸಿಗೆ ಬಂದರು. ಪ್ರತ್ಯೇಕವಾದ ಬಾಡಿಗೆ ಮನೆ ಮಾಡಿ ಮೊದಲ ಬಾರಿಗೆ ಗ್ರಹಸ್ಥ ಜೀವನ ನಡೆಸಲು ಸಿದ್ಧತೆ ಸಾಗಿತ್ತು. ಆ ವೇಳೆಯಲ್ಲಿ, "ತಾತಂದಿರು ಮಲಗಿದ್ದಾರೆ; ತಕ್ಷಣ ಹೊರಟು ಬರುವುದು" ಎಂಬ ತುರ್ತು ಪತ್ರ ಬಂತು. ತಕ್ಷಣವೇ ಬೆಂಗಳೂರಿಗೆ ಹೊರಟು, ಬೆಂಗಳೂರಿನಲ್ಲಿ ಅಣ್ಣಂದಿರನ್ನು ಕಂಡು ಚಿಕ್ಕಬಳ್ಳಾಪುರಕ್ಕೆ ಹೋದರು. ತಾತಂದಿರ ಅಂತ್ಯ ಸಂಸ್ಕಾರವನ್ನು ವಿಧ್ಯುಕ್ತವಾಗಿ ಮುಗಿಸಿ ಮದರಾಸಿಗೆ ಹಿಂತಿರುಗಿದರು. ವೆಲ್ಲಾಳ ಬೀದಿಯಲ್ಲಿ ಮನೆ ಮಾಡಿದರು. ಇವರ ಮನೆಯ ಹತ್ತಿರದಲ್ಲೇ ಪ್ರಸಿದ್ಧ ಬೆನಗಲ್ ರಾಮರಾಯರ ಮನೆ. ಶರ್ಮಾಜಿ ಅವರ ಸ್ನೇಹ ಗಳಿಸಿದರು. ರಾಮರಾಯರ ಮನೆಯಲ್ಲಿ ಕನ್ನಡಕ್ಕೆ, ಕರ್ನಾಟಕಕ್ಕೆ ಸಂಬಂಧಪಟ್ಟ ಸ್ಥಿತಿಗತಿ -ಪರಿಹಾರ ಚರ್ಚೆಗಳು ನಡೆಯುತ್ತಿದ್ದವು. ಅವುಗಳಲ್ಲಿ ಶರ್ಮರು ತಪ್ಪದೆ ಭಾಗವಹಿಸುತ್ತಿದ್ದರು.

ಬೆನಗಲ್ ರಾಮರಾಯರು ಮದರಾಸು ಸರಕಾರದ ಸೀನಿಯರ್ ಕನ್ನಡ ಟ್ರಾನ್ಸ್‌ಲೇಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಅವರು ಒಮ್ಮೆ ಅಂಗ್ಲಭಾಷೆಯಲ್ಲಿ ಸಿದ್ಧವಾಗುತ್ತಿದ್ದ ಪತ್ರಾವಳಿಗಳನ್ನು ಶರ್ಮರಿಗೆ ಕೊಟ್ಟು, "ಇವುಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿ ತಿಂಗಳಿಗೆ 50-60 ರೂ. ಸಂಪಾದಿಸಿ" ಎಂದರು. ಶರ್ಮರು ಆ ಕೆಲಸ ಮಾಡುವರೇ? ಇವರ ಮಾತಿಗೆ ಉತ್ತರಿಸುತ್ತಾ, "ನೀವು ನನ್ನಲ್ಲಿ ಇಟ್ಟಿರುವ ಕಾಳಜಿಗೆ ನಾನು ಅಭಾರಿ; ಆದರೆ ಬ್ರಿಟಿಷರು ಭಾರತವನ್ನು ಶಾಶ್ವತವಾಗಿ ಆಳಲು ಪ್ರಯತ್ನಿಸುತ್ತಿದ್ದಾರೆ. ಭಾರತೀಯರ ಕೋಟಿಗಟ್ಟಲೆ ಹಣವನ್ನು ತಮ್ಮ ಯುದ್ಧಕ್ಕಾಗಿ ವ್ಯಯ ಮಾಡುತ್ತಿದ್ದಾರೆ. ನಾಲ್ಕುಕಾಸಿನ ಆಸೆಗಾಗಿ ಶತ್ರು ಸರ್ಕಾರಕ್ಕೆ ಸಹಾಯ ಮಾಡುವುದೇ? ಇದು ಪಾಪದ ಕೆಲಸ ಆಲ್ಲವೇ?" ಈ ರೀತಿಯ ಕಾರ್ಯ "ದೇಶದ್ರೋಹ ಎಂದು ನನ್ನ

ಭಾವನೆ[10]". ಎಂದು ಉತ್ತರ ಕೊಟ್ಟರು. ಅವರ ಮಾತು ಕೇಳಿದ ರಾಯರ ಮನಸ್ಸು – ಎದೆಗಳೆರಡೂ ಕಂಪಿಸಿದವು.

ಧರ್ಮಪುರಿಯಿಂದ ಪೆನ್ನಾಗರ–ಹಳೆಅಗ್ರಹಾರಕ್ಕೆ ಹೋದರು. ಅಲ್ಲಿಂದ ದಕ್ಷಿಣ ಕನ್ನಡ ಜಿಲ್ಲೆಯನ್ನು ತಲುಪಿದರು. 1921ನೇ ವರ್ಷದ ಅಂತ್ಯಕಾಲ. ಗುತ್ತಿಯಲ್ಲಿ ಶಿಲಾ ಶಾಸನಗಳ ಅನ್ವೇಷಣ ಕಾರ್ಯದಲ್ಲಿ ನಿರತರಾಗಿದ್ದರು. ಶರ್ಮರು ಇಲ್ಲಿ ಕಾರ್ಯ ನಿರ್ವಹಿಸುವಾಗ, ಇವರ ಪತ್ನಿ ತಿರುಮಲೆ ರಾಜಮ್ಮನವರು ಪ್ರತಿದಿನವೂ ಮಧ್ಯಾಹ್ನ ಹನ್ನೆರಡು ಘಂಟೆ ಸುಮಾರಿಗೆ ಊಟದ ಬುತ್ತಿ ತೆಗೆದುಕೊಂಡು ಶರ್ಮರು ಕಾರ್ಯ ನಿರ್ವಹಿಸುತಿದ್ದ ಸ್ಥಳಕ್ಕೆ ಬರುತ್ತಿದ್ದರು. ದಂಪತಿಗಳು ಜೊತೆಯಾಗಿ ಊಟ ಮುಗಿಸಿ ಕೊಂಚ ವಿಶ್ರಾಂತಿ ತೆಗೆದುಕೊಂಡು, ಅಪರಾಹ್ನದ ಕೆಲಸವನ್ನೂ ಮುಗಿಸಿ, ಕತ್ತಲಾಗುವ ವೇಳೆಗೆ ಗೂಡು ಸೇರಿಕೊಳ್ಳುತ್ತಿದ್ದರು.

ಒಂದು ದಿನ ರಾಜಮ್ಮನವರು ಊಟ ತಂದರು. ಸತಿಪತಿಗಳು ಊಟ ಮಾಡಿದರು ರಾಜಮ್ಮನವರು ತಮ್ಮ ಹೆಸರಿಗೆ ಬಂದಿದ್ದ ಪತ್ರವನ್ನು ಶರ್ಮರಿಗೆ ಕೊಟ್ಟರು. ಅದು ಅಹಮದಾಬಾದಿನಿಂದ ಬಂದಿತ್ತು. ಅಹಮದಾಬಾದಿನಲ್ಲಿ ನಡೆಯಲಿರುವ "ಅಖಿಲ ಭಾರತ ಸಂಗೀತ ಸಮ್ಮೇಳನ" ಕ್ಕೆ ವಿದುಷಿ ರಾಜಮ್ಮನವರಿಗೆ ಬಂದಿದ್ದ ಆಹ್ವಾನ ಪತ್ರ ಅದಾಗಿತ್ತು. ರಾಜಮ್ಮನವರು ಸಂಗೀತ ಸಮ್ಮೇಳನಕ್ಕೆ ಹೋಗಲು ಬಯಸಿದರು. ರಾಜಮ್ಮನವರು "ನಾನೊಬ್ಬಳೆ ಹೋಗುವುದಕ್ಕಾಗುವುದೆ?" ಅಂದರು. ನೀವು ಜೊತೆಗೆ ಬನ್ನಿ ಎಂದರು. ಆಗ, ಶರ್ಮಾಜಿ, "ರಾಜಿ ಸಂಗೀತ ಸಮೇಳನಕ್ಕೆ ಹೋಗುವುದೆಂದರೂ ಒಂದೇ, ಅಲ್ಲಿ ನಡೆಯಲಿರುವ ಕಾಂಗ್ರೆಸಿಗೆ ಹೋಗುವುದೆಂದರೂ ಒಂದೇ" ನಾನು ಸರ್ಕಾರಿ ನೌಕರ. ನಾನು ಅಹಮದಾಬಾದಿಗೆ ಬಂದರೆ ಕೆಲಸಕ್ಕೆ ಸಂಚಕಾರ ಎಂದರು. ನಂತರ ಆಲೋಚಿಸಿ, ಕ್ರಿಸ್‌ಮಸ್ ರಜೆ ಕೋರಿ ಮದರಾಸಿನ ಕಛೇರಿಗೆ ತಂತಿ ಕಳಸಿದರು. ಯಾತ್ರೆಗೆ ಸಿದ್ಧರಾಗಿ ಸತಿಪತಿಗಳು ಉಲ್ಲಾಸದಿಂದ ರೈಲು ನಿಲ್ದಾಣಕ್ಕೆ ಹೋದರು. ರೈಲು ನಿಲ್ದಾಣದ ವಾತಾವರಣವನ್ನು ಕಂಡು ಶರ್ಮಾಜಿ ಇಬ್ಬೆರಗಾದರು. ಅಲ್ಲಿ ಜನಸಾಗರ ಜಯಕಾರ ಹಾಕುತ್ತಾ, ರೈಲಿಗಾಗಿ ಕಾಯುತ್ತಿದ್ದು ಪ್ರತಿಯೊಂದು ರೈಲುಡಬ್ಬಿಯೂ ದೇಶಭಕ್ತರಿಂದ ತುಂಬಿ ತುಳುಕುತ್ತಿವೆ. ಗಾಡಿ ಹತ್ತಲು ಸತಿಪತಿಗಳಿಬ್ಬರೂ ಹರಸಾಹಸಪಟ್ಟರು. "ಗುತ್ತಿಯಿಂದ ಅಹಮದಾಬಾದಿನ ಈ ಪ್ರಯಾಣ ಶರ್ಮರ ಬದುಕಿನ ಯಾತ್ರೆಯಲ್ಲೊಂದು ಅಪೂರ್ವ ಕಾಲಘಟ್ಟ". ರೈಲು ಗುಂತಕಲ್ ತಲುಪಿತು. ನಿಲ್ದಾಣದ ತುಂಬ ಅಹಮದಾಬಾದ್ ಯಾತ್ರಿಕರ ಮಹಾದಂಡು. ಜಯಕಾರಗಳಂತೂ ಮುಗಿಲು ಮುಟ್ಟುತ್ತಿದ್ದವು. ದಂಪತಿಗಳಿಬ್ಬರೂ ಗಾಡಿಯಿಂದಿಳಿದರು. ರೈಲುಗಾಡಿ ಬದಲಿಸಿ,ಆ ರೈಲಿನಲ್ಲಿ ಮುಂಬಯಿ ತಲುಪಿದರು.

ಅಂದು ರಾತ್ರಿಯೇ ಅಲ್ಲಿಂದ ಅಹಮದಾಬಾದಿನತ್ತ ಪ್ರಯಾಣ ಬೆಳೆಸಿದರು. ಶರ್ಮ ದಂಪತಿಗಳಿಗೆ ಕೊಲಾಬಾ ರೈಲುನಿಲ್ದಾಣ ತಲುಪುವಷ್ಟರಲ್ಲಿ ಒಂದು

ಅಶ್ವಮೇಧಯಾಗ ಮಾಡಿದಂತಾಯಿತು. ಆ ಗುಂಪು, ಆ ಸಂದಣಿ ನೋಡಿ ಶರ್ಮರು ದಂಗು ಬಡಿದರು. "ನಿಜವಾಗಿಯೂ ಈ ರೈಲು ಹತ್ತಲಾಗುವುದೇ" ಎಂದು ಅನುಮಾನಿಸಿದರು. ಅಂತು-ಇಂತು ರೈಲುಹತ್ತಿ ಅಹಮದಾಬಾದ್ ತಲುಪಿದರು. ಸಂಗೀತ ಸಮ್ಮೇಳನಕ್ಕೆ ಬಂದವರನ್ನು ತಂಗುವ ಸ್ಥಳಕ್ಕೆ ತಲುಪಿಸಲು ಸ್ವಯಂ ಸೇವಕರು ಅಲ್ಲೇ ಕಾದಿದ್ದರು. ಅವರ ಸಹಾಯದಿಂದ ಬಿಡಾರ ತಲುಪಿದರು.

ರಾಜಮ್ಮನವರು ಗಾಂಧೀಜಿಯನ್ನು ಭೇಟಿ ಮಾಡಿದರು. ಅವರ ಗಾಯನವನ್ನು ಕೇಳಿದ ಪ್ರತಿಯೊಬ್ಬರೂ ಹರ್ಷಗೊಂಡರು. ಶರ್ಮರು ಅಹಮದಾಬಾದ್ ಕಾಂಗ್ರೆಸ್ ಸಮ್ಮೇಳನದ ಭವ್ಯತೆಯನ್ನು ಅಲ್ಲಿ ಆವರಿಸಿದ್ದ ದೇಶಭಕ್ತಿಯ ಅನನ್ಯ ವ್ಯಾಪ್ತಿಯನ್ನು ಕಣ್ಣಾರೆ ಕಂಡರು; ಆ ಘೋಷ ಕಿವಿತಾಕಿ ರೋಮಾಂಚನಗೊಂಡರು! ಅವರ ಹೃದಯ ಮಿಡಿತ ಬಡಿತವಾಯಿತು; ಅದಾವುದೋ ಪರಿವರ್ತನ ಅವರಲ್ಲಾಯಿತು!. "ಗಾಂಧೀಜಿಯವರ ಸಾಕ್ಷಾತ್‌ದರ್ಶನ! ಸತ್ಯ-ಧರ್ಮ-ನ್ಯಾಯ-ನೀತಿ ಇತ್ಯಾದಿ ಜೀವನ ಮೌಲ್ಯಗಳ ಮಿಂಚು ಕಂಡಿತವರಿಗೆ" ಶರ್ಮರು ಭಾಗವಹಿಸಿದ್ದ ಮೊಟ್ಟ ಮೊದಲ ಕಾಂಗ್ರೆಸ್ ಸಮ್ಮೇಳನ ಇದಾಗಿತ್ತು. ಗಾಂಧಿಜೀ ಕರ್ನಾಟಕ ಪ್ರಾಂತ್ಯ ಪ್ರತಿನಿಧಿಗಳ ಬಿಡಾರಕ್ಕೆ ಬಂದರು. ಗಾಂಧೀಜಿಯನ್ನು ಅತೀ ಹತ್ತಿರದಿಂದ ಕಂಡು ಧನ್ಯರಾದರು ದಂಪತಿಗಳು. ಸಮ್ಮೇಳನದ ಆನಂತರ ಮದ್ರಾಸಿಗೆ ಹಿಂತಿರುಗಿದರು. ಮದ್ರಾಸಿಗೆ ಹಿಂತಿರುಗುವಾಗಲೇ ಪತ್ರಿಕೆಯೊಂದನ್ನು ಪ್ರಾರಂಭಿಸಿ ಆ ಮೂಲಕ ರಾಷ್ಟ್ರಸೇವೆ ಮಾಡಲು ನಿಶ್ಚಯಿಸಿದರು. ಕೆಲವು ಕಾಲ ನೌಕರಿಯನ್ನು ಮುಂದುವರೆಸಿ ಆನಂತರ ಕೆಲಸಕ್ಕೆ ರಾಜಿನಾಮೆ ಸಲ್ಲಿಸಿ ಬೆಂಗಳೂರಿಗೆ ಬಂದರು. ದೇಶಸೇವೆಯ ಅಂಗವಾಗಿ ಬೆಂಗಳೂರಿನಲ್ಲಿ ಕಂದಾಡೆ ಕೃಷ್ಣಯ್ಯಂಗಾರ್, ಕೋಲಾರ ಸಂಪದ್ಗಿರಿರಾಯರು, ಹರಪನಹಳ್ಳಿ ರಾಮರಾಯರು (ತುಂಟರ ಗುಂಪು) ಸೇರಿ ಆರಂಭಿಸಿದ್ದ "ನ್ಯಾಷನಲ್ ಹೈಸ್ಕೂಲ್" ದೇಶೀಯ ವಿದ್ಯಾ ಶಾಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಶರ್ಮರು ಆ ಶಾಲೆಯಲ್ಲಿ ಕನ್ನಡ ಇತಿಹಾಸ ಪಾಠ ಬೋಧಿಸುತ್ತಿದ್ದರು. ಕನ್ನಡದ ಕವಿ, ಲೇಖಕ ಅ.ನ. ಕೃಷ್ಣರಾಯರು ಅಲ್ಲಿ ಅವರ ಶಿಷ್ಯರಾಗಿದ್ದರು. ಶರ್ಮರು ಪಾಠಮಾಡುತ್ತಿದ್ದ ವೈಖರಿಗೆ ಕಾರ್ಯದರ್ಶಿಗಳಾಗಿದ್ದ ವಿ.ಗೋಪಾಲಸ್ವಾಮಿ ಅಯಂಗಾರ್ಯರು. "ಏನು ಶರ್ಮ, ನೀವೇನು ಪಾಠಮಾಡುವಿರೋ ಇಲ್ಲಾ ಗಾಂಧೀ ಮೈದಾನದ ಭಾಷಣ ಮಾಡುವಿರೋ? ನೀವು ತರಗತಿ ಪ್ರವೇಶಿಸಿದ ಕೂಡಲೆ ಇತರೆ ತರಗತಿಗಳು ಖಾಲಿಯಾಗಿ ಎಲ್ಲಾ ಸುತ್ತ ಜಮಾಯಿಸುತ್ತಾರಲ್ಲಾ......" ಎಂದಿದ್ದರು. ಮದರಾಸಿನಿಂದ ಹಿಂತಿರುಗಿದ ಆನಂತರ ಬೆಂಗಳೂರು ಅವರ ಶಾಶ್ವತ ನೆಲೆಯಾಯಿತು. ಈ ಸಮಯದಲ್ಲಿ ನಾಡಕಟ್ಟುವ ಕಾರ್ಯದಲ್ಲಿ ತೊಡಗಿಸಿಕೊಂಡರು. ಕೆಲವು ಕಾಲ ತುಮಕೂರಿನ ವಕೀಲರಾದ ಕೆ.ರಂಗಯ್ಯಂಗಾರ್ಯರ 'ಮೈಸೂರು ಕ್ರಾನಿಕಲ್' ಪತ್ರಿಕೆಯಲ್ಲಿ ಕೆಲಸ ಮಾಡಿದರು. ನಂತರ ಅದರ ಸಂಪಾದಕರು, ಮಾಲೀಕರೂ ಆದರು. ಮೈಸೂರು

ಕ್ರಾನಿಕಲ್ ತುಮಕೂರಿನಿಂದ ಬೆಂಗಳೂರಿಗೆ ವರ್ಗಾವಾಯಿತು. ಮುಂದೆ ಶರ್ಮರ ನೇತೃತ್ವದಲ್ಲಿ ಮೈಸೂರು ಕ್ಯಾನಿಕಲ್ ಮುಂದುವರೆಯಿತು. 1925 ಆಗಸ್ಟ್ 02 ರ ವಿಜಯದಶಮಿ ಯಂದು ಶರ್ಮರ ಮುಂದಾಳತ್ವದಲ್ಲಿ 'ವಿಶ್ವಕರ್ಣಾಟಕದ ಉದಯ' ವಾಯಿತು. ಮೈಸೂರು ಕ್ರಾನಿಕಲ್ ಮೂರನೇ ಸಂಪುಟದ 44ನೇ ಸಂಚಿಕೆ ಶರ್ಮರ ಸಂಪಾದಕತ್ವದಲ್ಲಿ ಹೊರಹೊಮ್ಮಿತು. ಮೈಸೂರಿನ ಇತಿಹಾಸದ ಪತ್ರಿಕಾ ರಂಗದಲ್ಲಿ ನೂತನ ಶಖೆ ಆರಂಭವಾಯಿತು. ಕನ್ನಡ ಪತ್ರಿಕೆಗೆ ಇದ್ದ ಇಂಗ್ಲಿಷ್ ಹೆಸರನ್ನು ತೆಗೆದು 'ವಿಶ್ವಕರ್ಣಾಟಕ' ಎಂದು ಹೆಸರಿಸಿದರು. 'ಸಮಾಸ್ಥವು ಕರ್ನಾಟಕ' ಎಂಬ ಅರ್ಥದಲ್ಲಿ ತಮ್ಮ ಪತ್ರಿಕೆಗೆ ವಿಶ್ವಕರ್ಣಾಟಕವೆಂಬ ಹೆಸರನ್ನಿಟ್ಟರು. ಎರಡು ದಶಕಗಳ ಕಾಲ ಶರ್ಮರು ಹಲವಾರು ಕಷ್ಟ ಕಾರ್ಪಣ್ಯಗಳ ನಡುವೆ, ಏಳು–ಬೀಳುಗಳ ನಡುವೆ ಪತ್ರಿಕೆ ನಡೆಸಿದರು.

1944–45 ರಲ್ಲಿ ಶರ್ಮರು ಬೆಂಗಳೂರಿನ ನಗರಸಭೆಯ ಸದಸ್ಯರಾಗಿದ್ದರು[11].ಈ ಅವಧಿಯಲ್ಲಿ ದೇವಾಲಯಗಳ ಪರಿಸರ ಸ್ವಚ್ಛತೆ, ಪ್ರಜಾಕಾರ್ಯಗಳ ಸಮರ್ಪಕ ನಿರ್ವಹಣೆ, ಮದ್ಯಸಾರದ ಅಂಗಡಿಗಳಿಗೆ ಅನುಮತಿ ತಡೆ ಮುಂತಾದ ಕಾರ್ಯಗಳನ್ನು ನಿರ್ವಹಿಸಿದರು. 'ಕಾರ್ಪೋರೇಷನ್ ನಿಬಂಧನಾ ಸಮಿತಿ' ಯಲ್ಲಿಯು ಮಹತ್ವದ ಪಾತ್ರವಹಿಸಿದ್ದ ಶರ್ಮರಿಗೆ ಬೆಂಗಳೂರು ನಗರ ಸಭೆಯ ಪ್ರಥಮ ಮೇಯರ್ ಅಗುವ ಅವಕಾಶ ಒದಗಿ ಬಂದಿತ್ತು. ಆದರೆ ಅಧಿಕಾರವನ್ನು ಬಯಸದ ಶರ್ಮಾಜಿ ಆ ಅವಕಾಶವನ್ನು ತುಂಬು ಮನಸ್ಸಿನಿಂದಲೆ ಬೇರೆಯವರಿಗೆ ಬಿಟ್ಟುಕೊಟ್ಟರು. ದಿವಾನರಾದ ಮಿರ್ಜಾ ಇಸ್ಮಾಯಿಲ್ ಮತ್ತು ಶರ್ಮಾಜಿಯವರ ನಡುವೆ ಉತ್ತಮ ಸಂಬಂಧವಿತ್ತು. ಶರ್ಮಾಜಿಯವರ ಬಗ್ಗೆ ಮಿರ್ಜಾರವರಿಗೆ ಗೌರವದ ಭಾವನೆ ಇತ್ತು. ಒಮ್ಮೆ ಶರ್ಮರು ಅನಾರೋಗ್ಯಕ್ಕೆ ತುತ್ತಾಗಿದ್ದರು. ಆಗ ಮಿರ್ಜಾರವರೆ ಶರ್ಮರ ಮನೆಗೆ ಬಂದು ಅವರ ಆರೋಗ್ಯವನ್ನು ವಿಚಾರಿಸಿ ಹೋಗಿದ್ದರು. ಈ ಸಂದರ್ಭದಲ್ಲಿ ಶರ್ಮರ ಆರ್ಥಿಕ ಪರಿಸ್ಥಿತಿಯ ಬಗ್ಗೆ ಅರಿವಿದ್ದ ಮಿರ್ಜಾರವರು ಒಂದು ಕವರಿನಲ್ಲಿ ನೂರು ರೂಪಾಯಿಗಳನ್ನು ಹಾಕಿ ಅವರ ದಿಂಬಿನ ಬಳಿ ಇಟ್ಟು ಹೋಗಿದ್ದರು. ಆನಂತರ ಇದನ್ನು ಕಂಡ ಸ್ವಾಭಿಮಾನಿ ಶರ್ಮರು ಅ ಹಣವನ್ನು ಕೂಡಲೇ ದಿವಾನರಿಗೆ ಹಿಂತಿರುಗಿಸಿದ್ದರು.[12] ಶರ್ಮರು ಸರ್ಕಾರದ ಬಗ್ಗೆ ತೀವ್ರತರವಾದ ಟೀಕೆಗಳನ್ನು ಮಾಡಿದಾಗ ಅವರ ವಿರುದ್ಧ ಕಾನೂನು ರೀತ್ಯ ಕ್ರಮತೆಗೆದು ಕೊಳ್ಳುತ್ತಿದ್ದರೆ ವಿನಃ ಅವರನ್ನು ವೈಯಕ್ತಿಕವಾಗಿ ದ್ವೇಷಿಸುತ್ತಿರಲಿಲ್ಲ. "1951ರಲ್ಲಿ ಕರ್ನಾಟಕ ಸ್ವಾತಂತ್ರ್ಯ ಚಳುವಳಿಯ ಇತಿಹಾಸ ರಚನಾ ಸಮಿತಿ ಅಧ್ಯಕ್ಷ" ರಾಗಿ ಕಾರ್ಯನಿರ್ವಹಿಸಿದರು. ನಿರಂತರ ಪರಿಶ್ರಮದ ಮೂಲಕ ಮಾಹಿತಿಯನ್ನು ಸಂಗ್ರಹಿಸಿದರು. ಬೆಂಗಳೂರು ರಾಷ್ಟ್ರೋತ್ಥಾನ ಪರಿಷತ್ತಿನಲ್ಲಿ ಸಂಶೋಧನಾ ವೇದಿಕೆಯನ್ನು ಸ್ಥಾಪಿಸಿ ಇತಿಹಾಸ, ಸಂಸ್ಕೃತಿಗಳ ಚಿಂತನ–ಮಂಥನಕ್ಕೆ ಸ್ಫೂರ್ತಿ ನೀಡಿದರು. ಉನ್ನತ ಸಂಶೋಧನೆಗಳು ನಡೆಯಲು ಕಾರಣಕರ್ತರಾದರು. 1969ರಿಂದ ಬದುಕಿನ ಕೊನೆಯವರೆಗೂ ಮಿಥಿಕ್ ಸೊಸೈಟಿಯ ಅಧ್ಯಕ್ಷರಾಗಿ ಸೇವೆ

ಸಲ್ಲಿಸಿದರು. ಬದುಕಿನ ಕೊನೆಯ ಕಾಲಘಟ್ಟದಲ್ಲಿ ಶರ್ಮರು ತಮ್ಮನ್ನು ತಾವು ವಿಮರ್ಶಿಸಿಕೊಳ್ಳುತ್ತಾ... "ವಿವಾಹವಾಗಿ 50 ವರ್ಷಗಳಾದವು ಮೊದಲ ಆರು ವರ್ಷಗಳನ್ನು ಬಿಟ್ಟರೂ 50 ವರ್ಷಗಳ ಕಾಲ ನಾನೂ ನಮ್ಮಾಕೆಯೂ ದಾಂಪತ್ಯ ಜೀವನ ನಡೆಸಿದ್ದೇವೆ. ಸತಿಪತಿಗಳಂತೆ, ದೇಶಸೇವಕರಂತೆ, ದೈವಭಕ್ತರಂತೆ, ಸದ್ಗೃಹಸ್ತರಂತೆ ಜೀವನ ನಡೆಸಿದ್ದೇವೆ; ನಡೆಸುತ್ತಿದ್ದೇವೆ. ನಡೆಸಿದ ಜೀವನಾವಧಿಯಲ್ಲಿ ರಾಷ್ಟ್ರನಾಯಕರನೇಕರ ಪರಿಚಯ ಪ್ರಚಾರ ಪಡೆದಿದ್ದೇನೆ; ಹಲವು ಪ್ರಮುಖ ನಾಯಕರ ವಾತ್ಸಲ್ಯಾನುಗ್ರಹ ಹಾಗೂ ಅಸಂಖ್ಯಾತ ಸ್ನೇಹಿತರ ಪ್ರೀತಿ ಔದಾರ್ಯಗಳಿಗೆ ಪಾತ್ರರಾಗಿದ್ದೇವೆ. ನಮಗೆ ಶತ್ರುಗಳೊಬ್ಬರೂ ಇಲ್ಲವೆಂದು ಹೇಳುವವರೆಗೂ ಹೋಗಬಲ್ಲೆ, ಯಾವ ಗೃಹಸ್ಥಜೀವನವೂ ಸಮತಲ,ಸಮಸ್ತಿತಿಯಿಂದ ಕೂಡಿರುವುದಿಲ್ಲ; ಏರುತಗ್ಗು ಗಳಿಂದ ಕೂಡಿರುತ್ತದೆ. ಸದಾ ಸಮೃದ್ಧವಾಗಿರುವುದಿಲ್ಲ. ಆಗಾಗ ಕೊರತೆಗಳಿರುತ್ತದೆ. ಜೀವನವೆಲ್ಲ ಸುಖ ಚಕ್ರವಲ್ಲ; ಹಾಗಾಗೆ ಅದು ತುದಿ ಮೊದಲಿಲ್ಲದ ದುಃಖ ಸೂತ್ರವೂ ಅಲ್ಲ. ಸುಖದುಃಖಗಳು ಹಗಲು-ರಾತ್ರಿಗಳಂತೆ ಒಂದನ್ನೊಂದು ಹಿಂಬಾಲಿಸುತ್ತವೆ. ನಮ್ಮ ಜೀವನವಾದರೂ ಈ ಸಹಜ ನಿಸರ್ಗ ನಿಯಮದಿಂದ ಭಿನ್ನವಾಗಿಲ್ಲ". ಎಂದಿದ್ದರು. "ಆಡಿಸಿದಾತ ಆಟ ಮುಗಿಸಿದ" ಕನ್ನಡಿಗರಡಿಯಾಳಿನ ಪ್ರಾಣಪಕ್ಷಿ ಹಾರಿಹೋಯಿತು. 1973 ರ ಅಕ್ಟೋಬರ್ 20ರ ರಾತ್ರಿ 10.30ಕ್ಕೆ ಕೊನೆಯುಸಿರೆಳೆದರು. "ಭಾವಕ್ಕೆ ತಕ್ಕ ತಾಳವೂ ರಾಗವೂ ಉಂಟು, ಭಾರತದ ಏಳಿಗೆಗೆ ಯಾವುದೋ ಕೃತಕೃತ್ಯ, 'ಭಾರತೀ'ಯ ಬಾಳುವೆಗೆ ಆ ನಡಿಗೆಯ ನೃತ್ಯ, ಸಾಹಿತ್ಯ – ಸಂಗೀತ ಸಹಜವಾಗಿದೆ ನಂಟು" ಎಂದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ದ.ರಾ.ಬೇಂದ್ರೆಯವರು ಶರ್ಮಾ ದಂಪತಿಗಳನ್ನು ಬಣ್ಣಿಸಿದ್ದರು. "ಷೋಕಿ ನಾಟಕವಲ್ಲ, ಶೃತಿ ಬಹಳ ನಾಜೋಕು, ದಾಂಪತ್ಯ ಸೌಹಾರ್ದ, ಬೇಡಿ ಬಂದಿರಬೇಕು" ಎಂದಿದ್ದರು.

: ಅಡಿ ಟಿಪ್ಪಣಿ : :

1. ಶರ್ಮರ ಆತ್ಮ ಚರಿತ್ರೆ, ನನ್ನ ಜೀವನ ಮತ್ತು ಧ್ಯೇಯ ಪು.ಸಂ – 04

2. ಅದೇ..... ಪು.ಸಂ – 05

3. ಉದಯವಾಣಿ ನಮ್ಮ ಬೆಂಗಳೂರು ಪುರಾವಣೆ ಜುಲೈ 10 2003 ಪು.ಸಂ – 02

4. ತಿರುಮಲೆ ತಾತಾಚಾರ್ಯಶರ್ಮ ಪು.ಸಂ – 04

5. ಉದಯವಾಣಿ ನಮ್ಮ ಬೆಂಗಳೂರು ಪುರಾವಣೆ ಜುಲೈ 10 2003 ಪು.ಸಂ– 02

6. ಶರ್ಮರ ಆತ್ಮ ಚರಿತ್ರೆ, ನನ್ನ ಜೀವನ ಮತ್ತು ಧ್ಯೇಯ ಪು.ಸಂ– 133

7. ತಿರುಮಲೆ ತಾತಾಚಾರ್ಯಶರ್ಮ ಪು.ಸಂ– 08

8. ಶರ್ಮರ ಆತ್ಮ ಚರಿತ್ರೆ, ನನ್ನ ಜೀವನ ಮತ್ತು ಧ್ಯೇಯ ಪು.ಸಂ– 161

9. ತಿರುಮಲೆ ತಾತಾಚಾರ್ಯಶರ್ಮ ಪು.ಸಂ–16

10. ಶರ್ಮರ ಆತ್ಮ ಚರಿತ್ರೆ, ನನ್ನ ಜೀವನ ಮತ್ತು ಧ್ಯೇಯ ಪು.ಸಂ.– 209

11. ಉದಯವಾಣಿ ನಮ್ಮ ಬೆಂಗಳೂರು ಪುರಾವಣೆ ಆಗಸ್ಟ್ 07 2003 ಪು.ಸಂ– 02

12. ಸಂಶೋಧಕನಿಂದ ತಿ.ತಾ.ಶರ್ಮರ ಮಗನ ಸಂದರ್ಶನ ದಿನಾಂಕ :24–4–2013.

ಅಧ್ಯಾಯ 03

ತಿ. ತಾ. ಶರ್ಮರ ಕರ್ನಾಟಕ ಚರಿತ್ರೆಯ ಶಿಲಾಶಾಸನಗಳ ಶೋಧನೆಗಳು

ಶರ್ಮರು ಪ್ರಾಚೀನ ಶಿಲಾ-ಶಾಸನಗಳನ್ನು ಗುರುತಿಸಿ, ಬರಹವನ್ನು ಓದಿ, ಸಂಗ್ರಹಿಸಿರುವ ಮಾಹಿತಿಗಳು ಕರ್ನಾಟಕದ ಹಾಗೂ ದಕ್ಷಿಣ ಭಾರತದ ಇತಿಹಾಸದ ಅಧ್ಯಯನಕ್ಕೆ ರನ್ನಗನ್ನಡಿಯಂತಿವೆ. ಶರ್ಮರು ಸ್ಥಳೀಯ ಇತಿಹಾಸ, ಸಂಸ್ಕೃತಿ, ಭಾಷೆ, ಬುಡಕಟ್ಟು ಜೀವನ ಸಂಸ್ಕೃತಿ ಮುಂತಾದ ವಿಷಯಗಳ ಬಗೆಗೆ ಅಪಾರ ಮಾಹಿತಿಗಳನ್ನು ಕಲೆಹಾಕಿದರು. ಸಂಗ್ರಹಿಸಲಾಗಿದ್ದ ಶಾಸನಗಳಲ್ಲಿನ ಬರವಣಿಗೆಯನ್ನೂ ಹಾಗೂ ಅನಾಥವಾಗಿ ಬಿದ್ದಿದ್ದ ಅನೇಕ ಶಾಸನಗಳನ್ನೂ ಪತ್ತೆಹಚ್ಚಿ ಅವುಗಳಲ್ಲಿಯ ಬರವಣಿಗೆಗಳನ್ನು ಓದಿ, ಅರ್ಥೈಸಿ, ಮಾಹಿತಿ ಗುರುತಿಸಿ, ಕರ್ನಾಟಕದ ಇತಿಹಾಸ ರಚನೆಗೆ ಮಹದುಪಕಾರ ಮಾಡಿದ ಕೀರ್ತಿ ಶರ್ಮರಿಗೆ ಸಲ್ಲುತ್ತದೆ. ಅವರು ಶಾಸನ ಸಾಹಿತ್ಯ ಮತ್ತು ಸಂಶೋಧನೆಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಆ ಕ್ಷೇತ್ರಕ್ಕೆ ಅಮೋಘ ಕೊಡುಗೆ ಸಲ್ಲಿಸಿದ್ದಾರೆ.

ಶರ್ಮರು ಭಾರತ ಸರ್ಕಾರದ ಪುರಾತತ್ವ ಇಲಾಖೆಯ ಪ್ರಾಚೀನ ಶಾಸನಗಳ ಸಂಶೋಧನಾ ಶಾಖೆಗೆ ಸೇರಿ ತಮ್ಮ ಸರ್ಕಾರಿ ಸೇವೆಯನ್ನು ಆರಂಭಿಸಿದರು[1]. ಹಾಗೂ ನಿಸ್ವಾರ್ಥ ಸೇವೆ ಸಲ್ಲಿಸಿದ್ದರು. ಶಾಸನಗಳ ಹಾಗೂ ಸ್ಥಳ ಪುರಾಣಗಳ ಅಧ್ಯಯನ ಮಾಡಿ ಲೇಖನಗಳನ್ನು ಪ್ರಕಟಿಸಿ ಗತಕಾಲದ ಭವ್ಯ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲಿದರು. ಅಪೂರ್ವವಾಗಿದ್ದ ಶಾಸನಗಳ ಅಧ್ಯಾಯವನ್ನು ಪೂರ್ಣಗೊಳಿಸಲು ಶ್ರಮಿಸಿದರು. 1919–20ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ (ಮಂಗಳೂರು) ಪ್ರತಿಯೊಂದು ತಾಲೂಕಿನ ಹಳ್ಳಿಹಳ್ಳಿಗಳಲ್ಲಿ ಸಂಚಾರ ಮಾಡಿ, ಶಾಸನಗಳ ಸಂಗ್ರಹ ಮಾಡಿ, ಐತಿಹಾಸಿಕ ಅವಶೇಷಗಳನ್ನು ಗುರುತಿಸಿದರು *ದಕ್ಷಿಣ ಕನ್ನಡದಲ್ಲಿ ಐತಿಹಾಸಿಕ ನಿಧಿ* ಎಂಬ ಲೇಖನ ಬರೆದು ಜನರಲ್ಲಿನ ಕುತೂಹಲ ಕೆರಳಿಸಿದರು[2]. ಮಂಗಳೂರಿನ ಸುತ್ತ–ಮುತ್ತಲ ಪ್ರದೇಶದಲ್ಲಿ ಸಂಶೋಧನೆ ಕೈಗೊಂಡರು. ಕದರಿಗುಡ್ಡದಲ್ಲಿ, ಮಂಜುನಾಥ ದೇವಾಲಯ ದಲ್ಲಿ ಕೆಲಸ ಆರಂಭಿಸಿದರು. ಅಲ್ಲಿ ವಿಜಯನಗರದ ಶಾಸನಗಳಲ್ಲದೆ ಬೇರೆ ಯಾವುದೂ ಕಂಡುಬರಲಿಲ್ಲ.

ಶರ್ಮಾಜಿಯವರು ಮೂಡಬಿದರೆಯಲ್ಲಿ ಶೋಧನೆಯನ್ನು ಕೈಗೊಂಡರು. (ಮಂಗಳೂರು ಜಿಲ್ಲೆಯ ಪ್ರವಾಸ 1921ರ ಸಂದರ್ಭದಲ್ಲಿ) "ತ್ರಿಭುವನ ಚೂಡಾಮಣಿ"ಯಲ್ಲಿ ಶಾಸನಗಳನ್ನು ಓದಿ ಕೃಷ್ಣಶಾಸ್ತ್ರಿಗಳು ಸಿದ್ಧಪಡಿಸಿದ ಶಾಸನಗಳನ್ನು ಪುನರವಲೋಕಿಸಿದರು. ಶಾಸ್ತ್ರಿಗಳ ಹಸ್ತಪ್ರತಿ ಇಟ್ಟುಕೊಂಡು ಶಾಸನಗಳನ್ನು ಮತ್ತೆ ಓದಿದರು. ಉಡುಪಿಗೆ ಹೋಗಿ ಶಾಸನಗಳ ಶೋಧನಕ್ಕೆ ಸುತ್ತ–ಮುತ್ತಲಿನ ಹಳ್ಳಿಗಳಲ್ಲಿ ಸುತ್ತಾಡಿದರು. ಉದಯಾವರದಲ್ಲಿ ಆಳುಪರ ಶಾಸನಗಳನ್ನು ಗುರುತಿಸಿದರು. ಬಾರಕೂರು

ಅಥವಾ ಬಾರ್ಹಕನ್ಯಾಪುರದಲ್ಲಿ ಸುಮಾರು ಒಂದು ತಿಂಗಳಿಗೂ ಹೆಚ್ಚು ಕಾಲ ಉಳಿದುಕೊಂಡು ಅಲ್ಲಿನ ಶಿಲಾ ಶಾಸನಗಳನ್ನು ಸಂಗ್ರಹಿಸಿದರು. ಹೊಸದಾಗಿ ನೂರಾರು ಶಾಸನಗಳನ್ನು ಶೋಧಿಸಿದರು[3].

ಒಮ್ಮೆ ಶರ್ಮರ ಮೇಲಾಧಿಕಾರಿಗಳಾದ ಕೃಷ್ಣಶಾಸ್ತ್ರಿಗಳು ಪಂಪನ 'ವಿಕ್ರಮಾರ್ಜುನ ವಿಜಯ' ದಲ್ಲಿ ಕಂಡು ಬರುವ ಸಾಮಾಜಿಕ, ಐತಿಹಾಸಿಕ ಅಂಶಗಳನ್ನೆಲ್ಲಾ ಒಂದು ಕಡೆ ಸಂಗ್ರಹಿಸಲು ಸೂಚಿಸಿದರು. ಇದರ ಪರಿಣಾಮವಾಗಿ ಶರ್ಮರು *"ಪಂಪನ ಕಣ್ಣಿನ ಕನ್ನಡ ನಾಡು"* ಎಂಬ ಉಪನ್ಯಾಸ ನೀಡಿದರು[4]. ಸಭೆಯ ಅಧ್ಯಕ್ಷತೆಯನ್ನು ಆಚಾರ್ಯ ಬಿ.ಎಂ, ಶ್ರೀಕಂಠಯ್ಯನವರು ಅಲಂಕರಿಸಿದ್ದರು. ಭಾರತದ ಇತಿಹಾಸ ಕುರಿತು ವ್ಯವಸ್ಥಿತವಾದ ಅಧ್ಯಯನ-ಸಂಶೋಧನೆಗೆ ಅಸ್ತಿಭಾರಹಾಕಿದವರೆಂದರೆ ಆಂಗ್ಲರು. ಬ್ರಿಟಿಷ್ ಇಂಡಿಯಾ ಸರಕಾರ ಇದಕ್ಕಾಗಿಯೇ "ಡೈರೆಕ್ಟರ್ ಜನರಲ್ ಆಫ್ ಆರ್ಕಿಯಾಲಜಿ" ಎಂಬ ಹುದ್ದೆಯನ್ನು ಸೃಷ್ಟಿಸಿ, ಪುರಾತತ್ವ ಅನ್ವೇಷಣೆಗಾಗಿ ಒಂದು ಇಲಾಖೆಯನ್ನೆ ಪ್ರಾರಂಭಿಸಿತು. ಭಾರತದ ಇತಿಹಾಸ ಕುರಿತು ಸಂಶೋಧನೆಗಾಗಿ ದಕ್ಷಿಣ ಭಾರತದ ಮದ್ರಾಸಿನಲ್ಲಿ ಒಂದು ವಿಭಾಗವನ್ನು ಸ್ಥಾಪಿಸಲಾಯಿತು. ಅದರ ಮುಖ್ಯ ಸ್ಥಾನವನ್ನು ಅಲಂಕರಿಸಿದ ಮೊಟ್ಟಮೊದಲ ಭಾರತೀಯ ವಿದ್ವಾಂಸರೆಂಬ ಕೀರ್ತಿ ದಿವಂಗತ ಹೊಸಕೋಟೆ ಕೃಷ್ಣಶಾಸ್ತ್ರಿಗಳಿಗೆ ಸಲ್ಲುತ್ತದೆ. ಆ ಇಲಾಖೆಯಲ್ಲಿ ಅವರ ಕೈ ಕೆಳಗೆ ಕನ್ನಡ-ತೆಲುಗು ಸಹಾಯಕರಾಗಿ ಸೇವೆ ಸಲ್ಲಿಸಿದ ಹೆಗ್ಗಳಿಕೆ ಶರ್ಮರಿಗೆ ಸಲ್ಲುತ್ತದೆ. ಆ ವೃತ್ತಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಶರ್ಮರು "ಕರ್ನಾಟಕ ಇತಿಹಾಸ, ಕರ್ನಾಟಕದ ವಾಸ್ತುಶಿಲ್ಪ" ಕುರಿತು ವ್ಯಾಪಕ ಅಧ್ಯಯನ, "ವೀರಗಲ್ಲು-ಮಾಸ್ತಿಗಲ್ಲುಗಳ" ಬಗ್ಗೆ ಅಪಾರ ಪಾಂಡಿತ್ಯವನ್ನು ಬೆಳೆಸಿಕೊಂಡರು. ಪ್ರಾಚೀನ ಶಾಸನಗಳನ್ನು ಓದುವ ವಿಶಿಷ್ಠ ಕಲೆಯನ್ನು ಕರಗತ ಮಾಡಿಕೊಂಡರು. ಹೊಸದಾಗಿ ಕರ್ತವ್ಯಕ್ಕೆ ಸೇರಿದ ಶರ್ಮರನ್ನು ಸಿಂಹಾಚಲದಲ್ಲಿ ಕೆಲಸಕ್ಕೆ ನಿಯೋಜಿಸಲಾಯಿತು. ಕೃಷ್ಣಶಾಸ್ತ್ರಿಗಳ ಜೊತೆಗೂಡಿ ಕೆಲಸ ಮಾಡುವ ಭಾಗ್ಯ ಶರ್ಮರಿಗೆ ದೊರೆಯಿತು.

ಶಾಸನದ ಎದುರಿಗೆ ಕೃಷ್ಣಶಾಸ್ತ್ರಿಗಳು; ಸಹಾಯಕ ಶಿಷ್ಯನ ಕೈಯಲ್ಲಿ ಕಾಗದ-ಪೆನ್ನು, ಗುರುಗಳು ಶಾಸನದ ಅಕ್ಷರ-ಅಕ್ಷರಗಳನ್ನು ಓದಿ ಹೇಳುತ್ತಾ ಹೋಗುತ್ತಾರೆ; ಶಿಷ್ಯ ಅದನ್ನು ಬರೆದುಕೊಳ್ಳುತ್ತಾನೆ. ಹೀಗೆ ಶರ್ಮರು ಶಾಸನಗಳನ್ನು ಓದುವ ಅದನ್ನು ಬರೆದಿಡುವ ರೀತಿ-ನೀತಿ-ವಿಧಾನಗಳನ್ನು ಕಲಿತರು. ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಅವರು ಒಬ್ಬ ಉತ್ತಮ ಇತಿಹಾಸ ಸಂಶೋಧಕ; ಶಾಸನ ಸಂಶೋಧಕರಾಗಿ ಅನುಭವ ವಿದ್ವಾಂಸರಾದರು. ಶರ್ಮಾಜಿಯವರ ಮೇಲೆ ಒಂದು ಸಾಂಸ್ಕೃತಿಕ ಪಾಂಡಿತ್ಯದ ಹೊಳೆ ಹರಿಯಿತು! ಯಾವ ಶರ್ಮರನ್ನು ಇಂದು ನಾವು ಸ್ಮರಿಸುತ್ತಿದ್ದೇವೆಯೋ ಆ ಶರ್ಮರು ಸೃಷ್ಟಿಯಾದುದೇ ಪುರಾತತ್ವ ಇಲಾಖೆಯಲ್ಲಿ; ಶಾಸನಗಳನ್ನು ಓದಿ; ಶಾಸನಗಳನ್ನು ಬರೆದು; ಶಾಸನಗಳನ್ನು ಅರ್ಥೈಸಿ ಹೃದಯ ವಿಕಾಸವನ್ನು ಪಡೆದುಕೊಂಡವರು[5]. ದೇಶದ

ಸಾಂಸ್ಕೃತಿಕ ಇತಿಹಾಸದ ಬಗ್ಗೆ ಅವರಿಗೆ ಅನನ್ಯ ಪ್ರೀತಿ ಬೆಳೆಯಿತು. ಸಂಗೀತವೇ-ಶಿಲ್ಪಕಲೆಯೇ! ಚಿತ್ರ ಲೇಖನವೇ! ನೃತ್ಯವೇ! ನಾಟಕವೇ ಶರ್ಮರಿಗೆ ಇವೆಲ್ಲವೂ ಪ್ರಿಯ. ಅವೆಲ್ಲ ಜನರ "ಜೀವನಾಡಿ" ಎಂದು ಅವರು ಭಾವಿಸಿದವರು.

ಬಾದಾಮಿ ಚಾಲುಕ್ಯರ ಮಂಗಳೇಶನ ಶಾಸನ; ತಾಳಗುಂದದ ಕುಬ್ಜನು ಬರೆದ ಕದಂಬರ ಕಾಲದ ಶಾಸನ, ಹಲ್ಮಿಡಿ ಶಾಸನ; ಚಿತ್ರದುರ್ಗದ ಬಳಿ ದೊರೆತ ಕದಂಬರ ಪ್ರಸಿದ್ಧ ದೊರೆ ಮಯೂರ ವರ್ಮನ ಶಾಸನ; ಮಳವಳ್ಳಿಯಲ್ಲಿ ದೊರೆತ ಚುಟುಗಳ ಶಾಸನ, ಮೊದಲಾದ ಶಾಸನಗಳನ್ನು ತಮ್ಮದೇ ಶೈಲಿಯಲ್ಲಿ ಅರ್ಥೈಸಿ ಕನ್ನಡಿಗರಿಗೆ ಪರಿಚಯಿಸಿದರು ಶರ್ಮರು. ಮೂಡಬಿದರೆಯ ತ್ರಿಭುವನ ಚೂಡಾಮಣಿ ಚೈತ್ಯಾಲಯದ ಶಾಸನಗಳನ್ನು ಕಂಡು ಬೆರಗಾದರು. ಇಲ್ಲಿ ಹಲವು ಶಾಸನಗಳಿದ್ದವು; ಆ ಶಾಸನಗಳನ್ನು ಓದಿ ಅವುಗಳ ಪ್ರತಿ ಮಾಡಿದರು[6]. "ಉದ್ಯಾವರ-ಉಡುಪಿ ಅಳುಪರ ಶಾಸನಗಳ" ವರದಿ ಸಿದ್ಧಪಡಿಸಿದರು.

ಶರ್ಮರು ತಮಿಳುನಾಡಿನ ಸೇಲಂ ಜಿಲ್ಲೆಯ ಧರ್ಮಪುರಿಯಲ್ಲಿ ಶಾಸನವನ್ನು ಶೋಧಿಸಿದರು. ಮಣ್ಣಿನಲ್ಲಿ ಹೂತು ಬಿದ್ದಿದ್ದ ಆ ಶಿಲ್ಪ, ಬರಹಗಳಿದ್ದ ಕಲ್ಲುಹಲಗೆ ತೆಗಿಸಿ ಶುಭ್ರಗೊಳಿಸಿದರು. ಸುಂದರವಾದ ಕೆತ್ತನೆ. "ಅರ್ಧ ಚಂದ್ರಾಕೃತಿಯ ಕಲ್ಲಿನಲ್ಲಿ ಎಂಟು ಸಾಲುಗಳ ಕನ್ನಡ ಶಾಸನ ಆ ಶಾಸನವನ್ನು ಓದಿ ಪಾಠವನ್ನು ಸಿದ್ಧಪಡಿಸಿದರು". ಅದು ಲಾಕುಳಾಗಮದ ವಿದ್ಯಾರಾಶಿ-ತಪೋರಾಶಿಗಳನ್ನು ಕುರಿತ ಶಾಸನವಾಗಿತ್ತು.(ಇದೀಗ ಮದರಾಸು ವಸ್ತು ಸಂಗ್ರಾಹಲಯದಲ್ಲಿದೆ.) ಧರ್ಮಪುರಿಯಿಂದ ಪೆನ್ನಾಗರ-ಹಳೆಅಗ್ರಹಾರಕ್ಕೆ ಹೋದರು. ಅಲ್ಲಿಂದ ದಕ್ಷಿಣ ಕನ್ನಡ ಜಿಲ್ಲೆಯನ್ನು ತಲುಪಿದರು. 1921ನೇ ವರ್ಷದ ಅಂತ್ಯಕಾಲ. ಗುತ್ತಿಯಲ್ಲಿ ಶಿಲಾ ಶಾಸನಗಳ ಅನ್ವೇಷಣ ಕಾರ್ಯದಲ್ಲಿ ನಿರತರಾಗಿದ್ದರು.

ತಿ. ತಾ. ಶರ್ಮರ ಶೋಧಿತ ಶಿಲಾ ಶಾಸನಗಳ ಅವಲೋಕನ

1. ಇಮ್ಮಡಿ ಜಗದೇಕಮಲ್ಲನ ಶಾಸನ

ಕರ್ನಾಟಕದ ಇತಿಹಾಸ ರಂಗದಿಂದ ರಾಷ್ಟ್ರಕೂಟರು ನಿರ್ಗಮಿಸಿದ ಮೇಲೆ ಕಲ್ಯಾಣಿ ಚಾಲುಕ್ಯರು ಅಧಿಕಾರಕ್ಕೆ ಬಂದರು. ಈ ರಾಜಮನೆತನದ ಅರಸರುಗಳಲ್ಲಿ ಮೂರನೆಯ ಸೋಮೇಶ್ವರನ ಮಗ ಎರಡನೇಯ ಜಗದೇಕಮಲ್ಲನು ಒಬ್ಬ. ಇವನು ಕ್ರಿ.ಶ. 1139-1149 ರವರೆಗೆ ಆಳ್ವಿಕೆ ನಡೆಸಿದನು. ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಬಾಗಳಿಯ ಚೆನ್ನಕೇಶವನ ದೇವಾಲಯದ ಗರ್ಭಗೃಹದ ಎದುರಿನ ಮಂಟಪದ ಬಳಿಯ ಶಾಸನವು ಚಾಳುಕ್ಯ ಇಮ್ಮಡಿ ಜಗದೇಕಮಲ್ಲನ ಕಾಲದ್ದು[7]. ಅವನ ಸಾಮಂತ ಪಾಂಡ್ಯದೇವ ಈ ಪ್ರಕಾರವಾಗಿ ಸೇವೆ ನಡೆಯಲು ದತ್ತಿ ಬಿಡುತ್ತಾನೆ.

"ಶ್ರೀ ವೀರಕೇಶವದೇವರ ಪುರಾಣ ವೃತ್ತಿಗಂ
ಅಯಿಂದ್ರಕ್ಕಂ ಪೊಂಗೆ ಇಪ್ಪಣ ವ್ರಿಧ್ಧಿಯಲು ।
ಕ್ರಮವಾಹಿಯಾಗಿ, ಕಡಂಗೊಟ್ಟ ಗದ್ಯಾಣ 50
ಲೆಕ್ಕದೊಳಂ ಗದ್ಯಾಣ 50 ಅಱು ವ್ರಿಧ್ಧಿಯೊಳಗೆ
ಪುರಾಣಕ್ಕೆ ಆಱು ಹೊನ್ನಂ ಕುಡುವರು. ಅಯಿಂ
ದ್ರಕ್ಕೆ ನಾಲ್ಕು ಹೊನ್ನುಂ ಕುಡುವರು".

ಈ ಶಾಸನದ ಸಾರಂಶವೆಂದರೆ; ದೇವಾಲಯದ ಕೆಲಸಕಾರ್ಯಗಳೆಲ್ಲಾ ಸುಗಮವಾಗಿ ನೆರವೇರಲು ಸಹಾಯಕವಾಗುವಂತೆ, ದಾನಿಗಳು ದೇವಾಲಯಕ್ಕೆ ಬೀಜ ಹೊನ್ನನ್ನು ಕೊಡುವರು. ದೇವಾಲಯದ ವ್ಯವಸ್ಥಾಪಕರು ದಾನಿಗಳಿಂದ ಪಡೆದುಕೊಂಡ ಬೀಜ ಹೊನ್ನನ್ನು ಮತ್ತೊಬ್ಬರಿಗೆ ಸಾಲವಾಗಿ ನೀಡುವರು. ಸಾಲಪಡೆದವರು ಸಾಲಕ್ಕೆ ಇಂತಿಷ್ಟು ಬಡ್ಡಿ ಕೊಡಬೇಕು. ಈ ಬಡ್ಡಿಯಿಂದ ಬರುವ ಹಣದಿಂದ ದೇವಾಲಯದ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗಬೇಕೆಂದು ಶಾಸನವು ತಿಳಿಸುತ್ತದೆ.

2. ಕಲ್ಯಾಣಿ ಚಾಲುಕ್ಯರ ಮುಮ್ಮುಡಿ ತೈಲನ ಶಾಸನ

ಮಡಕಶಿರಾ ತಾಲ್ಲೂಕು ಹೇಮಾವತಿಯ ಶಿವದೇವಾಲಯದಲ್ಲಿ ಕ್ರಿ.ಶ. 1162 ರಲ್ಲಿ ಬರೆದ ಶಾಸನವೊಂದಿದೆ[8]. ಕಲ್ಯಾಣದ ಚಾಲುಕ್ಯ ಚಕ್ರವರ್ತಿ ಮುಮ್ಮಡಿ ತೈಲನ ಕಾಲದ್ದು. ಅವನ ಮಂಡಲೇಶ್ವರ ಮಲ್ಲಿದೇವ ಚೋಳನು ಹೆಂಜೆಱು ಬೀಡಿನಲ್ಲಿ ಆಳುತ್ತಿದ್ದ. ಆ ಕಾಲದಲ್ಲಿ ಪೆರಿಯಾಳುವ ಶೆಟ್ಟಿ ಎಂಬುವನು.

"ಹೆಂಜೆಱು ಪಟ್ಟಣದಲು ಉದಕದಾನ
ನಿಮಿತ್ತವಾಗಿ ಅಗಿದಪ್ಪ ಬಾವಿಯನಗ
ಳಿಸಿ, ತತ್ಸಮೀಪದಲು ಸಮಸ್ತ ದೇಸಿ
ಯನುಮತದಿಂ ದೇಸೀಶ್ವರ ದೇವರ
ಪ್ರತಿಷ್ಠೆಯಂ ಮಾಡಿ" ದ.

ದಾನದಾನಗಳಲ್ಲಿ ಶ್ರೇಷ್ಠದಾನ ಅನ್ನದಾನ ಆದ್ದರಿಂದಲೇ ಅನ್ನವೇ ದೇವರು ಎಂಬ ಮಾತಿದೆ. ಆದರು ಅನ್ನದಾನಕ್ಕೆ ಸಮಾನವಾದುದ್ದು, ಉದಕದಾನ ಎಂಬ ಭಾವನೆ ವ್ಯಕ್ತವಾಗಿದೆ. ಈ ದಾನಮಾಡಿದವರ ಜೀವಲೋಕದ ಮೇಲಿನ ಅವರ ಪ್ರೇಮ ಬೆಲೆಕಟ್ಟಲಾಗದ್ದು.

3. ಚಾಲುಕ್ಯ ತ್ರೈಲೋಕ್ಯ ಮಲ್ಲದೇವನ ಶಾಸನ

ಚಾಲುಕ್ಯ ತ್ರೈಲೋಕ್ಯಮಲ್ಲದೇವನ ಕಾಲದ (ಕ್ರಿ.ಶ. 1054) ದಾನ ಶಾಸನ. "ಬರೆದಂ ಚಾಮುಣ್ಡರಾಯ ನೀ ಶಾಸನಮಂ[9]" ಮುಂಡರಗಿ ಪೇಠ ತಾಂಮ್ರಗುಂಡಿಯ

ಶಿವಾಲಯದ ಎದುರಲ್ಲಿ ಇತ್ತು ಈ ಶಾಸನಕಲ್ಲು. ಈ ಶಾಸನಕಲ್ಲಿನಲ್ಲಿ ಸಾಮಂತ ಮಾಧವಾರರಸನನ್ನು ಕುರಿತ ಈ ಕೆಳಕಂಡ ಸಾಲುಗಳಿವೆ.

"ಶ್ರೀರಾಮಾರಮಣೀಯಂ
ದ್ವಾರವತೀಪುರವರೇಶ್ವರಂ ಷಾಡ್ಗುಣ್ಯಂ
ವೀರಾಗ್ರಗಣ್ಯನಾಹವ
ಧೀರಂ ಶ್ರೀ ಮಾಧವಾರ ನಸತೀ ದೂರಂ"
"ಕವಿಗಮಕವಾದಿವಾಗ್ಮಿಗೆ
ರವಿಸುತ ಬಲಿಶಿಬಿದಧೀಚಿಯಿಂ ಮಿಗಿಲೆನೆ ಬೇ
ಡುವುದಂ ಕುಡುತಿರ್ದ್ದಂ ಮಾ
ಧವಾರನೆನ್ದುಧದಿಪತಿವೃತೋರ್ವ್ವರೆ ಪೊಗಳ್ಗುಂ"

4. ಹುಡುಗೆಯ ಸೋಮಯ್ಯ

ಹಾನಗಲ್ ತಾಲ್ಲೂಕು ತಿಳಿವಳ್ಳಿಯ ಶಾಂತೇಶ್ವರ ದೇವಾಲಯ ಶಾಸನ. ಯಾದವ ಇಮ್ಮಡಿ ಸಿಂಘಣನ ಕಾಲದಲ್ಲಿ ಹುಟ್ಟಿದ ಶಾಸನ[10]. ತಂದೆಯ ನೆನಪಿಗಾಗಿ ಮಕ್ಕಳು ಕಲಿದೇವ ರಣ್ಣುಗಿ ಶಾಂತೇಶ್ವರ ದೇವಾಲಯ ಕಟ್ಟಿಸಿ, ದಾನಧರ್ಮಗಳನ್ನು ಮಾಡುತ್ತಾರೆ. ಎಕ್ಕೋಟಿ ಚಕ್ರವರ್ತಿ ಕಲ್ಲಮುಳುಗುಂದದ ರುದ್ರ ಶಕ್ತಿದೇವನ ವರ್ಣನೆ ಇದೆ. ಕಲಿದೇವ, ರಣ್ಣುಗಿ ಮತ್ತು ಇವರ ತಂದೆ ಸಾವಂತ ಠಕ್ಕುರರು ನಾನಾ ಶತ್ರುಗಳೊಡನೆ ಹೋರಾಡಿದ ವಿವರಗಳಿವೆ.

"ಮೃಡನೊಂದು ಭಕ್ತಿಯಿಂದಂ
ಹುಡುಗೆಯ ಸೋಮಯ್ಯನೊಪ್ಪು ವೀ ಕಂನಡದಿಂ
ಗಡಣಿಸಿ ಪೇಳ್ದ ಕ್ರಿತಿಯಂ
ಪೊಡವಿಯೊಳಸೆದಿರ್ಕ್ಕೆ ಚಂದ್ರತಾರಂ ಬರೆಗಂ"
ಎಂಬ ಪದ್ಯದಲ್ಲಿ ಕೃತಿಕರ್ತ ಸೋಮಯ್ಯನೆಂದು ಸ್ಪಷ್ಟವಾಗಿದೆ.

5. ರಾಗಿಮರೂರಿನ ಶಾಸನ

ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕು ರಾಮನಾಥಪುರದ ಹೋಬಳಿ ರಾಗಿಮರೂರು ಊರುಬಾಗಿಲಲ್ಲೇ ಶಾಸನವೊಂದಿದೆ[11]. ಶಿಥಿಲವಾಗಿರುವ ಕಾರಣ ಲಭ್ಯವಾಗಿರುವ ಈ ಮೂರು ಪಾದಗಳಿಂದಲೇ ನಾವು ತೃಪ್ತರಾಗಬೇಕು.

"3.................ಮರೂರು ಗ್ರಾಮದ ರಘುನಾಥ ರಾ
4 ಯರಿಗೆ ರಾಗಿಯ ಪೂಜೆ ಗಂಧ, ಪುಷ್ಪ ಧೂಪದೀಪ
5 ನೈವೇದ್ಯಮಂ ಮಾಡಬೇಕೆಂದು ಕೊಟ್ಟ ಧರ್ಮಶಾಸನ"

ಶಾಸನವು ಹದಿನಾಲ್ಕು ಹದಿನೈದನೆಯ ಶತಮಾನದ್ದೆಂದು ಹೇಳಬಹುದು. ನಮ್ಮ ದೇಶದಲ್ಲಿ ಧನಧಾನ್ಯಗಳನ್ನು ಲಕ್ಷ್ಮೀದೇವಿಯಂತೆ ಭಾವಿಸಿ, ಪೂಜೆ ಸಲ್ಲಿಸುವ ಸಂಪ್ರದಾಯವಿದೆ. ಸುಗ್ಗಿಯ ಕಾಲ ಬಂದರೆ ದವಸ ಬೆಳೆದ ಕ್ಷೇತ್ರದಲ್ಲೆ ಕಣಮಾಡಿ, ಧಾನ್ಯವನ್ನು ರಾಶಿ ಮಾಡುತ್ತಾರೆ. ಆ ಧಾನ್ಯರಾಶಿಗೆ ಸಾಂಗವಾಗಿ ಪೂಜೆ ಸಲ್ಲಿಸಿ, ಆಯಗಾರರಿಗೆ ಕೊಡಬೇಕಾದುದನ್ನು ಕೊಟ್ಟು, ದಾನ ಧರ್ಮಾದಿಗಳನ್ನು ಮಾಡಿ, ಅನಂತರ ರೈತರು ಧಾನ್ಯವನ್ನು ಮನೆಗೋ, ಕಣಜಕ್ಕೋ, ಒಯ್ಯುತ್ತಿದ್ದರು. ಈ ಶಾಸನವು ಆ ಸತ್ಸಂಪ್ರದಾಯವನ್ನು ಸ್ಥಾಪಿಸುತ್ತದೆ. ಮರೂರು ಗ್ರಾಮದ ಎಲ್ಲ ಕಣಗಳಿಗೂ ಹೋಗಿ ಧಾನ್ಯದೇವಿಯ ಪೂಜೆಸಲ್ಲಿಸುವ ಕರ್ತವ್ಯ ರಘುನಾಥರಾಯರ ಪಾಲಿಗೆ ಇತ್ತು. ಹಾಗೆ ಆ ಕರ್ತವ್ಯ ನಿರ್ವಹಿಸಲು ಗ್ರಾಮಸ್ಥರೋ, ಇಲ್ಲ ಸ್ಥಳೀಯ ಅಧಿಕಾರಿಗಳೋ, ಅವರಿಗೆ ಬಹುಶಃ ಭೂಮಿಯನ್ನು ದಾನ ಮಾಡಿದ ಹಾಗೆ ಕಂಡುಬರುತ್ತದೆ.

6. ಪ್ರಜೆಯ ಪರಮಾಧಿಕಾರವನ್ನು ತಿಳಿಸುವ ಹೊಯ್ಸಳರ ಶಾಸನ

ಕಡೂರು ಹೋಬಳಿ ಚಿಕ್ಕಪಟ್ಟಣಗೆರೆ ಸಂಗಮೇಶ್ವರ ದೇವಾಲಯದ ಮುಂದೆ ನಟ್ಟ ಕಲ್ಲಿನ ಶಾಸನ[12]. ಇದು ಹೊಯ್ಸಳ ಪ್ರತಾಪ ಶ್ರೀ ನಾರಸಿಂಹದೇವನ ಕಾಲದ ಶಾಸನ ಎರಡು ಅಂಶಗಳಿಂದಾಗಿ ಈ ಶಾಸನವು ಮಹತ್ವಪಡೆದಿದೆ.

"ಚತುರ್ವೇದ ಪಾರಾವಾರ ಪಾರಂಗತರುಂ,
ಸಂಸ್ತುತ ಸಮಸ್ತ ಶಾಸ್ತ್ರ ವಿಸ್ತಾರಕರು
ಮಪ್ಪ ಶ್ರೀಮದನಾದಿಯಗ್ರಹಾರಂ ಧರ್ಮ
ಸೂಜಿಕಾರಪುರ ನಾನೂರ್ವ್ವರುಮಪ್ಪ,
ಸಮಸ್ತ ಮಹಾಜನಂಗಳು, ಕಾರುಣ್ಯ
ದಿಂದ, ಪ್ರಭುತ್ವಮಂಕುಡೆ, ಶ್ರೀಮತು
ಸಮಸ್ತ ಗುಣಸಂಪನ್ನರು ಅಪ್ಪ, ವಿ
ನಯ ಶಿಖಾಮಣಿಯು ಸೋಮೇಶ್ವರ
ಸಮಯಪಾದಾರಧಕರುಮೆನಿಸಿದ, ಸಿಂಗಿ
ಸೆಟ್ಟಿಯ ಪುತ್ರರಪ್ಪ ಜಕ್ಕಗಾವುಣ್ಡ
ಸಕ್ಕೆ ಗಾವುಣ್ಡನು ಉರುವ ಪಟ್ಟಣ
ಗೆಜೆಯಲ್ಲಿ ಈಶಾನ್ಯ ಸ್ಥಳದಲ್ಲಿ,
ತಮ್ಮಯ್ಯನ ಹೆಸರಲು ಸಿಂಗೇಶ್ವರ
ದೇವರ ಶಿವಲಿಂಗ ಪ್ರತಿಷ್ಠೆಯಂ ಮಾಡಿ ದೇವಾ
ಲಯಮಂ ನಿರ್ಮಾಣಂ ಮಾಡಿಸಿದಲಿ
ಬೆಳಗಾವುಣ್ಡನ ಮಗ ಜಕ್ಕಯ್ಯಂ

ವಿಷ್ಣುದೇವರ ಪ್ರತಿಷ್ಠೆಯಂ ಮಾಡಿ ಅ
ದೇವರಗೃಹಮಂ ನಿರ್ಮಾಣಂ ಮಾಡಿಸಿ,
ತಮ್ಮಯ್ಯನುಮಪ್ಪ ಬೆಂಣೆಯಮಾಳ
ಗೌಂಡನು ಸೂರ್ಯದೇವರ ಪ್ರತಿಷ್ಠೆ
ಯಂ ಮಾಡಿ ಆ ದೇವರ ಗೃಹಮಂ ನಿ
ರ್ಮಾಣಂ ಮಾಡಿಸಿದ ಅವರಳಿಯನಪ್ಪ
ಬೂವಗಾವುಂಡ ಮಂಟಪವ ರಂಗಮಂ
ಗೆಯ್ಸಿದ"

'ನಾನೂರ್ವರಪ್ಪ ಮಹಾಜನಂಗಳು' ಜಕ್ಕಗಾವುಂಡ ಮತ್ತು ಸಕ್ಕೆಗಾವುಂಡ ಇಬ್ಬರಿಗೂ "ಪ್ರಭುತ್ವ"ವನ್ನು ಕೊಡುತ್ತಾರೆ. ಅಂದರೆ ಧರ್ಮಸೂರೆಕಾರಪುರ ಅಥವಾ ಉರುವ ಪಟ್ಟಣಗೆರೆಯ 'ಪ್ರಭುತ್ವ'ವನ್ನು ಕರುಣಿಸುತ್ತಾರೆ. ಪ್ರಜೆಗಳ ಪರಮಾಧಿಕಾರ ಆಚರಣೆಯಲ್ಲಿತ್ತೆಂಬುದಕ್ಕೆ ಇದು ಉದಾಹರಣೆ. ಭಾರತೀಯರಿಗೆ ಪ್ರಜಾತಂತ್ರದ ವಾಸನೆಯೇ ಇರಲಿಲ್ಲವೆಂದು ವಾದಿಸುವವರ ಬಾಯಿಮುಚ್ಚಿಸುವ ಉತ್ತಮ ಉದಾಹರಣೆ.

ಎರಡನೆಯದಾಗಿ ಜಕ್ಕಗಾವುಂಡ ಸಿಂಗೇಶ್ವರ ದೇವಾಲಯ ನಿರ್ಮಿಸುತ್ತಾನೆ; ಶಿವಲಿಂಗ ಪ್ರತಿಷ್ಠಿಸುತ್ತಾನೆ. ಜಕ್ಕಯ್ಯ ವಿಷ್ಣು ದೇವಾಲಯ ಕಟ್ಟಿಸಿ, ವಿಷ್ಣುದೇವರ ಪ್ರತಿಷ್ಠೆ ಮಾಡಿಸುತ್ತಾನೆ. ಮಾಳಗಾವುಂಡ ಸೂರ್ಯದೇವಾಲಯ ಕಟ್ಟಿಸಿ, ಅದರಲ್ಲಿ ಸೂರ್ಯ ದೇವರನ್ನು ಪ್ರತಿಷ್ಠೆಮಾಡಿಸುತ್ತಾನೆ. ಇದೆಂತಹ ಉದಾರ ಚಾರಿತ್ರ! ಶಿವ, ವಿಷ್ಣು, ಸೂರ್ಯ, ಇತ್ಯಾದಿ ನಾನಾ ನಾಮರೂಪಗಳಲ್ಲಿ 'ಏಕದೇವೋಪಾಸಕ' ರೆನಿಸುವ ಜನರ ಸಂಸ್ಕಾರವೆಷ್ಟು ಹಿರಿದೆಂಬುದನ್ನು ನಾವು ಕಂಡುಕೊಳ್ಳಬೇಕು.

7. ರಾಷ್ಟ್ರಕೂಟರ ನಿತ್ಯವರ್ಷದೇವನ ಶಾಸನ

ಕರ್ನಾಟಕವನ್ನಾಳಿದ ರಾಜಮನೆತನಗಳಲ್ಲಿ ರಾಷ್ಟ್ರಕೂಟರ ವಂಶವು ಒಂದು ಮಳಖೇಡ ಇವರ ರಾಜಧಾನಿಯಾಗಿತ್ತು. ಈ ವಂಶದ ಅರಸರಲ್ಲಿ ಕಿ.ಶ 967 ರಿಂದ 972 ರ ವರೆಗೆ ಆಳಿದ ಖೋಟ್ಟಿಗದೇವನು ಒಬ್ಬವಾಗಿದ್ದಾನೆ. ಹಿಂದಿನ ಧಾರವಾಡ ಜಿಲ್ಲೆಯ ಗದಗ ತಾಲ್ಲೋಕಿನ ನಾಗಾವಿಯ ನಾಗಾರ್ಜುನ ದೇವಾಲಯ ಎದುರಿಗೆ ನೆಟ್ಟ ಕಲ್ಲಿನಲ್ಲಿ ಈತನ ಕಾಲದ ಶಾಸನವಿದೆ[13]. ಇವನ ಸಾಮಂತ ಸತ್ಯವಾಕ್ಯ ಪೆರ್ಮಾನಡಿಯ ಅಧೀನನಾದ ಬೋಳುಗನೆಂಬವ ನಾಗಾವಿಯ ರಾಮೇಶ್ವರದೇವರಿಗೂ, ಶಿಕ್ಷಣಕ್ಕೂ, ಅನ್ನದಾನಕ್ಕೂ, ಧರ್ಮಮಾಡಿದನೆಂದು ಈ ಶಾಸನದ ಕೊನೆಯ ಕಂದ ಪದ್ಯ ಈ ಮುಂದಿನಂತಿದೆ.

"ಮುನ್ನೀರ್ಬ್ಬಳಸಿರೆ ಧರಣಿಯೊ
ಳಿನ್ನುಂ ಮಾಧುರ್ಯ ಸುಕರ ಜಾತುರ್ಯಗುಣ

ಪ್ರೋನ್ನತರಿಲ್ಲೆನೆ ಸಾಸನ
ಮನ್ನಿದೆ ಚೆಲ್ವಾಗೆ ಸಾಮಿಯಣ್ಣಂ ಬರೆದೋಂ"
"ಭಂಗಿಯೊಳರಾತಿ ಬಳಚತು
ರಂಗವ ಮುಲ್ಲಸಿತ ನಿಶಿತಪರಧಾರಾ
ಸಂಗಮ ಜಲದೊಳ್ ಮುಳುಗಿಸು
ವಂಗಂ ಕೊಟ್ಟಿಗನುದಗ್ರನುಗ್ರಾಜಿಗಳೊಳ್"

8. ರಾಷ್ಟ್ರಕೂಟರ ಖೊಟ್ಟಿಗದೇವನ ಶಾಸನ

ಧಾರವಾಡ ಜಿಲ್ಲಾ ರೋಣ ತಾಲ್ಲೂಕಿನ ಸವಡಿಯ ಗ್ರಾಮ ಚಾವಡಿಗೆ ಆನಿಸಿ ಈ ಶಿಲಾಶಾಸನವನ್ನು ನಿಲ್ಲಿಸಲಾಗಿದೆ[14] ಇದೂ ಸಹ ಖೊಟ್ಟಿಗದೇವನ ಆಳ್ವಿಕೆಯ ಕ್ರಿ.ಶ. 970ರಲ್ಲಿ ಬರೆದುದು. ಇವನ ಸಾಮಂತ ಮಾರಸಿಂಗ ಪೆರ್ಮಾಡಿ ಕಿಸುಕಾಡೆಪ್ಪತ್ತನ್ನು ಆಳುತ್ತಿದ್ದಾಗ ಗಂಗರ ವತ್ಸಯ್ಯನೆಂಬವ ಸ್ವಯಂಭುದೇವನಿಗೂ, ಭಗವತೀ ದೇವಿಗೂ, ದೇವಾಲಯ, ಮಂಟಪಗಳನ್ನು ಕಟ್ಟಿಸಿದ. ಸುಂಕದ ಬಲ್ಲಯ್ಯ, ಅವನ ಮಗ ಬಲವರ್ಮ ಮೊದಲಾದವರೂ ದಾನಧರ್ಮಗಳನ್ನು ಮಾಡಿದರು. ಬಲವರ್ಮನ ಶೌರ್ಯಪರಾಕ್ರಮಗಳ ವರ್ಣನೆಯ ಭಾಗವೆಲ್ಲ ಶಿಥಿಲವಾಗಿ ಹೋಗಿದೆ.

"ವೇದವೇದಾಂಗಮನೋದದೆ
ಸಾಸ್ತ್ರಮ ನಾದಿಮಧ್ಯಾಂತ ಮ
ಱಿಯದೆ ನಾರಣಂಗಾದುದು
ಕವಿತೆ ಸಹಜಮೇ । ನಾಗ
ನಾರ್ಯನ ಶೀಘ್ರ ಲಿಖಿತಂ"

ಎಂಬ ಮೂರು ಸಾಲುಗಳು ಉಳಿದಿವೆ ಈ ಸಾಲುಗಳಿಂದ ಸಹಜ ಕವಿ ನಾರಣನೊಬ್ಬ ಹತ್ತನೆಯ ಶತಮಾನದಲ್ಲಿದ್ದನೆಂಬುದು ತಿಳಿಯುತ್ತದೆ.

9. ಬಾದಾಮಿ ಮಂಗಳೇಶನ ಶಾಸನ

ಹಲ್ಮಿಡಿ ಶಾಸನವನ್ನು ಕಂಡುಹಿಡಿದು ಅದನ್ನು ಪ್ರಕಟಿಸುವುದಕ್ಕೆ ಮೊದಲು ಬಾದಾಮಿಯ ಮೂರನೆಯ ಕಲ್ಮನೆ ಅಥವಾ ವಿಷ್ಣು ಗೇಹದ ಮಂಗಳೇಶನ, ನಾಲ್ಕು ಸಾಲುಗಳ ಶಾಸನವೇ ಅತ್ಯಂತ ಪ್ರಾಚೀನ ಕನ್ನಡ ಶಾಸನವೆನಿಸಿತ್ತು. ಶಾಸನ ಪಾಠ ಈ ಮುಂದಿನಂತಿದೆ

1 ಸ್ವಸ್ತಿ ಶ್ರೀಮತ್ ಪ್ರಿಥಿವಿ ವಲ್ಲಭ
ಮಂಗಲಿಸನಾ

2 ಕಲ್ಮನೆಗೆ ಇತ್ತೊದು ಲಂಜಿಗೇಸರಂ
ದೇವರ್ಕೆ ಮೂನಿಱುವ
3 ಮಾಲಕಾರರ್ಗ್ಗೆ ಅರ್ದ್ಧ ವಿಸದಿ ಇ
ತ್ತೊದಾನಟಿವೊನ್
4 ಪಜ್ಚಮಹಾ ಪಾತಕನಕುಂ ಏಟಿ
ನೆಯಾ ನರಕದಾ ಪುಱು ಅಕುಮ್

ನಾಲ್ಕು ಸಾಲುಗಳ ಈ ಶಾಸನದಲ್ಲಿ ಮೊದಲನೆಯ ಸಾಲಿನ 'ಸ್ವಸ್ತಿ ಶ್ರೀಮತ್ ಪ್ರಿಥಿವಿ ವಲ್ಲಭ', ನಾಲ್ಕನೆಯ ಪಾದದ 'ಪಜ್ಚಮಹಾ ಪಾತಕ' ಇವೆರಡನ್ನು ಬಿಟ್ಟರೆ ಉಳಿದ ಹದಿನೈದು ಮಾತುಗಳೂ ಶುದ್ಧ ಕನ್ನಡ. 'ಶ್ರೀ' ಎಂಬುದೊಂದು ಕಡೆ ಬಿಟ್ಟರೆ 'ಸ್ತಿ', 'ಪ್ರಿಥಿವಿ', 'ಲಿ', 'ಜಿ', 'ನಿ', 'ವಿ', 'ರಿ', 'ಱಿ', ಹತ್ತು ಕಡೆಗಳಲ್ಲೂ ಹ್ರಸ್ವ ಸಂಕೇತವೇ ಕಂಡುಬರುತ್ತದೆ. ಱ, ೞ, ಎಂಬ ಅಕ್ಷರಗಳು ಕಂಡುಬರುತ್ತವೆ. 'ಪಜ್ಚ' ಎಂಬ ಒಂದು ಕಡೆ ಮಾತ್ರ ಸಂಯುಕ್ತಾಕ್ಷರವಿದೆ. 'ಮಂಗ', 'ಲಂಜಿ', ಇವೆರಡು ಕಡೆಗಳಲ್ಲೂ ಅನುಸ್ವಾರ-ಬಿಂದು ಅಕ್ಷರಗಳ ತಲೆಯ ಮೇಲಿದೆ. ಎರಡನೆಯ ಸಾಲಿನ 'ದು', 'ಮೂ', 'ಱು' ಗಳನ್ನೂ, ನಾಲ್ಕನೆಯ ಸಾಲಿನ 'ಪುಱು' ಗಳನ್ನೂ, ಗಮನಿಸಬೇಕು. ಉಕಾರವು ಅಕ್ಷರಗಳ ಕೆಳಗಿದೆ ; ಎಡದಿಂದ ಆರಂಭವಾಗಿ (ಮೂಲಾಕ್ಷರತಾಗಿ) ಬಲಗಡೆಗೆ ಅರ್ಧಕ್ಕೆ ನಿಲ್ಲುತ್ತದೆ. ಇದು ಆರು-ಏಳನೇ ಶತಮಾನದ ಶಾಸನ.

10. ಬಡ್ಡಿಯಿಂದ ಧರ್ಮಕಾರ್ಯ

ಬಳ್ಳಾರಿ ಜಿಲ್ಲೆಯ ಬಾಗುಳಿ ಚೆನ್ನಕೇಶವ ದೇವಾಲಯದಲ್ಲೊಂದು ಶಾಸನವಿದೆ : ಅದು ಚಾಳುಕ್ಯ ಜಗದೇಕ ಮಲ್ಲನ ಕಾಲದ್ದು. ಶಾಸನ ಶಿಥಿಲವಾಗಿದೆ. ಇದರಿಂದ ಕಾಲ ತಿಳಿದುಬರುವುದಿಲ್ಲ. ಬಹಳ ಮಾಡಿ ಇದು ಕ್ರಿ.ಶ. 1139 ರಿಂದ 1149 ರ ವರೆಗೆ ಆಳಿದ ಇಮ್ಮಡಿ ಜಗದೇಕ ಮಲ್ಲನ ಕಾಲದ್ದೇ ಇರಬೇಕು. ಶಾಸನದ ಈ ಸಾಲುಗಳನ್ನು ಗಮನಿಸಬೇಕು. ದೇವಾಲಯಗಳಲ್ಲಿ ಸೇವಾದ್ಯವಸರಗಳಿಗೆ ದತ್ತಿಗಳನ್ನು ಬಿಟ್ಟವರು ಅವು ಶಾಶ್ವತವಾಗಿ ನಡೆಯಲು ಮಾಡುತ್ತಿದ್ದ ವ್ಯವಸ್ಥೆ ಸ್ಪಷ್ಟವಾಗುತ್ತದೆ.

"ಶ್ರೀ ವೀರಕೇಶವದೇವರ ಪುರಾಣ ವೃತ್ತಿಗಂ,
ಅಯಿಂದ್ರಕ್ಕಂ ಪೊಂಗೆ ಇಪ್ಪಣ ವ್ರಿದ್ಧಿಯಲು,
ಕ್ರಮವಾಹಿಯಾಗಿ ಕಡಂಗೊಟ್ಟ ಗದ್ಯಾಣ 50
ಲೆಕ್ಕದೊಳಂ ಗದ್ಯಾಣ 50 ಅದಱ ವ್ರಿದ್ಧಿ
ಯೊಳಗೆ ಪುರಾಣಕ್ಕೆ ಆಱು ಹೊನ್ನಂ ಕು
ಡುವರು. ಆಯಿಂದ್ರಕ್ಕೆ ನಾಲ್ಕು ಹೊನ್ನಂ
ಕೊಡುವರು."

ಸಾಲ, ಬಡ್ಡಿ, ವ್ಯವಹಾರ ಅಥವಾ ಋಣ ವ್ಯವಹಾರ ಬಹಳ ಪ್ರಾಚೀನವಾದದ್ದು. ಐವತ್ತು ಗದ್ಯಾಣಕ್ಕೆ ಹದಿನಾಲ್ಕು ಹೊನ್ನು.

: : ಅಡಿ ಟಿಪ್ಪಣಿ : :

1. ಕನ್ನಡ ಪತ್ರಿಕಾ ಲೋಕದ ಧೀಮಂತರು–04 ಪು.ಸಂ – 25
2. ಶರ್ಮರ ಆತ್ಮ ಚರಿತ್ರೆ, ನನ್ನ ಜೀವನ ಮತ್ತು ಧ್ಯೇಯ ಪು.ಸಂ – 216
3. ಅದೇ ---"----- ಪು.ಸಂ – 227
4. ಅದೇ---"----- ಪು.ಸಂ – 261
5. ಸಂಶೋಧಕನಿಂದ ಸಂದರ್ಶನ ದಿನಾಂಕ: 22.04.2013
6. ಜಿ.ಎಸ್ ಭಟ್ಟ ರ ತಿರುಮಲೆ ತಾತಾಚಾರ್ಯ ಶರ್ಮ ಪು.ಸಂ – 09
7. No.260 South Indian Inscriptions Vol.IX- Part-1
8. No.268 South Indian Inscriptions Vol.IX- Part-1
9. Bombay Karnataka Inscriptions Vol.P1 No.92
10. Karnataka Inscriptions Vol.5 No.42
11. Mysore Archaeological Report,1924
12. Mysore Archaeological Report, No.49,1945
13. South Indian Inscriptions No.41.Vol.XI- Part-1
14. South Indian Inscriptions No.42.Vol.XI- Part-1

ಅಧ್ಯಾಯ 04:

ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿಗೆ ಶರ್ಮರ ಕೊಡುಗೆಗಳು:-

"ಜೈ ಭಾರತ ಭುವಿಗೆ ಮಾತೆಗೆ ಜೈ ಪಾವನ ಮೂರ್ತಿಗೆ ಸನ್ಮಂಗಳವಾಗಲಿ ಸತತಂ". ಈ ಹಾಡು ಶರ್ಮರ ಪತ್ನಿ 'ಭಾರತಿ ಎಂಬ ಕಾವ್ಯನಾಮದಿಂದ ಖ್ಯಾತರಾದ ತಿರುಮಲೆ ರಾಜಮ್ಮ'ನವರಿಂದ ರಚಿತವಾಗಿದ್ದು, ಈ ಹಾಡಿನಿಂದ ನಾಡಿನ ಜನ ಸ್ಫೂರ್ತಿಗೊಂಡು ಭಾರತಾಂಬೆಯ - ಭವನೇಶ್ವರಿಯ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು-ಶರ್ಮರೂ ಸ್ಪೂರ್ತಿಗೊಂಡರು.

ಆಧುನಿಕ ಕರ್ನಾಟಕದ ಇತಿಹಾಸದಲ್ಲಿ ಅತ್ಯಂತ ಮಹತ್ವದ ಮೈಲಿಗಲ್ಲೆಂದರೆ 'ಕರ್ನಾಟಕ ಏಕೀಕರಣ ಚಳುವಳಿ', ಈ ಚಳುವಳಿಯಲ್ಲಿ ಶರ್ಮರ ಪಾತ್ರವು ಪ್ರಮುಖವಾದದ್ದಾಗಿದೆ. 'ಜೈಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ' ಎಂದು ರಾಷ್ಟ್ರಕವಿ ಕುವೆಂಪುರರಿಗೆ ಈ ಹಾಡು ಬರೆಯಲು ದಿವ್ಯ ದರ್ಶನ ತೋರಿದಳು ಆ ನಾಡ ದೇವಿ. ಆ ನಾಡದೇವಿಯ ಕೀರ್ತಿಯನ್ನು ಮುಗಿಲೆತ್ತರಕ್ಕೆ ಕೊಂಡೊಯ್ಯಲು ಬಾಳಿನುದ್ದಕ್ಕೂ ಶ್ರಮಿಸಿದರು ಶರ್ಮರು. ಕನ್ನಡ ನಾಡು-ನುಡಿ-ಸಂಸ್ಕೃತಿಯ ಸಂರಕ್ಷಣೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದವರು. ನಾಡಿನ ಬಗ್ಗೆ ಅಪಾರ ಪ್ರೀತಿ, ಭಕ್ತಿ ಮತ್ತು ಅಭಿಮಾನವನ್ನು ಬೆಳೆಸಿಕೊಂಡಿದ್ದವರು.

ಇಪ್ಪತ್ತನೆಯ ಶತಮಾನದ ಕನ್ನಡನಾಡಿನ ಉಜ್ವಲ ದೇಶಭಕ್ತರಲ್ಲಿ, ಗಾಂಧೀ ತತ್ವದಲ್ಲಿ ನಂಬಿಕೆ ಇಟ್ಟು ನಡೆದವರು ತಿರುಮಲೆ ತಾತಾಚಾರ್ಯ ಶರ್ಮರು ಸಾಹಿತ್ಯಕವಾಗಿ, ಸಾಂಸ್ಕೃತಿವಾಗಿ ಕನ್ನಡಿಗರೆಲ್ಲ ಒಂದಾಗಬೇಕಾದ ಅಗತ್ಯ, ಅನಿವಾರ್ಯತೆಯನ್ನು ಒತ್ತಿ ಹೇಳುತ್ತಿದ್ದರು. ಕನ್ನಡ ಮನಸುಗಳನ್ನೆಲ್ಲ ಒಂದುಗೂಡಿಸಲು ಪ್ರಯತ್ನಪಟ್ಟರು. 'ಕನ್ನಡದಿಂದಲೇ ಕನ್ನಡಿಗರ ಏಳಿಗೆ-ಕನ್ನಡ ಭಾಷೆಯೇ ಕನ್ನಡ ನಾಡಿನ ಪ್ರಭುತ್ವ ಭಾಷೆಯಾಗಬೇಕು. ಆಡಳಿತ, ಪಾಠ-ಪ್ರವಚನ ಬೋಧನೆಗಳು ಕನ್ನಡದಲ್ಲೇ ನಡೆಯಬೇಕೆಂದು ಪ್ರತಿಪಾದಿಸಿದರು'. ಬದುಕಿನ ಮುಸ್ಸಂಜೆಯಲ್ಲಿಯೂ ಶರ್ಮರ ನಾಡಿಮಿಡಿತ ಕನ್ನಡಕ್ಕಾಗಿ ಮಿಡಿಯುತಿತ್ತು. ಇವರ ಜೀವ ಭಾರತಕ್ಕೆ ಹಾಗೂ ಕನ್ನಡನಾಡಿನ ಏಳಿಗೆಗಾಗಿ ತುಡಿಯುತಿತ್ತು.

ಮಾಡಿ, ಕನ್ನಡ ಜನಪದದ ಭವ್ಯ, ಪ್ರಾಚೀನ ಜೀವನದ ಅನನ್ಯ ಚಿತ್ರಗಳನ್ನು ಕನ್ನಡಿಗರಿಗೆ ಮನವರಿಕೆ ಮಾಡಿದರು. ಕನ್ನಡ ಪತ್ರಿಕಾ ಸಾಹಿತ್ಯ ಪ್ರಪಂಚದಲ್ಲಿ 'ಇವರೊಂದು ಧೂಮಕೇತು'. ಇವರ ಮಾತುಗಾರಿಕೆ, ಬರಹ ಎರಡು ಕನ್ನಡಿಗರಿಗೊಂದು ಸ್ಫೂರ್ತಿಯ ಮಿಂಚು- ಅಮೃತ ಪಾನ. 'ಕರ್ನಾಟಕದ ಮೋಕ್ಷ ಅಡಗಿರುವುದು ಕನ್ನಡದಲ್ಲಿಯೇ' ಎಂದು ಸಾರಿದವರು ಶರ್ಮಾಜಿ. ಸ್ವಾಭಿಮಾನಿಗಳು ಹಾಗೂ ಸ್ವಾತಂತ್ರ್ಯ ಪೇಮಿಗಳು

ಆಗಿದ್ದು, ಅಖಂಡ ಕರ್ನಾಟಕದ ಬಹುದಿನದ ಕನಸನ್ನು ನನಸು ಮಾಡಲು ಸಂಕಲ್ಪ ಮಾಡಿದರು. ಹರಿದು ಹಂಚು ಹೋಗಿದ್ದ ಕನ್ನಡನಾಡನ್ನು ಒಂದುಗೂಡಿಸಲು ಶ್ರಮಿಸಿದರು. ತಮ್ಮ ದೇಹದಲ್ಲಿ ಕಡೆಯ ಉಸಿರು ಇರುವವರೆಗೂ ನಾಡಿನ ಏಳಿಗೆಯನ್ನೇ ಗುರಿಯನ್ನಾಗಿಟ್ಟುಕೊಂಡು ದುಡಿದರು. ನಾಡ ಕೀರ್ತಿ-ಪ್ರತಿಷ್ಠೆಗಳು ದೇಶದಾದ್ಯಂತ ಬೆಳಗುವಂತೆ ಮಾಡಿದರು. ಅವರು ಎಲ್ಲೇ ಇದ್ದರೂ ಕನ್ನಡನಾಡಿನ ಬಗ್ಗೆ ಅವರ ಹೃದಯ ಸದಾ ಮಿಡಿಯುತ್ತಿತ್ತು. ಸ್ವತಂತ್ರ ಭಾರತ-ಅಖಂಡ ಕರ್ನಾಟಕ ಅದೇ ಅವರು ಬಯಸಿದ ಜೀವನದ ಆದರ್ಶಗಳು.

ಶರ್ಮರು ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ತಿರುಗಿ ನಮ್ಮ ಶಾಸನಗಳು, ಕಡತಗಳು ಹಾಗೂ ಓಲೆಗರಿಯ ಗ್ರಂಥಗಳನ್ನು ಹುಡುಕಿ, ಪತ್ತೆ ಹಚ್ಚಿ, ಸಂಗ್ರಹವಾದ ಆ ಮಾಹಿತಿಯನ್ನು ಬರೆದಿದ್ದಾರೆ. ಆಂಧ್ರ ಪ್ರಾಂತ್ಯ ಹಾಗೂ ಮದ್ರಾಸ್ ಪ್ರಾಂತ್ಯಗಳಲ್ಲಿಯೂ ಶಾಸನಗಳನ್ನು ಶೋಧಿಸಿದ್ದಾರೆ. ಕರ್ನಾಟಕ ಇತಿಹಾಸ ರಚನೆಯ ಹರಿಕಾರರಾಗಿ ಶರ್ಮರ ಬರವಣಿಗೆಗಳು ಹಿಂದೆ ಇದ್ದ ಮೈಸೂರು ಸಂಸ್ಥಾನದ ಇತಿಹಾಸದ ಮೇಲೂ ಬೆಳಕು ಚಲ್ಲುತ್ತವೆ. ಕರ್ನಾಟಕದ ಇತಿಹಾಸ ರಚನೆಗೆ ಹಾಗೂ ನಾಡು-ನುಡಿ-ಸಂಸ್ಕೃತಿಯ ಅಭಿವೃದ್ಧಿಗೆ ಅವರು ಸಲ್ಲಿಸಿರುವ ಕೊಡುಗೆಗಳು ಅಮೋಘ-ಅದ್ಭುತ ಹಾಗೂ ಅನುಪಮವಾಗಿವೆ. ಆದ್ದರಿಂದಲೇ ಅವರ ಬಹುಮುಖ ಸೇವೆಯನ್ನು ಮೆಚ್ಚಿ ಕಾಸರಗೋಡು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಹಾಗೂ ಪರಿಷತ್ತಿನ ಅಧ್ಯಕ್ಷರನ್ನಾಗಿ ಜನತೆ ಆರಿಸಿತು; ಧನ್ಯತೆ ಪಡೆಯಿತು.

ಶರ್ಮಾಜಿಯವರು ಮದ್ರಾಸ್‌ನಲ್ಲಿರುವಾಗ ಪೂಜ್ಯ ಸ್ಮರಣೀಯ ಬೆನಗಲ್ ರಾಮರಾಯರ ಮೂಲಕ ಅಲ್ಲಿದ್ದ ಅನೇಕ ಕನ್ನಡಿಗರ ಪರಿಚಯವಾಯಿತು. ಅವರಲ್ಲಿ ರಾವ್ ಬಹದ್ದೂರ್ ಡಾ॥ ಯು. ರಾಮರಾಯರು ಪ್ರಮುಖರಾದವರಾಗಿದ್ದಾರೆ. ಮದ್ರಾಸಿನಲ್ಲಿದ್ದಾಗ ಶರ್ಮರು "ಶಿಲಾಶಾಸನಗಳಲ್ಲಿ ಕಂಡುಬರುವ ಕೆಲವು ಕನ್ನಡ ಕವಿಗಳು" ಎಂಬ ಒಂದು ಪ್ರಬಂಧವನ್ನು ಕನ್ನಡದಲ್ಲಿ ರಚಿಸಿದರು[1]. ಹೊಸಕೋಟೆ ಕೃಷ್ಣಶಾಸ್ತ್ರಿಗಳು ಅದಕ್ಕೆ ಮುನ್ನುಡಿ ಬರೆದರು; ಹಾಗೂ ಆಗಿನ ಬ್ರಿಟಿಷ್ ಸರ್ಕಾರ ಪ್ರಕಟಿಸುತ್ತಿದ್ದ ಪುಸ್ತಕ ಮಾಲೆಯಲ್ಲಿ ಪ್ರಕಟಿಸಲು ಹಸ್ತಪ್ರತಿಯನ್ನು Director General of Archaeology, Delhi ಗೆ ಕಳುಹಿಸಿ "This may be included in the series of memoirs published by the Department" ಎಂಬುದಾಗಿ ಶಿಫಾರಸ್ಸು ಮಾಡಿದರು.

ಎರಡು-ಮೂರು ವಾರಗಳ ಕಳೆಯಿತು ದೆಹಲಿಯಲ್ಲಿನ ಪುರಾತತ್ವ ಶಾಖೆಯ ಮುಖ್ಯಾಧಿಕಾರಿಯಾಗಿದ್ದ, ಸರ್ ಜಾನ್ ಮಾರ್ಷಲ್‌ರವರು "ಈ ಪ್ರಬಂಧವನ್ನು ಕನ್ನಡದಲ್ಲಿ ಬರೆಯಲಾಗಿದೆ. ನಮ್ಮ ಇಲಾಖೆಯ ಮೂಲಕ ಹೊರಡುವ ಟಜಟಟುಢಿ ಎಲ್ಲಾ ಆಂಗ್ಲಭಾಷೆಯಲ್ಲಿಯೇ ಪ್ರಕಟವಾಗುತ್ತವೆ. ಆದ ಕಾರಣ ತಾವು ತಮ್ಮ ಜಂಣಾಟಿಂ

ಘಿಣಾಚಿಟಿಣ ಗೆ ಹೇಳಿ, ಇದನ್ನು ಇಂಗ್ಲೀಷ್ ಭಾಷೆಗೆ ಭಾಷಾಂತರ ಮಾಡಿಸಿ, ಮತ್ತೆ ಕಳುಹಿಸಿಕೊಡಿ" ಎಂಬುದಾಗಿ ಶಾಸ್ತ್ರಿಗಳಿಗೆ ಬರೆದರು. ಅದರಂತೆ ಶಾಸ್ತ್ರಿಗಳು ಪ್ರಬಂಧವನ್ನು ಇಂಗ್ಲೀಷಿಗೆ ಭಾಷಾಂತರಿಸಿ ಕೊಡುವಂತೆ ಶರ್ಮರಿಗೆ ತಿಳಿಸಿದರು.

ಆಗ ಶರ್ಮಾಜಿ 'ಸರ್ ಜಾನ್ ಮಾರ್ಷಲ್ ಮತ್ತು ತಮಗೆ ನನ್ನ ಧನ್ಯವಾದಗಳು. ಕನ್ನಡ ಶಿಲಾ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಅವುಗಳಲ್ಲಿ ಉಕ್ತವಾಗಿರುವ ಅಥವಾ ಅವುಗಳನ್ನು ರಚಿಸಿದ ಕನ್ನಡ ಕವಿಗಳಿಗೆ ಸಂಬಂಧಿಸಿದ ವಿಚಾರ ಇದಾಗಿದೆ. ಶಾಸನಗಳಿಂದ ನೇರವಾಗಿ ಪಡೆದ ಕಂದ ಪದ್ಯಗಳು, ನಾನಾ ವೃತ್ತಗಳು ಹಾಗೂ ಗದ್ಯ ಭಾಗಗಳನ್ನು ಕೊಡಲಾಗಿದೆ. ಇವುಗಳನ್ನು ಇಂಗ್ಲೀಷಿಗೆ ಭಾಷಾಂತರಿಸಿದರೆ ಕನ್ನಡ ಭಾಷೆಯ ಸ್ವಾರಸ್ಯವಿರುವುದಿಲ್ಲ. ಭಾರತ ಸರ್ಕಾರ ಇದುವರೆವಿಗೂ ದೇಶಿಯ ಭಾಷೆಗಳಲ್ಲಿ ಇಂತಹ memoirs ಗಳನ್ನು ಪ್ರಕಟಿಸಿರದಿದ್ದರೆ, ಇನ್ನು ಮುಂದೆಯಾದರೂ ಪ್ರಕಟಿಸಲಿ. ಒಂದು ವೇಳೆ ಅದು ಸಾಧ್ಯವಾಗದಿದ್ದರೆ ನನಗೆ ಬೇಸರವಿಲ್ಲ' ಎಂದು ನೇರವಾಗಿ ಉತ್ತರಿಸಿದರು.

ಈ ಸಂದರ್ಭದಲ್ಲಿ ಕೆ.ವಿ ಸುಬ್ರಮಣ್ಯ ಅಯ್ಯರ್‌ರವರೂ ಇಂಗ್ಲೀಷನಲ್ಲಿಯೇ ಭಾಷಾಂತರಿಸು ಎಂದರು. ಸಹೋದ್ಯೋಗಿಗಳು "ಈ ಅವಕಾಶ ಬಿಡಬೇಡಿ ನಿಮ್ಮ ಉತ್ತಮ ಭವಿಷ್ಯಕ್ಕೆ ಇದು ಮುನ್ನುಡಿ" ಎಂದರು ಆದರೆ ಶರ್ಮರು ತಮ್ಮ ನಿರ್ಧಾರ ಬದಲಿಸಲಿಲ್ಲ. ಕೆಲವು ದಿನಗಳ ನಂತರ 'ಸರ್ ಜಾನ್ ಮಾರ್ಷಲ್ ರವರು 'ದೇಶಿಯ ಭಾಷೆಗಳಲ್ಲಿ ಪ್ರಕಟಿಸಲು ನಿರ್ಧರಿಸಿದ್ದೇವೆ' ಎಂದು ಪತ್ರ ಬರೆದರು. ಹಾಗೂ 'ಶರ್ಮರ ಹಸ್ತಪ್ರತಿಯನ್ನು ಕಳುಹಿಸಿಕೊಡಿ' ಎಂದು ತಿಳಿಸಿದರು. ಶಾಸ್ತ್ರಿಗಳು ಶರ್ಮರನ್ನು ಅಭಿನಂದಿಸಿದರು.

ಕೆ.ವಿ. ಸುಬ್ರಮಣ್ಯಅಯ್ಯರ್ ಶರ್ಮರಿಗೆ ಪತ್ರ ಬರೆದು "ನಿಮ್ಮ ಅಪೂರ್ವ ಮನೋಬಲದಿಂದ ಸರ್ ಜಾನ್ ಮಾರ್ಷಲ್ ರವರನ್ನೆ ಗೆದ್ದುಬಿಟ್ಟಿರಿ! ಕನ್ನಡ ಧ್ವಜ ಹಾರಿಸಿ ಬಿಟ್ಟಿರಿ! ನಿಮ್ಮ ಕನ್ನಡ ಭಾಷಾ ಭಕ್ತಿ ಕೆಲವೇ ತಿಂಗಳುಗಳಲ್ಲಿ ಮಾರ್ಷಲ್ ರವರ ಹೃದಯವನ್ನೆ ಪರಿವರ್ತನೆ ಮಾಡಿಬಿಟ್ಟಿತು. ನೀವು ಈ ಸಂದರ್ಭದಲ್ಲಿ ಗಳಿಸಿದ ವಿಜಯ ನಮ್ಮೆಲ್ಲರ ವಿಜಯ ಎಂದು ನಾನು ಭಾವಿಸಿದ್ದೇನೆ. ನೀವು ನಮ್ಮ ಕಛೇರಿಯ ಹೆಮ್ಮೆ. ನಿಮ್ಮನ್ನು ಹೊಗಳುವುದು ನನ್ನ ಉದ್ದೇಶವಲ್ಲ; ನಮ್ಮೆಲ್ಲರಿಗೆ ತಾವು ಮಾಡಿದ ಉಪಕಾರ ಸಾಮನ್ಯವಾದುದಲ್ಲ[2]"ಎಂದು ಅಭಿನಂದಿಸಿದ್ದರು.

ಅಖಂಡ ಕರ್ನಾಟಕದ ಕನಸುಗಾರರಾದ ಶರ್ಮರು ಕಾಸರಗೋಡು ತಾಲ್ಲೂಕು ಕರ್ನಾಟಕಕ್ಕೆ ಸೇರಿಸಬೇಕೆಂದು ವಾದಿಸಿದರು. ನೀಲಗಿರಿ ಜಿಲ್ಲೆಯೂ ಕರ್ನಾಟಕಕ್ಕೆ ಸೇರಬೇಕೆಂದು ಶರ್ಮರೂ ಸೇರಿದಂತೆ ಹಲವರು ಹಿರಿಯರು ಅಭಿಲಾಷೆಪಟ್ಟರು. 'ಗಂಗರ ಶ್ರೀ ರಾಜ್ಯದೊಳಗಿದ್ದ ನೀಲಗಿರಿ, ದ್ವಾರಸಮುದ್ರದ ಹೊಯ್ಸಳ ಸಮ್ರ್ಯಾಜ್ಯ ದೊಳಗಿದ್ದ ನೀಲಗಿರಿ, ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರ ಸಮ್ರಾಜ್ಯದೊಳಗಿದ್ದ

ನೀಲಗಿರಿ' ಅಸಹಜವಾಗಿ ಸ್ವಾತಂತ್ರ ಭಾರತದಲ್ಲಿ ತಮಿಳುನಾಡಿಗೆ ಸೇರಿತೆಂದು ಮರುಗಿದರು. ದೇಶದ ರಾಜಕಾರಣದ ಒಳವ್ಯಾಪಾರ ದೌರ್ಬಲ್ಯಕ್ಕಾಗಿ ದುಃಖಪಟ್ಟರು. ಈ ದುರ್ಘಟನೆಗೆ ಕನ್ನಡಿಗರಲ್ಲಿ ನಾಡಿನ ಬಗ್ಗೆ ಅಭಿಮಾನವಿಲ್ಲದಿರುವುದು ಮತ್ತು ರಾಜಕಾರಣಿಗಳ ಅಧಿಕಾರದ ದೌರ್ಬಲ್ಯವೇ ಕಾರಣವೆಂದೂ ಹೇಳಿದರು.

ಸುಮಾರು ಐದು ವರ್ಷಗಳ ಕಾಲ ಮದ್ರಾಸ್ ಹಾಗೂ ಉದಕಮಂಡಳದಲ್ಲಿ ಸೇವೆ ಸಲ್ಲಿಸಿ, ಪ್ರಾಚೀನ ಅನ್ವೇಷಣ (Epigraphy) ಮತ್ತು ಪ್ರಾಚೀನ ವಾಸ್ತುಶಿಲ್ಪಗಳ (Archaeology) ಅಧ್ಯಯನದಲ್ಲಿ ಬಹಳಷ್ಟು ಅನುಭವ ಪಡೆದು ಬೆಂಗಳೂರಿಗೆ ಬಂದರು. ಬೆಂಗಳೂರಿನ ದೇಶಿಯ ವಿದ್ಯಾಶಾಲೆ ಇವರನ್ನು ಸೆಳೆಯಿತು. ದೇಶಿಯ ವಿದ್ಯಾಶಾಲೆಯಲ್ಲಿ ಇತಿಹಾಸ, ಪೌರಧರ್ಮ ಹಾಗೂ ಕನ್ನಡ ಬೋಧಕರಾಗಿ ಕೆಲವು ಕಾಲ ಸೇವೆ ಸಲ್ಲಿಸಿದರು[3]. 1924 ರ 'ಬೆಳಗಾಂ ಕಾಂಗ್ರೆಸ್' ಅಧಿವೇಶನದ ಪ್ರಚಾರ ಮತ್ತು ಹಣಸಂಗ್ರಹಕ್ಕಾಗಿ ಹಳೆ ಮೈಸೂರು ಸಂಸ್ಥಾನ, ಕೊಡಗು ಮತ್ತು ಉತ್ತರ ಕರ್ನಾಟಕದ ಭಾಗಗಳಲ್ಲಿ ಶರ್ಮ ಮತ್ತು ಮುದವೀಡು ಕೃಷ್ಣರಾಯರು ಸಂಚರಿಸಿದರು. ಆ ವೇಳೆಯಲ್ಲಿ ಕೊಡಗು ಬ್ರಿಟಿಷರ ನೇರ ನಿಯಂತ್ರಣದಲ್ಲಿತ್ತು. ಅಲ್ಲಿಗೆ ಹೊರಗಿನವರಿಗೆ ಪ್ರವೇಶವಿರಲಿಲ್ಲ. ಆಗ ಬೆಂಗಳೂರಿನಿಂದ ಮೈಸೂರು, ಅಲ್ಲಿಂದ ಹೊಳೆನರಸೀಪುರಕ್ಕೆ ಹೋದರು. ಅಲ್ಲಿ ಎಸ್.ಶ್ರೀಕಂಠಯ್ಯನವರು ಅವರನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಎಸ್. ಶ್ರೀಕಂಠಯ್ಯನವರ ಅಪೇಕ್ಷೆ ಮೇರೆಗೆ ಸಾರ್ವಜನಿಕರನ್ನು ಉದ್ದೇಶಿಸಿ ಅಲ್ಲಿ ಮಾತನಾಡಿದರು. ಮುದುವೀಡು ಕೃಷ್ಣರಾಯರ ಮಾತು ಮುಗಿಸುವುದಕ್ಕಿಂತ ಮುನ್ನ "ಸತ್ತುಬಿದ್ದರೆ ಹೆತ್ತ ತಾಯಿ ಅತ್ತು ದೂರ ಸರಿಯುವಳೋ ಮತ್ತೆ ಭೂಮಿ ತಾಯಿಯು ನಿನ್ನನ್ನು ಎತ್ತಿಕೊಳ್ಳುವಳೊ ಪ್ರಾಣಿ" ಎಂದು ಹಾಡಿದರು. ಸಂತೆಯ ಸದ್ದೆಲ್ಲ ಮಾಯವಾಯಿತು!

ನಂತರ ಕಾರು ಹತ್ತಿ ಅರಕಲಗೂಡಿಗೆ ಹೊರಟರು ಎಸ್. ಶ್ರೀಕಂಠಯ್ಯನವರ ಕಡೆಯಿಂದ ಸೂರ್ಯನಾರಾಯಣ ಶೆಟ್ಟರಿಗೆ ಸುದ್ದಿ ಮುಟ್ಟಿತು. ಅವರು ಶರ್ಮರನ್ನು ಬರಮಾಡಿಕೊಂಡು ಸೂಕ್ತ ವ್ಯವಸ್ಥೆ ಮಾಡಿದರು. ಉಟೋಪಚಾರ ಮುಗಿದ ನಂತರ ಹೊರಡಲು ಸಿದ್ದರಾದರು. ಆದರೆ ಕತ್ತಲಾಗುವವರೆಗೂ ಕಾದು ಸೂರ್ಯನಾರಾಯಣಶೆಟ್ಟರ ಕಾರಿನಲ್ಲಿ ಕೊಡಗಿನ ಗಡಿಯ ಸಮೀಪ ಹೊರಟರು. ಗಡಿಯ ಬಳಿಯಲ್ಲಿ ಇವರಿಗಾಗಿ ಕಾರು ಕಾಯುತ್ತಿತ್ತು. 'ಮೈಸೂರಿನ ಕಾರಿನಿಂದ ಕೊಡಗಿನ ಕಾರಿಗೆ ವರ್ಗಾಯಿಸಿದರು'. ನಿರ್ಭಯವಾಗಿ ಕೊಡಗಿನ ನಿಡತದ ಸುಬ್ಬಯನವರ ಮನೆ ಸೇರಿದರು. ಶರ್ಮರು ಶ್ರಮಪಟ್ಟು ಸ್ನೇಹಿತರ ಸಹಾಯದಿಂದ ಬ್ರಿಟಿಷರ ಕೊಡಗು ಸಾಮ್ರಾಜ್ಯಕ್ಕೆ ಪ್ರವೇಶಿಸಿದರು. ಗಡಿ ದಾಟುವ ಕಾರ್ಯದಲ್ಲಿ ಯಶಸ್ವಿಯಾದರು[4]!.

ಕನ್ನಡ ಬದುಕಿನ ಒಂದು ಅರ್ಥಪೂರ್ಣ ಅಂಗದಂತಿದ್ದವರು ಶರ್ಮಾಜಿ .ಅವರು ಕನ್ನಡದ 'ಸೃಜನ ಶೀಲ ಸಾಹಿತಿ' ಯಾಗಿದ್ದರು. ಕನ್ನಡ-ಕನ್ನಡಿಗ-ಕರ್ನಾಟಕದ

ಒಳಿತಿಗಾಗಿ ಶ್ರಮಿಸುತ್ತ, ಕನ್ನಡಿಗರಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸುವಲ್ಲಿ ಅವರು ಮಹತ್ವದ ಪಾತ್ರ ವಹಿಸಿದರು. ಕನ್ನಡಿಗರನ್ನು 'ಅಭಿಮಾನಧನರನ್ನಾಗಿಸಲು; ಪ್ರಜ್ಞಾವಂತರ ನ್ನಾಗಿಸಲು' ಶ್ರಮಿಸಿದರು. ಶರ್ಮರು ಬೋಧಕರಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಬೆಂಗಳೂರಿನ ದೇಶಿಯ ವಿದ್ಯಾಶಾಲೆ ಯವರು ವರ್ಷಕ್ಕೆ ಮೂರರಂತೆ ಇಂಗ್ಲೀಷ್‌ನಲ್ಲಿ ಸಂಚಿಕೆಯನ್ನು ಪ್ರಕಟಿಸುತ್ತಿದ್ದರು. ಶರ್ಮರು ದೇಶಿಯ ವಿದ್ಯಾಶಾಲೆಗೆ ಬಂದನಂತರ ಸಂಚಿಕೆಯನ್ನು ಕನ್ನಡದಲ್ಲಿ ತರಬಾರದೇಕೆ? ಎಂದರು. ಇದರ ಪರಿಣಾಮವಾಗಿ ಮುಂದೆ ಶರ್ಮರ ನೇತೃತ್ವದಲ್ಲಿ ದೇಶಿಯ ವಿದ್ಯಾಶಾಲೆಯ ಸಂಚಿಕೆಯು ಕನ್ನಡದಲ್ಲಿ ದೇಶಿಯ ವಿದ್ಯಾಶಾಲಾ ಪತ್ರಿಕಾ ಬರಲಾರಂಭಿಸಿತು.

1915 ರಲ್ಲಿ ಸರ್.ಎಂ ವಿಶ್ವೇಶ್ವರಯ್ಯನವರರಿಂದ ಸ್ಥಾಪಿಸಲ್ಪಟ್ಟ 'ಕನ್ನಡ ಸಾಹಿತ್ಯ ಪರಿಷತ್' ಪ್ರತಿ ವರ್ಷವು ನಾಡಿನ ಪ್ರಮುಖ ಸ್ಥಳದಲ್ಲಿ 'ಕನ್ನಡ ಸಾಹಿತ್ಯ ಸಮ್ಮೇಳವನ್ನು' ನಡೆಸಿಕೊಂಡು ಬರುತ್ತಿದೆ. ಈ ಸಮ್ಮೇಳನಗಳಿಗೆ 'ಕನ್ನಡ ನಾಡು-ನುಡಿ-ಸಂಸ್ಕೃತಿಗೆ' ಅಪಾರವಾಗಿ ಶ್ರಮಿಸಿದ ಗಣ್ಯ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿ ಆಯ್ಕೆ ಮಾಡಲಾಗುತ್ತದೆ. ಈ ದಿಸೆಯಲ್ಲಿ ಕನ್ನಡ ನಾಡು-ನುಡಿ-ಸಂಸ್ಕೃತಿ, ಸಾಹಿತ್ಯ ಕ್ಷೇತ್ರಗಳಿಗೆ-ಚಿರಸ್ಮರಣೀಯ-ಅವಿಸ್ಮರಣೀಯ ಸೇವೆ ಸಲ್ಲಿಸಿದ ಕನ್ನಡದ ಕಲಿ, ಗಂಡೆದೆಯ ಗಂಡುಗಲಿ ತಿ.ತಾ. ಶರ್ಮರನ್ನು 1947 ರಲ್ಲಿ ಡಿಸೆಂಬರ್ 29,30,31 ರಲ್ಲಿ ಕಾಸರಗೋಡಿನಲ್ಲಿ ನಡೆಯಲಿರುವ ಮುವತ್ತೊಂದನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ಕನ್ನಡದ ಹೆಮ್ಮೆಯ ಪ್ರಾತಿನಿಧಿಕ ಸಾಂಸ್ಕೃತಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ 1915 ರಲ್ಲಿ ಅರಂಭವಾದಾಗಿನಿಂದಲೂ ಚುನಾಯಿತ ಅಧ್ಯಕ್ಷರನ್ನು ಹೊಂದಿ, ಸಾಹಿತ್ಯ ಸೇವಾ ಸಂಸ್ಥೆಯಾಗಿ ಬೆಳೆದು ಸೇವೆ ಸಲ್ಲಿಸುತ್ತಿದೆ. ಇದರ ಮೊದಲ ಅಧ್ಯಕ್ಷರು ಶ್ರೀ ಹೆಚ್. ವಿ ನಂಜುಂಡಯ್ಯನವರು. ಅಂತೆಯೇ ಏಳನೆಯ ಅಧ್ಯಕ್ಷರಾಗಿ ಶರ್ಮಾಜಿಯವರು ಸೇವೆ ಸಲ್ಲಿಸಿದ್ದಾರೆ. ಅವರು 'ಎರಡನೇಯ ಚುನಾಯಿತ ಅಧ್ಯಕ್ಷರಾಗಿದ್ದರು'. ಅವರ ಅಧ್ಯಕ್ಷಗಿರಿಯ ಅಧಿಕಾರವದಿಯು 29-12-1947 ರಿಂದ 6-3-1949 ರವರಗಿನದಾಗಿದೆ.

'ಕನ್ನಡ ಪತ್ರಿಕೋದ್ಯಮ' ದ ಮೂಲಕ ದೊಡ್ಡ ಹೆಸರು ಮಾಡಿದ ಶರ್ಮರು 'ಕರ್ನಾಟಕದ ಮೋಕ್ಷ ಕನ್ನಡದ ಮೂಲಕವೇ' ಎಂದು ನಂಬಿ ನಡೆದವರು. ಅದಕ್ಕಾಗಿಯೆ ಜೀವನ ಪರ್ಯಂತ ಶ್ರಮಿಸಿ, ಮುಂದಿನ ಪೀಳಿಗೆಗೆ ಆದರ್ಶಪ್ರಾಯರಾಗಿ ಉಳಿದಿದ್ದಾರೆ. ಯುವ ಜನಾಂಗ ಆಂಗ್ಲಪರ ಭಾಷೆಯ ಹುಚ್ಚುಹೊಳೆಯಲ್ಲಿ ಕೊಚ್ಚಿಹೋಗುತ್ತಿದ್ದ ವೇಳೆಯಲ್ಲಿ ವಿದ್ಯಾವಂತ ಹೃದಯಗಳನ್ನು ಗೆಲ್ಲಲು ಕನ್ನಡಕ್ಕೆ ಒತ್ತು ನೀಡಿದರು. ಕನ್ನಡ ನಾಡ-ನುಡಿ-ಸಂಸ್ಕೃತಿಯ ಮಹತ್ವವನ್ನು ದಿಗಂತದೆತ್ತರಕ್ಕೆ ಕೊಂಡೊಯ್ಯುವ ಉನ್ನತ ಧ್ಯೇಯ ಹೊಂದಿದ್ದ 'ಶರ್ಮರು ತಮ್ಮ ಪತ್ರಿಕೆಯ ಸಂಚಿಕೆಗಳಲ್ಲಿ ಪ್ರಾಚೀನ

ಶಾಸನವೊಂದನ್ನು ಅಥವಾ ಐತಿಹಾಸಿಕ ಸ್ಮಾರಕವೊಂದನ್ನು ಕುರಿತು ಬರೆಯುತ್ತಿದ್ದರು[5]. ಪತ್ರಿಕೆಯ 'ಸಾಹಿತ್ಯ ಪ್ರಪಂಚ' ಅಂಕಣದಲ್ಲಿ ಪ್ರಕಟಗೊಂಡ 'ರನ್ನ ಕವಿ ಇಬ್ಬರಿದ್ದರೆ'?, 'ಪಂಪಮಹಾಕವಿಯ ಸ್ಮಾರಕೋತ್ಸವ', 'ಮೌರ್ಯ ಶಾತವಾಹನರ ಕಾಲವೂ ಕನ್ನಡ ಭಾಷೆಯೂ' 'ಬಿ.ವೆಂಕಟಚಾರ್ಯರ ಸ್ಮಾರಕ' ಮುಂತಾದ ಲೇಖನಗಳು ಎಂದೆಂದಿಗೂ ಓದುಗರ ಕುತೂಹಲ ಕೆರಳಿಸುವ 'ಅಮೂಲ್ಯ ಆಸ್ತಿ' ಗಳಾಗಿವೆ[5].

ಶರ್ಮರು ವಿಶ್ವಕರ್ಣಾಟಕದ ಮೂಲಕ ಒಂದು ಪಾಕ್ಷಿಕ ಉಪಸಂಚಿಕೆಗಳನ್ನು ಹೊರ ತಂದರು. ಇದರಲ್ಲಿ ಒಂದು "ಸಾಹಿತ್ಯ ಸಂಚಿಕೆ" ಯಾಗಿತ್ತು. ಅದು ಎಂಟು ಪುಟಗಳನ್ನು ಹೊಂದಿತ್ತು. ಅದರಲ್ಲಿ ಸಾಹಿತ್ಯ ಸಮಾಲೋಚನೆ, ಕವಿಕಲಾವಿಲಾಸ, ಕನ್ನಡದ ಮೈಸಿರಿ ಕಾವ್ಯಾವಲೋಚನೆ, ಶಬ್ದಸಂಪತ್ತು, ವಾದ ಭೂಮಿ, ಸ್ವೀಕಾರ, ಇತ್ಯಾದಿ ಅಂಕಣಗಳಿದ್ದವು . 'ಕನ್ನಡ ಮೈಸಿರಿ' ಭಾಗದಲ್ಲಿ ಕನ್ನಡ ನಾಡಿನಲ್ಲಿ ನಡೆಯುತ್ತಿದ್ದ ಸಾಹಿತ್ಯ ಚಟುವಟಿಕೆಗಳ ವರದಿಗಳನ್ನು ಪ್ರಕಟಿಸಲಾಗುತ್ತಿತ್ತು. ಈ ನಿಟ್ಟಿನಲ್ಲಿ ಪತ್ರಿಕೆಯನ್ನು ಸಾಂಸ್ಕೃತಿಕ ಬದುಕಿನ ಒಂದು ಅಂಗವನ್ನಾಗಿಸಲು ಪ್ರಯತ್ನಿಸಿದರು ಶರ್ಮರು.

"ಅದ್ಭುತ ಭಾಷಾಂತಕಾರ, ಸೃಜನಶೀಲ ಬರಹಗಾರರೂ" ಸಂಶೋಧಕರು ಆದ ಶರ್ಮರು ಪತ್ರಿಕಾರಂಗದ ಮೂಲಕ ಕನ್ನಡಕ್ಕೆ ಹೊಸ ಹೊಸ ಶಬ್ಧಗಳನ್ನು ರೂಪಿಸಿದರು; ಆ ಮೂಲಕ ಕನ್ನಡಕ್ಕೆ ಗಟ್ಟಿತನವನ್ನು ತಂದು ಕೊಟ್ಟರು. 'ಕರಾಳ ಶಾಸನ, ಅನರ್ಥ ವ್ಯವಹಾರ, ಅರಿಕೆ, ಅಧಿವೇಶನ ಅಖಂಡಕ್ಷೋಬೆ, ಅನುಗ್ರಹ, ಅಭ್ಯುದಯ, ಅಭೇದಬುದ್ಧಿ, ಅರ್ಥವಿವಾದ, ಅಗ್ನಿಭಕ್ಷಕರು, ಅರ್ಧಚಂದ್ರ ಪ್ರಯೋಗ, ಅಧಿಲೇಖ್ಯ, ಅಸಂದಿಗ್ಧ, ಚಕ್ರಗೋಷ್ಠಿ, ಮುದ್ರಾರಾಕ್ಷಸ, ಪೌರನೀತಿ, ವಿರಾಮ ಕುರ್ಚಿ, ನರೇಂದ್ರ ಭಾರತ, ಶ್ವೇತ ಪತ್ರ, ಭಿನ್ನವತ್ತಳೆ, ಕಪಿಮುಷ್ಟಿ' ಹೀಗೆ ಇನ್ನೂ ಅನೇಕ ಪದ-ಶಬ್ಧಗಳು ಇಂದಿಗೂ ಬಳಕೆಯಲ್ಲಿವೆ[6]. ವಿಶ್ವಕರ್ಣಾಟಕವು ನಾಡು ನುಡಿಯ ಬಗೆಗೆ ಅಭಿಮಾನ, ಕಳಕಳಿಯನ್ನು ಹೊಂದಿತ್ತು. ಅದರಲ್ಲಿ 'ಕರ್ನಾಟಕತ್ವ' ಜೀವಂತವಾಗಿತ್ತು.

ರಾಜ್ಯದಲ್ಲಿಯೇ ಮೊಟ್ಟಮೊದಲ ಬಾರಿಗೆ 'ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ' ಮಂಡ್ಯದಲ್ಲಿ ನಡೆಯಿತು. ಇದರ ಅಧ್ಯಕ್ಷತೆಯನ್ನು ತಿರುಮಲೆ ತಾತಾಚಾರ್ಯ ಶರ್ಮ ವಹಿಸಿದ್ದರು[7].ಈ ಸಮ್ಮೇಳನ ಮದ್ದೂರಿನಲ್ಲಿ ನಡೆಯಿತು. ಮಂಡ್ಯ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಸಮೇತನಹಳ್ಳಿ ರಾಮರಾಯರು ಮತ್ತು ಮದ್ದೂರು ತಾಲ್ಲೂಕು ಪ್ರತಿನಿಧಿ ಕೆ.ಟಿ. ಚಂದ್ರು ಇದರ ಎಲ್ಲಾ ವ್ಯವಸ್ಥೆ ಮಾಡಿದ್ದರು.

ಪ್ರೊಫೆಸರ್ ಎ.ಆರ್ ಕೃಷ್ಣಶಾಸ್ತ್ರಿಗಳು 'ಆಧುನಿಕ ಕನ್ನಡ ಸಾಹಿತ್ಯದ ಚಲನ ವಲನಗಳು' ಎಂಬ ವಿಷಯವಾಗಿ ಆಗ ಪ್ರಮುಖರು, ಪ್ರಸಿದ್ಧರು ಆಗಿದ್ದ ಕವಿಗಳು, ಸಾಹಿತಿಗಳು, ವಿರ್ಮಶಕರೇ ಮುಂತಾದ ಗಣ್ಯಾವ್ಯಕ್ತಿಗಳನೆಲ್ಲಾ ಸೇರಿಸಿ ಆ ವಿಚಾರವಾಗಿ 'ಒಂದು ಚರ್ಚಾಗೋಷ್ಠಿಯನ್ನು ಆಗಿನ ಇಂಟರ್ ಮೀಡಿಯಟ್ ಕಾಲೇಜಿನ ಒಳಾಂಗಣದಲ್ಲಿ ವ್ಯವಸ್ಥೆಗೊಳಿಸಿದರು' ಚರ್ಚಾಗೊಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದವರು

ಮೈಸೂರು ವಿಶ್ವವಿದ್ಯಾಲಯದ ಉಪ ಕುಲಪತಿಗಳಾಗಿದ್ದ ಶ್ರೀ ಎನ್.ಎಸ್ ಸುಬ್ಬರಾಯರು. ಮಹಾನ್ ಸಾಹಿತಿಗಳೂ, ವಿಮರ್ಶಕರೂ ಕವಿವರ್ಯರೂ ಪಾಲ್ಗೊಂಡಿದ್ದ ಸಮಾರಂಭದಲ್ಲಿ ತಿ.ತಾ ಶರ್ಮರು ಒಬ್ಬರಾಗಿದ್ದರು. ಶರ್ಮರು ತಮ್ಮ ವಾದವನ್ನು ಸಭೆಗೆ ನಿವೇದಿಸಲು ಆರಂಭಿಸಿದರು. ಈ ಪ್ರಸಂಗದಲ್ಲಿ ಏನಾಯಿತು? ಎಂಬುದರ ವಿಷಯವಾಗಿ ಅಣ್ಣ ಮಾಸ್ತಿಯವರು ತಮ್ಮ 'ನೆನಪುಗಳಲ್ಲಿ' ದಾಖಲಿಸಿದ್ದಾರೆ. ಶರ್ಮಾಜಿಯವರ ಹೇಳಿಕೆಯನ್ನು ಉದ್ಧರಿಸಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದ ಚಲನವಲನಗಳು ವಿಷಯದ ಪರವಾಗಿ ವಿದ್ವತ್ ಪೂರ್ಣ ಮಂಡನೆಗಳಾಗಿದ್ದವು. ಶರ್ಮರು 'ವಿರೋಧಪಕ್ಷ' ದ ತಮ್ಮ ವಾದವನ್ನು ಸಭೆಯ ಮುಂದಿಟ್ಟರು. ಗದಾಯುದ್ಧ ನಾಟಕದ ಮಾತುಗಳನ್ನು ಭೀಮಘರ್ಜನೆಯನ್ನು ಹೇಳುತ್ತಾ, ಆ ಸನ್ನಿವೇಶದ ಅಪೂರ್ವ ಚಿತ್ರವನ್ನು ಸಭೆಯ ಮುಂದಿಟ್ಟರು. ಆ ವೈಖರಿ ಅಧ್ಯಕ್ಷರ ಮನಸಿಗೇಕೋ ಏನೋ ಕಸಿವಿಸಿವುಂಟು ಮಾಡಿತ್ತು. ಸಭಾಧ್ಯಕ್ಷರು ಎದ್ದು, ಶರ್ಮರ ವಾದಕ್ಕೆ ತಮ್ಮ ಆಸಮ್ಮತಿ ಸೂಚಿಸಿದರು. 'ಅವರು ತಲೆಗೆ ಬಟ್ಟೆ ಇಲ್ಲದವರ' ಮಾತು ಕೇಳಬೇಕೆ? ಆ ಮಾತುಗಳನ್ನು ಬರೆದವರು ಎಂಥವರು.... ಮುಂತಾಗಿ ನುಡಿದರು.

ಶರ್ಮರು ಥಟ್ಟನೆ ಈ ವಿಚಾರವಾಗಿ 'ತಲೆಗೆ ಬಟ್ಟೆ ಇಲ್ಲದವನು ನಾನೊಬ್ಬನೆ; ಉಳಿದೆಲ್ಲ ಮಂದಿ ಮೈಸೂರು ರುಮಾಲೀನ ಮಹಾನೀಯರೆ' ಎಂದು ಹೇಳಿ ತಮ್ಮ ವಾದವನ್ನು ನಿಲ್ಲಿಸಿಬಿಟ್ಟರು. ವಿಚಾರಗಹನತೆ ಕಾಲಧರ್ಮದ ಚಿತ್ತವೃತ್ತಿ-ಪ್ರಾಚೀನ ಕಥಾನಕದ ಸಮಕಾಲೀನ ಚಿತ್ರಣದ ಪ್ರತ್ಯೇಕ ವೈಖರಿ ಇವನ್ನು ಶರ್ಮರು ಸೂಚಿಸುವವರಿದ್ದರು. ಸ್ಮಶಾನಕುರುಕ್ಷೇತ್ರ, ಗದಾಯುದ್ಧ ನಾಟಕ, ಇವುಗಳ ಸ್ವರೂಪ, ಭಾಷೆ, ರಂಗರೂಪ ಚಿತ್ರಣದ ಪ್ರತ್ಯೇಕತೆ ಇವು ಶರ್ಮರ ವಾದದ ನೆಲೆ-ಸೆಲೆ.

ಅತ್ಯಂತ ಮೌಲಿಕವಾಗಿ, ಮಾರ್ಗದರ್ಶಕವಾಗಿ, ಸಾಹಿತ್ಯ-ಸಂವಾದ ಲೋಕಕ್ಕೆ ಮಾದರಿಯಾಗಬಹುದಾಗಿದ್ದ ಒಂದು ಮಹತ್ವದ ಕಾರ್ಯಕ್ರಮ 'ಅಗ್ನಿಗಾಹುತಿಯಾಯ್ತು, ಅಮೃತಾನ್ನವೆಲ್ಲ'. ಈ ಪ್ರಸಂಗವನ್ನು ಕುರಿತು ವಿಶ್ವಕರ್ಣಾಟಕದಲ್ಲಿ ತಮ್ಮ ಹೇಳಿಕೆ ಪ್ರಕಟಿಸಿದರು. ಮಾಸ್ತಿಯವರು ಈ ಪ್ರಸಂಗ ಕುರಿತು ತಮ್ಮ ವಿಮರ್ಶೆ ಬರಹದಲ್ಲಿ ಬರೆದಿರುವುದು ಈ ಸಂದರ್ಭ ಕುರಿತ ಒಂದು ಗಮನಾರ್ಹ ವಿಚಾರಧಾರೆ.

ಶರ್ಮರ ವಿರೋಧ ಶತೃತ್ವದ ದೃಷ್ಟಿಯದ್ದಲ್ಲ; ಸತ್ಯದ ಅನ್ವೇಷಣಾ ಮಾರ್ಗ. ಬೆಂಕಿಯ ಕಾವಿಲ್ಲದೆ ಅಡುಗೆ ಆಗುವುದೇ?, ಚರ್ವಿತ ಚರ್ವಣ, ಕಾಳನ್ನು ತೂರುವುದು, ಕೇರುವುದು, ಆಯುವುದು, ಎಲ್ಲಾ ಆಗಬೇಕಲ್ಲವೇ, ಈ ಪ್ರಸಂಗಕ್ಕೆ ಮಾಸ್ತಿಯವರ ನಿಲುವೆ ಸತ್ಯಸಾಧು. ಶರ್ಮಾಜಿ ಆಚಾರ್ಯ ಬಿ.ಎಂ.ಶ್ರೀಗಳ ಶಿಷ್ಯರಲ್ಲವೇ? ಅವರ ಬಗ್ಗೆ ಅನನ್ಯವಾದ ಭಕ್ತಿ ಗೌರವ ಹೊಂದಿದ್ದವರಲ್ಲವೇ?- ಸಂದರ್ಭದ ಅವಶ್ಯಕತೆಗೆ ತಕ್ಕದ್ದಾಗಿ ಒಂದು 'ಕ್ಷ-ನೋಟವನ್ನು' ಶರ್ಮರು ಬೀರಿದ್ದರು. ಈ ಪ್ರಸಂಗ ನಿರಾಪದ ಸಾಹಿತ್ಯ ಕೃಷಿ

ವಿವೇಚನೆಗೆ ಪೂರ್ಣ ವಿರಾಮ ಹಾಕುವಂತಾದದ್ದು, ಮಾನ್ಯ ಎ.ಆರ್.ಕೃಷ್ಣಶಾಸ್ತ್ರಿಗಳ ಸದಾಪೇಕ್ಷೆಯ–ಸದ್ವಿಮಾರ್ಶನೆಲೆ ಎಂದು ಜನ್ಮದಲ್ಲೇ ಅಂತ್ಯಕಂಡದ್ದು ಆದ ದೌರ್ಭಾಗ್ಯ ಎನ್ನಬಹುದು.

1947 ರಲ್ಲಿ ಸ್ವಾತಂತ್ರ್ಯ ಬಂದ ಮೇಲೆ 'ಜವಾಬ್ದಾರಿ ಸರ್ಕಾರ'ಕ್ಕೆ ಸ್ಥಾಪನೆಗಾಗಿ 'ಮೈಸೂರು ಚಲೋ' ಚಳುವಳಿ ಆರಂಭವಾಯಿತು. ಈ ವೇಳೆಯಲ್ಲಿ ಶರ್ಮರು ನಾಡಿನ ಜನತೆಯನ್ನು ಮೈಸೂರು ಚಲೋಚಳುವಳಿಗೆ ಪ್ರೇರೇಪಿಸಲು ಹೆಚ್.ಎಸ್ ದೊರೆಸ್ವಾಮಿ ಯವರು ನಡೆಸುತ್ತಿದ್ದ 'ಪೌರವಾಣಿ' ಪತ್ರಿಕೆಗೆ 'ಕ್ರಾಂತಿಕಾರಕ ಲೇಖನ' ಗಳನ್ನು ಬರೆದರು[8]. ಶರ್ಮರ ಈ ಲೇಖನವನ್ನು ಪೌರವಾಣಿ ಪತ್ರಿಕೆಯು ಸರ್ಕಾರದ ಆಜ್ಞೆಯನ್ನು ಧಿಕ್ಕರಿಸಿ ಪ್ರಕಟಿಸಿತು. ಮೈಸೂರು ಚಲೋ ಚಳುವಳಿಯಲ್ಲಿ ಪಾಲ್ಗೊಂಡ ಶರ್ಮರು ಜೈಲು ಸೇರಬೇಕಾಯಿತು. ಜೈಲಿನಲ್ಲಿದ್ದಾಗಲೇ ಅವರನ್ನು ಸಾಹಿತ್ಯ ಸಮ್ಮೇಳದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಶರ್ಮರು ಮಾನಸಿಕವಾಗಿ ಧೀರೋದಾತ್ತರಾದರು.

ಕಾಸರಗೋಡಿನಲ್ಲಿ ನಡೆದ 'ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ' ಮಾತನಾಡಿದ ಶರ್ಮರು ತಮ್ಮ ಕನಸುಗಳನ್ನು ಹೊರ ಚೆಲ್ಲಿದರು.... 'ಕನ್ನಡ ಜನತೆ ನನ್ನನ್ನು ಅಧ್ಯಕ್ಷಸ್ಥಾನದಲ್ಲಿ ನಿಲ್ಲಿಸಿ ಜವಾಬ್ದಾರಿಯನ್ನು, ಕರ್ತವ್ಯಗಳನೊಗವನ್ನು ಹೊರಿಸಿದ್ದಾರೆ. ನಾನು *ಅವರ ಸೇವಕ.* ಅಧ್ಯಕ್ಷರು ಕರ್ನಾಟಕದ ಸರ್ವತೋಮುಖ ಪ್ರಗತಿಗಾಗಿ ಹೆಣಗಬೇಕು. ಸಮ್ಮೇಳದ ಬಹುಮತ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲು ಶ್ರಮಿಸಬೇಕು. ಹಾಗಾದಲ್ಲಿ ಮಾತ್ರವೇ ಅಧ್ಯಕ್ಷರಾಗಿ ಆಯ್ಕೆಯಾದವರ ಕರ್ತವ್ಯಗಳು 'ಸಾರ್ಥಕತೆ'ಯನ್ನು ಪಡೆದುಕೊಳ್ಳುತ್ತವೆ. 'ಕನ್ನಡದ ಮೂಲಕವೇ ಕರ್ನಾಟಕದ ಮೋಕ್ಷ' ಎಂದು ಅವರು ಗರ್ಜಿಸಿದರು. ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗಾಗಿ ಕನ್ನಡ ಸಾಹಿತ್ಯ ಪರಿಷತ್ ಯಾವ ನಿಟ್ಟಿನಲ್ಲಿ ಕಾರ್ಯಪ್ರವೃತ ವಾಗಬೇಕೆಂದು ತಮ್ಮ 'ಮನದಾಳದ ಮಾತು' ಗಳನ್ನು ಬಿಚ್ಚಿಟ್ಟರು. ಭಾಷೆ ಮತ್ತು ಸಾಹಿತ್ಯದ ಕ್ಷೇತ್ರದಲ್ಲಿ ನಿರಂತರವಾಗಿ ಕೃಷಿ ನಡೆಯಬೇಕಾಗಿದೆ. ಸಾಕಷ್ಟು ಸಂಶೋಧನೆ ಮತ್ತು ವ್ಯಾಪಕ ಪ್ರಮಾಣದ ಪ್ರಚಾರವನ್ನು ಕೈಗೊಳ್ಳಬೇಕಾಗಿದೆ. ಪ್ರಾಚೀನ ಗ್ರಂಥಗಳನ್ನು ಸಂಗ್ರಹಿಸಿ, ಸಂರಕ್ಷಿಸಿ ಪ್ರಕಟಿಸಬೇಕು. 'ವಿಶ್ವಕೋಶ–ನಿಘಂಟು' ಗಳನ್ನು ನಿರ್ಮಿಸಬೇಕು. ಕನ್ನಡದ ಲಿಪಿ, ಶಬ್ಧ ಸಂಪತ್ತನ್ನು ಅಭಿವೃದ್ಧಿ ಪಡಿಸಬೇಕು. ಕನ್ನಡದ ವಿಶಿಷ್ಟ ಪಠ್ಯ ಪುಸ್ತಕಗಳನ್ನು ಪ್ರಕಟಿಸಬೇಕು. ಲೇಖಕರಿಗೆ, ಗ್ರಂಥಕರ್ತರಿಗೆ ಪ್ರೇರಣೆ ನೀಡಬೇಕು. ಶಿಶು ಸಾಹಿತ್ಯವನ್ನು ರಚಿಸಬೇಕು. ಗದ್ಯ ಸಾಹಿತ್ಯಕ್ಕೆ ಪ್ರಾಧಾನ್ಯ ನೀಡಬೇಕು ಎಂದರು.

ಸಾಂಸ್ಕೃತಿಕ ಕ್ಷೇತ್ರದ ಸಂಶೋಧನೆಯನ್ನು ಶರ್ಮರು ಒತ್ತಿ ಹೇಳಿದರು. ಕಲೆ ವಾಸ್ತುಶಿಲ್ಪ, ಇತಿಹಾಸ, ಗತವೈಭವದ ಅವಶೇಷಗಳು, ಅನ್ವೇಷಣೆ ಮೊದಲಾಗಿ ಈ ಕ್ಷೇತ್ರಗಳಲ್ಲಿ ಸಂಶೋಧನೆಯನ್ನು ಕೈಗೊಳ್ಳಬೇಕು. ಶಿಲಾಶಾಸನಗಳನ್ನು ಅನ್ವೇಷಿಸಬೇಕು. ಪ್ರಾಚೀನ ಲಿಪಿಗಳ ಅನ್ವೇಷಣೆ ಶಾಖೆಗಳನ್ನು ತೆರೆಯಬೇಕು. ಈ ನಿಟ್ಟಿನಲ್ಲಿ ವಿವಿಧ

ಸಂಶೋಧನಾ ಸಂಸ್ಥೆಗಳೊಂದಿಗೆ ಸಂಬಂಧ ಕಲ್ಪಿಸಿಕೊಳ್ಳಬೇಕು. ಸಾಂಸ್ಕೃತಿಕ ಪರಂಪರೆಗೆ ಸಂಬಂಧಿಸಿದ ನಿದರ್ಶನ-ನಿರ್ದೇಶನ ಗ್ರಂಥಗಳ ರಚನೆ, ಅನುಸಂಧೇಯಗಳ ರಚನೆ ಪ್ರಕಟನೆಯ ಕಾರ್ಯ ಕೈಗೊಳ್ಳಬೇಕು ಇವುಗಳ ಸಂಶೋಧಕರಿಗೆ ಉದಾರ ನೆರವು ನೀಡಬೇಕು ಎಂದಿದ್ದರು.

ಕನ್ನಡ ನಾಡು ನುಡಿಯ ಪ್ರಗತಿಗಾಗಿ ಶಿಕ್ಷಣದ ಎಲ್ಲಾ ಹಂತಗಳಲ್ಲೂ ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸಬೇಕು. ಆಡಳಿತದ ಕಾರ್ಯಗಳೆಲ್ಲವೂ ಕನ್ನಡದ ಮೂಲಕವೇ ನಡೆಯಬೇಕು. ನ್ಯಾಯಾಲಯದ ಕಾರ್ಯಕಲಾಪಗಳೂ ಕೂಡ ಕನ್ನಡದಲ್ಲೇ ನಡೆಯಬೇಕು. ಕನ್ನಡದ ನಾಟಕಗಳು, ಹರಿಕಥೆಗಳು, ಯಕ್ಷಗಾನಗಳ ಪ್ರದರ್ಶನಗಳನ್ನು ಏರ್ಪಡಿಸಬೇಕು. ಕರುನಾಡಿನ ಸಂಸ್ಕೃತಿಯನ್ನು ಅಭಿಮಾನಿಸುವಂತೆ ಪ್ರಚಾರ ಮಾಡುವ ಉತ್ಸಾಹಿಗಳನ್ನು, ಶ್ರದ್ಧಾಳುಗಳನ್ನು ಸೃಷ್ಟಿಸುವ ಶಿಕ್ಷಣ ಸಂಸ್ಥೆಗಳನ್ನು ತೆರೆಯಬೇಕು. ಕನ್ನಡ ಚಲನಚಿತ್ರಗಳನ್ನು ನಿರ್ಮಿಸಿ, ಪ್ರದರ್ಶಿಸುವ ವ್ಯವಸ್ಥೆ ಕಲ್ಪಿಸಬೇಕು. ಈ ರೀತಿ ಪರಿಷತ್ತಿನ ಸರ್ವಾಂಗೀಣ ಪ್ರಗತಿಗೆ ಶ್ರಮಿಸಬೇಕೆಂದು ಶರ್ಮರು ಕರೆ ನೀಡಿದರು . ಪುರಾತತ್ವ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗಲೇ ಯಾರ ಹಂಗು, ಯಾವ ಪರಿಸ್ಥಿತಿಯ ಒತ್ತಡಕ್ಕೂ ಮಣಿಯದೆ, ತಮ್ಮ ಉತ್ಕಟವಾದ ಕನ್ನಡಾಭಿಮಾನದಿಂದ 'ಆ ಕಾಲದಲ್ಲಿಯೇ ಕನ್ನಡಕ್ಕೆ ರಾಷ್ಟ್ರಮಟ್ಟದಲ್ಲೂ ಮಹತ್ವಪೂರ್ಣವಾದ ಸ್ಥಾನ ದೊರಕಿಸಿ ಕೊಟ್ಟ ಹಿರಿಮೆ-ಗರಿಮೆ ಶರ್ಮರಿಗೆ ಸಲ್ಲುತ್ತದೆ'[9] 'ಸಾಹಿತ್ಯ- ಇತಿಹಾಸ ಇವೆರಡೂ ಎರಡು ಕಣ್ಣುಗಳಿದ್ದಂತೆ' ನಾಡಿನ ಇತಿಹಾಸದ ಅರಿವಿಲ್ಲದೆ ಮುಂದಿಟ್ಟ ಹೆಜ್ಜೆ ಮುಗ್ಗರಿಸಿ ಬಿದ್ದಂತೆ; 'ಇತಿಹಾಸದ ಅರಿವಿನ ಹೆಜ್ಜೆ ಗುರಿ ಮುಟ್ಟಿದಂತೆ' ಎಂದಿದ್ದರು.

ಶರ್ಮಾಜಿ ಅವರು "ಸಂಸ್ಕೃತಿ" ಅಂದರೇನು? ಎಂಬ ಮಾತಿಗೆ ಸಂಸ್ಕೃತಿ ಎಂದರೆ ಪರಿಶುದ್ಧ, ಪರಿಪೂರ್ಣ ಎಂದಿದ್ದಾರೆ. ವ್ಯಕ್ತಿಯು ದೋಷಗಳಿಂದ ಕೂಡಿದವ, ಅಂತೆಯೇ ಅಂತಹ ವ್ಯಕ್ತಿಗಳಿಂದ ಕೂಡಿದ ಸಮಾಜವು ದೋಷ ಪೂರಿತವಾದ್ದು. ಸಮಾಜವು ಪರಿಶುದ್ಧ ಪರಿಪೂರ್ಣವಾಗಬೇಕಾದರೆ ವ್ಯಕ್ತಿಯು ಪರಿಶುದ್ಧನಾಗಬೇಕು. ಈ ನಿಟ್ಟಿನಲ್ಲಿ ಪರಿಶುದ್ಧವಾದ, ವ್ಯಕ್ತಿ ಸರ್ವಶಿಷ್ಟವಾದ ಸಾಹಿತ್ಯವನ್ನು ಆಧ್ಯಾತ್ಮವನ್ನು ಕಲೆಯನ್ನು ರೂಢಿ-ಸಂಪ್ರದಾಯಗಳನ್ನೂ, ಆಚಾರ-ವಿಚಾರಗಳನ್ನು ಸಂಸ್ಕೃತಿ ಎನ್ನಲಾಗಿದೆ. ನಿರ್ದಿಷ್ಟ ಕಾಲವೊಂದರಲ್ಲಿ ಮಾನವ ಸಮಾಜ ನಡೆಸಿದ ಜೀವನ -ಸಾಧನೆಗಳು ಸಂರಕ್ಷಿಸಲ್ಪಟ್ಟು, ಮುಂದಿನ ತಲೆಮಾರಿನವರ ಮೇಲೆ ಪ್ರಭಾವ ಬೀರುವುದೇ ಸಂಸ್ಕೃತಿ. ಯಾವುದು ಮಾನವ ಜೀವನಕ್ಕೆ ಹಿತಕಾರಿಯಾದ, ಸಹಜವಾದ, ಪ್ರಿಯವಾದ ಅಭಿವೃದ್ಧಿಯನ್ನುಂಟು ಮಾಡುತ್ತದೆಯೋ ಅದೇ ಸಂಸ್ಕೃತಿ ಎಂದಿದ್ದಾರೆ[10].

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಶರ್ಮಾಜಿ

ಸುಮಾರು ಎರಡು ಶತಮಾನಗಳ ಬ್ರಿಟಿಷರ ದುರಾಡಳಿತದ ದಾಸ್ಯ ಸಂಕೋಲೆಯಿಂದ ಭಾರತ ಬಿಡುಗಡೆಗೊಂಡು 1947ರ ಆಗಸ್ಟ 15 ರಂದು ಸ್ವಾತಂತ್ರ್ಯಗಳಿಸಿತು. ಆನಂತರ ಕನ್ನಡ ಸಾಹಿತ್ಯ ಪರಿಷತ್ತಿನ ನಿಯಮಾವಳಿಗಳಲ್ಲಿಯೂ ಬದಲಾವಣೆಗಳಾದವು. ಸಂಸ್ಥಾನದ ಮಹಾ ರಾಜರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವುದು ಬೇಡವೆಂದೂ, ಅದಕ್ಕೆ ಪ್ರತಿಯಾಗಿ ವಾರ್ಷಿಕವಾಗಿ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೇ, ಮುಂದಿನ ಸಮ್ಮೇಳನದವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರಬೇಕೆಂದು ಸರ್ವಸದಸ್ಯರ ಸಭೆಯು ತೀರ್ಮಾನಿಸಿತು. ಅದರಂತೆ ಶರ್ಮರು "ಕನ್ನಡ ಸಾಹಿತ್ಯ ಪರಿಷತ್"ನ ಅಧ್ಯಕ್ಷರಾದರು.

1947ರ ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವ ಸದಸ್ಯರ ಸಭೆಯು, ಅಧ್ಯಕ್ಷರು ಸಭೆಯು ತೀರ್ಮಾನಿಸಿದ ಕಾರ್ಯಕಲಾಪಗಳನ್ನು ಕಾರ್ಯಚರಣೆಗಳನ್ನೂ ಶ್ರಮವಹಿಸಿ ನಡೆಸಬೇಕೆಂದು ಸೂಚಿಸಿತು. ಪರಿಷತ್ತಿನ ಅಧ್ಯಕ್ಷರು ಸಮಸ್ತ ಕನ್ನಡಿಗರ ಪ್ರತಿನಿಧಿಯಾಗಿ ಮುಂದೆ ನಿಂತು ಏಕೀಕರಣ ಚಳುವಳಿಯಲ್ಲಿ ಪಾಲ್ಗೊಳ್ಳಬೇಕೆಂದು ಒತ್ತಾಯಿಸಿತು. ಕರುನಾಡಿನ ಹಿತಕ್ಕಾಗಿ ಕಂಕಣ ತೊಟ್ಟು ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾದರು ಶರ್ಮರು.

ಶರ್ಮರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ನಿಯುಕ್ತರಾದಾಗ, ಅವರ ಕಾರ್ಯದರ್ಶಿಗಳಾಗಿ ಎಲ್.ಎಸ್. ಶೇಷಗಿರಿರಾಯರು; ಕೋಶಾಧಿಕಾರಿಯಾಗಿ ಎಂ.ವಾಸುದೇವ ಮೂರ್ತಿಗಳು; ಕಾರ್ಯನಿರ್ವಹಿಸಿದರು. ಇವರ ಅಧಿಕಾರದ ಅವಧಿಯಲ್ಲಿ ಪರಿಷತ್ತಿನ ಕಾರ್ಯ ಕಲಾಪಗಳಲ್ಲಿ ಕ್ರಾಂತಿಕಾರಕವಾದ ಬದಲಾವಣೆ ಗಳಾದವು. ಗ್ರಂಥ ಭಂಡಾರದಲ್ಲಿದ್ದ ಪುಸ್ತಕಗಳು ಓದುಗರಿಗೆ–ನೋಡುಗರಿಗೆ. ಸುಲಭವಾಗಿ ಸಿಗುವಂತಾಗಲು, ಗ್ರಂಥ ಭಂಡಾರದಲ್ಲಿದ್ದ ಪುಸ್ತಕಗಳ ಪಟ್ಟಿ (ಕ್ಯಾಟಲಾಗ) ಗಳನ್ನು ಸಿದ್ಧಗೊಳಿಸಿದರು. ಒಂದು ಪುಸ್ತಕ–ಗ್ರಂಥಕ್ಕೆ ಎರಡು ರೂಗಳಂತೆ 'ಇಡುಹಣ' ವನ್ನಿಟ್ಟು ಎರವಲು ಪಡೆದು ಓದುವ ಸೌಲಭ್ಯ ಒದಗಿಸಿದರು. ಇದರಿಂದಾಗಿ ಪರಿಷತ್ತಿಗೆ ಅಲ್ಪ ಆದಾಯವೂ ಬರತೊಡಗಿತು. ಪರಿಷತ್ತಿನ ಗ್ರಂಥಾಲಯವನ್ನು ಸುಧಾರಣೆಯ ನಿಟ್ಟಿನಲ್ಲಿ ಕೊಂಡೊಯ್ಯಲು ಸದಸ್ಯರು ಓದುಗರು ತಮ್ಮ ಸಲಹೆ, ಸೂಚನೆ, ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಬರೆಯಲು "ಸಲಹಾ ಬರಹ ಪುಸ್ತಕ" ವೊಂದನ್ನು ವ್ಯವಸ್ಥಗೊಳಿಸಿದರು. ಗ್ರಂಥಾಲಯದ ವೇಳಾಪಟ್ಟಿಯನ್ನು ಎಲ್ಲರಿಗೂ ಸರಿ ಹೊಂದುವಂತೆ ಬದಲಾಯಿಸಿದರು. ಅದರ ವೇಳೆಯನ್ನು ಬೆಳಗ್ಗೆ 8–30 ರಿಂದ 10ರವರೆಗೆ ಹಾಗೂ ಸಂಜೆ 4–30 ರಿಂದ 6–30ರವರೆಗೆ ನಿಗದಿಗೊಳಿಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಗಳು ಹಾಗೂ ಪ್ರಚಾರದ ಕಡೆಗೆ ಗಮನವನ್ನು ಕೇಂದ್ರೀಕರಿಸಲಾಯಿತು. ಸಾಹಿತ್ಯ ಪರಿಷತ್ತಿನ ಪತ್ರಿಕೆಯನ್ನು ಒಂದು ಉತ್ತಮ, ವಿಚಾರಪೂರ್ಣ ಪತ್ರಿಕೆಯನ್ನಾಗಿ ಮಾಡಲು ಶ್ರದ್ಧೆ ವಹಿಸಿದರು. ಕನ್ನಡ ನುಡಿ ಪತ್ರಿಕೆಗೂ ನವಚೈತನ್ಯವನ್ನು ತುಂಬಿದರು. ಸಾಮಾನ್ಯ ಜನರಿಗೆ ಪ್ರಾಚೀನ ಕನ್ನಡ ಕಾವ್ಯಗಳ ಮಹತ್ವವನ್ನು ತಿಳಿಸಿ, ಅವರಲ್ಲಿ ಕನ್ನಡಾಭಿಮಾನವನ್ನೂ ಸಾಹಿತ್ಯಾಭಿಮಾನವನ್ನು ಬಡಿದೆಬ್ಬಿಸಿದರು. ಲಕ್ಷ್ಮೀಶ ಕವಿಯ ಸಂಸ್ಕೃತದ 'ಜೈಮಿನಿ ಭಾರತ' ವನ್ನು ಸರಳ ಗದ್ಯಾನುವಾದ ಮಾಡಿಸಿ ಪ್ರಕಟಿಸಿದರು. 'ಕನ್ನಡ ಕಣ್ವ' ಎಂದು ಕನ್ನಡ ನಾಡಿನಲ್ಲಿ ಮನೆ ಮಾತಾಗಿದ್ದ ಬಿ.ಎಂ.ಶ್ರೀಕಂಠಯ್ಯನವರ 'ಕನ್ನಡ ಬಾವುಟ' ಕೃತಿಯು ಶರ್ಮರ ಕಾಲದಲ್ಲಿ ದ್ವಿತೀಯ ಮುದ್ರಣ ಕಂಡಿತು.

ಸಾಹಿತ್ಯ ಪರಿಷತ್ತಿನ 'ಅಚ್ಚುಕೂಟ' ದ ವ್ಯವಸ್ಥೆಯಲ್ಲಿಯೂ ಅವರು ಹಲವಾರು ಸುಧಾರಣೆಗಳನ್ನು ಜಾರಿಗೊಳಿಸಿದರು. ಮುದ್ರಣ ತಜ್ಞರೂ ತಮ್ಮ ಮಿತ್ರರೂ ಆಗಿದ್ದ ಶ್ರೀ ರಾಮ್ ಎಂಬುವವರನ್ನು ಅಚ್ಚುಕೂಟದ ಮೇಲ್ವಿಚಾರಣೆಗಾಗಿ ನೇಮಿಸಿದರು. ಶರ್ಮರ ಕಾರ್ಯನಿಷ್ಠೆಯನ್ನು ಕಂಡು ಅಲ್ಲಿನ ಕಾರ್ಮಿಕರು ಕ್ರಿಯಾಶೀಲರಾಗಿ ದುಡಿಯ ತೊಡಗಿದರು. ಎಲ್ಲರ ಸಾಮೂಹಿಕ ಪ್ರಯತ್ನದಿಂದಾಗಿ ಪರಿಷತ್ತಿಗೆ ಸ್ವಲ್ಪ ಲಾಭವು ಬರುವಂತಾಯಿತು.

'ನಡೆ ಮುಂದೆ – ನಡೆ ಮುಂದೆ ನುಗ್ಗಿ ನಡೆ ಮುಂದೆ, ಕನ್ನಡಕ್ಕಾಗಿ, ಕರುನಾಡಿಗಾಗಿ ಕುಗ್ಗದೆ-ಜಗ್ಗದೆ ನುಗ್ಗಿ ನಡೆ ಮುಂದೆ' ಎನ್ನುತ್ತಾ ಕನ್ನಡ ಕೆಲಸಕ್ಕೆಂದು ಸದಾಸಿದ್ಧರಾಗಿ ಮುನ್ನುಗ್ಗುತ್ತಿದ್ದ 'ಕನ್ನಡದ ಸೇನಾನಿ ಶರ್ಮರು' ಸಾಹಿತ್ಯ ಪರಿಷತ್ತನ್ನು ಆರ್ಥಿಕ ಸುಸ್ಥಿತಿಯತ್ತ ಒಯ್ಯಲು ಕಾರ್ಯ ಪ್ರವೃತರಾದರು. ಈ ನಿಟ್ಟಿನಲ್ಲಿ ಪರಿಷತ್ತಿನ ಭವನವನ್ನು ಬಾಡಿಗೆಗೆ ಕೊಡಲಾರಂಬಿಸಿದರು. ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು 'ದತ್ತಿನಿಧಿ' ಗಳನ್ನು ಸಂಗ್ರಹಿಸಲು ಊರೂರು ಅಲೆದರು. ಹತ್ತು ರೂಪಾಯಿಗಳಿದ್ದ ಸದಸ್ಯತ್ವದ ಚಂದಾಹಣವನ್ನು ಒಂದು ರೂಪಾಯಿಗೆ ಇಳಿಸಿದರು. ಆ ಮೂಲಕ ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು ಸದೃಢ ಮಾಡಲು ಪ್ರಯತ್ನಿಸಿದರು. ಅವರು ಪತ್ರಿಕೋದ್ಯಮದ ಹೋರಾಟದ ಮೂಲಕ ಜನಪ್ರಿಯತೆ ಗಳಿಸಿದ್ದರಿಂದ ಅಂದಿನ ಸರ್ಕಾರದಿಂದಲೂ ಸ್ವಲ್ಪ ಧನಸಹಾಯ ಬರುವಂತಾಯಿತು. ಅವರೇ ಸಾಹಿತ್ಯ ಪರಿಷತ್‌ಗೆ 'ದೂರವಾಣಿ' ಸೌಲಭ್ಯವನ್ನು ಮೊಟ್ಟಮೊದಲು ಕಲ್ಪಿಸಿದವರು.

ಶರ್ಮರ ಅವಧಿಯಲ್ಲಿ 'ಗಮಕ ಕಲೆ' ಯು ವ್ಯಾಪಕವಾಗಿ ಪ್ರಚಾರಗೊಂಡಿತು. ಇಂದಿನ ಕಾಲದಲ್ಲಿ ಗಮಕ ತರಗತಿಗಳು ಪರಿಷತ್ತಿನ ಆವರಣದಲ್ಲಿ ಮಾತ್ರ ನಡೆಯುತ್ತಿದ್ದವು. ಆಗ ಶರ್ಮರು ಗಮಕ ಕಲೆಯಲ್ಲಿ ಪ್ರಸಿದ್ಧಿ ಪಡೆದಿದ್ದ 'ಗಮಕ ರಾಘವೇಂದ್ರರಾಯ' ರ ಮೂಲಕ 'ಗಮಕ ಶಿಕ್ಷಕರ ತರಬೇತಿ'ಯನ್ನು ಆರಂಭಿಸಿದರು. ಇಲ್ಲಿ ತರಬೇತಿ ಪಡೆದ ಶಿಕ್ಷಕರು ರಾಜ್ಯದ ವಿವಿದೆಡೆ ಗಮಕ ಕಲೆಯ ತರಗತಿಗಳನ್ನು

ನಡೆಸುವುದರ ಮೂಲಕ ಗಮಕ ಕಲೆ ವ್ಯಾಪಕವಾಗಿ ಹರಡಲು ಸಹಾಯಕವಾಯಿತು: ಪ್ರಾಚೀನ ಕಾವ್ಯಗಳ ಪ್ರಚಾರವೂ ಸಾಗಿತು. ಕನ್ನಡವನ್ನು ಜಾಗೃತಗೊಳಿಸಲು ಯೋಚಿಸಿದ ಶರ್ಮಾಜಿ ಮೈಸೂರು ಮಹಾರಾಜರ ಅನುಮತಿ ಪಡೆದುಕೊಂಡು ಬೆಂಗಳೂರು ನಗರದ ಎಲ್ಲಾ ಕಾಲೇಜುಗಳಲ್ಲಿ "ಕನ್ನಡದ ಹಬ್ಬ" ವನ್ನು ಆಚರಿಸಬೇಕೆಂದು ಕರೆಕೊಟ್ಟರು. ದಿ:16-4-1948 ರಿಂದ 24-4-1948 ರ ವರಗೆ ಬೆಂಗಳೂರಿನ ಪ್ರತಿಯೊಂದು ಕಾಲೇಜಿನಲ್ಲಿಯೂ "ಕನ್ನಡ ಹಬ್ಬ" ನಡೆದು ಕಾಲೇಜಿನ ತರುಣ-ತರುಣಿಯರಲ್ಲಿ ಕನ್ನಡತನವನ್ನು ಬಡಿದೆಬ್ಬಿಸಿತು.

ಸ್ವತಃ ಶಾಸನ ತಜ್ಞರಾಗಿದ್ದ ಶರ್ಮರು, ಯುವಕರು ಜನ ಸಾಮಾನ್ಯರೂ ಶಾಸನ ತಂತ್ರಗಾರಿಕೆಯನ್ನು ಕಲಿಯಲಿ ಎಂಬ ಮಹಾದಾಸೆಯಿಂದ ಶಾಸನ ತರಗತಿಗಳನ್ನು ಆರಂಭಿಸಿದರು. 1948 ರಲ್ಲಿ ಪರಿಷತ್ "ವಸಂತ ಸಾಹಿತ್ಯೋತ್ಸವ" ವನ್ನು ಆಚರಿಸಿತು. ಇದರಲ್ಲಿ ಕನ್ನಡ ಸಂಘಗಳ ಗೋಷ್ಠಿ , ಮಹಿಳಾ ಗೋಷ್ಠಿ, ಕವಿ ಗೋಷ್ಠಿಗಳು ನಡೆದವು. ಇದರ ಜೊತೆಗೆ ಗ್ರಂಥ ಪ್ರದರ್ಶನ ಕಲಾ ಪ್ರದರ್ಶನ, ವಸ್ತು ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮಗಳ ಜರುಗಿದ್ದವು.

1948 ರ ಜನವರಿ 30 ರಂದು ಗಾಂಧೀಜಿಯವರ ಹತ್ಯೆಯಾಯಿತು. ಆಗ ಶರ್ಮರು 'ಸಂತಾಪ ಸೂಚಕ ಸಭೆ" ಯನ್ನು ಸಾಹಿತ್ಯ ಪರಿಷತ್ತಿನಲ್ಲಿ ಮತ್ತು ತಾವು ಅಧ್ಯಕ್ಷರಾಗಿದ್ದ ವಿಶ್ವೇಶ್ವರಪುರದ ಲೋಕಮಾನ್ಯ ಸಂಘದ ಆಶ್ರಯದಲ್ಲಿ ನಡೆಸಿದರು. ಆಗಿನ 'ಕನ್ನಡ ನುಡಿ' ಸಂಚಿಕೆಯನ್ನು'ಗಾಂಧಿ ಸ್ಮರಣ ಸಂಚಿಕೆ' ಯಾಗಿ ಪ್ರಕಟಿಸಿದರು. 1948ರ ಶರ್ಮಾರ ಅವಧಿಯಲ್ಲಿ ಜವಾಹರಲಾಲ್ ನೆಹರು, ಚಕ್ರವರ್ತಿರಾಜಗೋಪಾಲಚಾರಿ, ಮೊದಲಾದವರು ಪರಿಷತ್ತಿಗೆ ಭೇಟಿ ನೀಡಿದ್ದರು. ಪರಿಷತ್ತಿಗೆ ಹಣದ ಅಭಾವದಿಂದ ಬಳಲುತ್ತಿದ್ದರೂ ಕನ್ನಡದ ಕೆಲಸ ನಿಲ್ಲಬಾರದೆಂದು ಹಠತೊಟ್ಟು ದುಡಿದರು. ಅವರ ಅವಧಿಯಲ್ಲಿ ಪರಿಷತ್ ಹಲವು ಸುಧಾರಣೆಗಳನ್ನು ಕಂಡಿತು ಈ ದಿಸೆಯಲ್ಲಿ ಪರಿಷತ್ತಿನ ಸರ್ವತೋಮುಖ ಪ್ರಗತಿಗಾಗಿ ಶರ್ಮರು ಸಲ್ಲಿಸಿದ ಸೇವೆ ಅಸಾಧಾರಣವಾದುದ್ದಾಗಿದೆ.

ಮಿಥಿಕ್ ಸೊಸೈಟಿಯ ಅಧ್ಯಕ್ಷರಾಗಿ ಶರ್ಮ

ಭಾರತೀಯ ಸಂಸ್ಕೃತಿಯ ಅಧ್ಯಯನಕ್ಕೆ ತನ್ನನ್ನು ತಾನು ಅರ್ಪಿಸಿಕೊಂಡಿದ್ದು, ಬೆಂಗಳೂರು ಮಹಾನಗರದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಮಿಥಿಕ್ ಸೊಸೈಟಿಯು ಒಂದು. ಭಾರತೀಯ ಜೀವನ ಮತ್ತು ಸಂಸ್ಕೃತಿಯನ್ನು ತಿಳಿದುಕೊಳ್ಳಲು ಕೂತೂಹಲಕಾರಿಗಳಾಗಿದ್ದ ಎಫ್.ಜೆ. ರಿಚರ್ಡ ಮತ್ತು ಸ್ನೇಹಿತರು 5/5/1909ರಲ್ಲಿ ಈ ಸಂಸ್ಥೆಯನ್ನು ಆರಂಭಿಸಿದರು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಮೊದಲ ನಿರ್ದೇಶಕರಾಗಿದ್ದ ಡಾ॥ಮಾರಿಸ್ ಟ್ರಾವರ್ಸ್ ಅವರು ಮಿಥಿಕ್ ಸೊಸೈಟಿಯ ಅಧ್ಯಕ್ಷ ರಾಗಿದ್ದರು. ಪುರಾತನ ವಿಚಾರಗಳ ಅಧ್ಯಾಯನಕ್ಕೆ ಸಂಸ್ಥೆ ತನ್ನನ್ನು ತಾನು ತೊಡಗಿಸಿಕೊಂಡಿತ್ತು. ಈ ಸಂಸ್ಥೆಯು 1960ರಲ್ಲಿ 'ಸುವರ್ಣಮಹೋತ್ಸವ'ವನ್ನು ಅಚರಿಸಿಕೊಂಡಿತು. ಖ್ಯಾತ ವಿಜ್ಞಾನಿ ಸರ್.ಸಿ.ವಿ

ರಾಮನ್ ಅವರು 1916 ರಲ್ಲಿ ಈ ಸಂಸ್ಥೆಯ ಗೌರವ ಅಧ್ಯಕ್ಷರಾಗಿದ್ದರು. ಡಾ॥ ಬೃಜೇಂಧ್ರನಾಥಸೀಲ್, ದಿವಾನ್ ಮಿರ್ಜಾ ಇಸ್ಮಾಯಿಲ್, ಡಾ॥ ಆರ್.ಶಾಮಶಾಸ್ತ್ರಿಗಳು, ನರಸಿಂಹಾಚಾರ್ ಇವರೆಲ್ಲ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಈ ಸಂಸ್ಥೆಯು, ಮಾನವ ಶಾಸ್ತ್ರ, ಶಾಸನ ಶಾಸ್ತ್ರ, ನಾಣ್ಯ ಶಾಸ್ತ್ರ, ಜಾನಪದ, ಪುರಾಣ, ದಕ್ಷಿಣ ಭಾರತದ ಇತಿಹಾಸ, ಜನಾಂಗೀಯ ಸಂಪ್ರದಾಯ, ಧರ್ಮಗಳ ಕುರಿತು ಅಧ್ಯಯನ ಮತ್ತು ಸಂಶೋಧನೆಯಲ್ಲಿ ತೊಡಗಿದೆ[11]. ಸುಸಜ್ಜಿತವಾದ ಗ್ರಂಥಾಲಯವನ್ನು ಹೊಂದಿದ್ದು ಓದುಗರಿಗೆ ಸಂಶೋಧಕರಿಗೆ ನೆರವಾಗುತ್ತಿದೆ. 1927ರಲ್ಲಿ ಮಹಾತ್ಮ ಗಾಂಧಿಯವರು ಈ ಸಂಸ್ಥೆಗೆ ಭೇಟಿ ನೀಡಿ 'ಹರಿಜನೋದ್ಧಾರ' ಎಂಬ ವಿಷಯದ ಬಗ್ಗೆ ಮಾತನಾಡಿದ್ದರು. 'ಗುರು ರವೀಂದ್ರನಾಥ ಠಾಕೂರ್' ರವರು 1919 ರಲ್ಲಿ ಇಲ್ಲಿಗೆ ಭೇಟಿ ನೀಡಿದ್ದರು. ಉತ್ತಮ ಗುರಿ ಉದ್ದೇಶಗಳನ್ನು ಹೊಂದಿದ್ದ ಸಂಸ್ಥೆಯು 1962–63ರ ವೇಳೆಗೆ ಅರ್ಥಿಕ ಹಿನ್ನಡೆಯನ್ನು ಕಂಡಿತು. ಇದೇ ವೇಳೆಯಲ್ಲಿ ಸಂಸ್ಕೃತಿ ಇತಿಹಾಸ–ಪರಂಪರೆಗಳ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿದ್ದ ಶರ್ಮರು ಮಿಥಿಕ್ ಸೊಸೈಟಿಯ ಸಂಪರ್ಕಕ್ಕೆ ಬಂದರು. ಅವರ ಸಂಪರ್ಕದಿಂದಾಗಿ ಸಂಸ್ಥೆಯಲ್ಲಿ ವಿದ್ಯುತ್ ಸಂಚಲನ ಉಂಟಾಯಿತು. ಶರ್ಮರು ಸಂಸ್ಥೆಯ ಬಗ್ಗೆ ಮುತುವರ್ಜಿ ವಹಿಸಿ ಅನೇಕ ತರುಣರನ್ನು ಕರೆತಂದು ಅದರ ಸದಸ್ಯರನ್ನಾಗಿ ಮಾಡಿಸಿದರು .ಸಂಸ್ಥೆಯ ನಿರ್ಭೀತ ವಕ್ತಾರರಾಗಿ ಕಾರ್ಯನಿರ್ವಹಿಸಿದರು.

ಆನಂತರ 1969 ರಿಂದ ನಾಲ್ಕು ವರ್ಷಗಳವರೆಗೆ ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ತಮ್ಮ ಅವಧಿಯಲ್ಲಿ ಮಿಥಿಕ್ ಸೊಸೈಟಿಯ ಗ್ರಂಥಭಂಡಾರವನ್ನು ಸುವ್ಯವಸ್ಥಿತ ಗೊಳಿಸಲು ಕ್ರಮ ಕೈಗೊಂಡರು. ಗ್ರಂಥಾಲಯದ ಮೇಲ್ವಿಚಾರಣೆಗಾಗಿ ಶ್ರೀಮತಿ ಮಣಿ ಎಂಬ ಗ್ರಂಥಪಾಲಕರನ್ನು ನೇಮಿಸಿದರು. ಗ್ರಂಥಾಲಯದ ಸಹಾಯಕರನ್ನು ಕೂಡ ನೇಮಿಸ ಲಾಯಿತು. ವ್ಯವಸ್ಥಿತವಾದ ಕ್ರಮಬದ್ಧವಾದ ಗ್ರಂಥಗಳ ಪಟ್ಟಿ ತಯಾರಿಸಿದರು. ಅಮೂಲ್ಯ ಗ್ರಂಥಗಳ ಸಂರಕ್ಷಣೆಗಾಗಿ ಗ್ರಂಥಾಲಯವನ್ನು "ಪರಾಮರ್ಶನ ಗ್ರಂಥಾಲಯ" ವನ್ನಾಗಿಸಿದರು. ಸೊಸೈಟಿಯು 'ಡಾಲಿ ಮೆಮೋರಿಯಲ್ ಹಾಲ್' ನ ಮುಂದಿನ ಭಾಗದ ನಿವೇಶನವು ಬೇರೆಯವರ ಪಾಲಾಗುವ ಸನ್ನಿವೇಶ ಸೃಷ್ಟಿಯಾಗಿತ್ತು. ಈವೇಳೆಯಲ್ಲಿ ಶರ್ಮರು ದೂರದೃಷ್ಟಿಯಿಂದ ಈ ನಿವೇಶನದಲ್ಲಿ ವಿಶಾಲವಾದ ಭವನ ನಿರ್ಮಿಸಲು ಅಡಿಪಾಯ ಹಾಕಿಸಿದರು.

ಶರ್ಮಾಜಿಯವರ ಅವಧಿಯಲ್ಲಿ 1973ರಲ್ಲಿ ಸಂಸ್ಥೆಯು 'ವಜ್ರಮಹೋತ್ಸವ' ವನ್ನು ಆಚರಿಸಿಕೊಂಡಿತು. ಸಂಸ್ಥೆಯ ಅಧ್ಯಕ್ಷರಾದ ಶರ್ಮರು ಯಶಸ್ವಿಯಾಗಿ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದ ಅವರು ಶಿಲಾಶಾಸನ, ಲಿಪಿ, ನಾಣ್ಯ, ಪುರಾವಸ್ತು ಶಾಸ್ತ್ರಗಳು, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಆರಂಭಿಸುವುದು, ಸಂಶೋಧನಾ ಅಧ್ಯಯನ ಮಾಡುವವರಿಗಾಗಿ ಒಂದು ಮ್ಯೂಸಿಯಂ

ಸ್ಥಾಪಿಸಿ ಬೆಳೆಸುವುದು, ಗ್ರಂಥಾಲಯಕ್ಕೆ ಅಮೂಲ್ಯವಾದ, ಸತ್ವಯುತವಾದ ಗ್ರಂಥಗಳನ್ನು, ನಿಯತ ಕಾಲಿಕೆಗಳನ್ನು ತರಿಸುವುದು, ಮೊದಲಾದ ಭವಿಷ್ಯದ ಯೋಜನೆಗಳನ್ನು ಸೂಚಿಸಿದರು[12]. ಸಂಸ್ಥೆಯ ಆರ್ಥಿಕ ಸ್ಥಿತಿ ಸುಧಾರಿಸಲು ನಿವೇಶನವನ್ನು ಬಾಡಿಗೆಗೆ ನೀಡಿದ್ದು ಇದರ ದೂರದೃಷ್ಟಿ ಅಭಿವೃದ್ಧಿ ಯೋಜನೆಯ ಸಂಕೇತವಾಗಿದೆ. ಅವರು ಬದುಕಿದ್ದ ಕಾಲದವರೆಗೂ ಸೂಸೈಟಿಯ ಪ್ರಗತಿಗಾಗಿ ಮತ್ತು ಅದನ್ನು ಸಾರ್ವಜನಿಕ ಸ್ನೇಹಿಯನ್ನಾಗಿ ಮಾಡಲು ಶ್ರಮಿಸಿದರು. ಈ ನಿಟ್ಟಿನಲ್ಲಿ ಅವರು ಸಲ್ಲಿಸಿದ ಸೇವೆ ಅಮೋಘ, ಅದ್ಭುತ.

: : ಅಡಿ ಟಿಪ್ಪಣಿ : :

1. ಶರ್ಮರ ಆತ್ಮ ಚರಿತ್ರೆ, ನನ್ನ ಜೀವನ ಮತ್ತು ಧ್ಯೇಯ ಪು.ಸಂ – 249
2. ಅದೇ......... ಪು.ಸಂ– 251
3. ತಿರುಮಲೆ ತಾತಾಚಾರ್ಯ ಶರ್ಮ ಪು.ಸಂ– 25
4. ನನ್ನ ಜೀವನ ಮತ್ತು ಧ್ಯೇಯ ಪು.ಸಂ– 283
5. ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಪತ್ರಿಕೆಗಳ ಪಾತ್ರ ಪು.ಸಂ– 83
6. ಅದೇ....... ಪು.ಸಂ– 83
7. ಭಾರತದ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ, ಮಂಡ್ಯ ಜಿಲ್ಲೆ ಪು.ಸಂ–632
8. ವಿಶ್ವಕರ್ನಾಟಕದ ತಿ.ತಾ.ಶರ್ಮ ಪು.ಸಂ– 140
9. ಉದಯವಾಣಿ ನಮ್ಮ ಬೆಂಗಳೂರು ಪುರವಣೆ ಜುಲೈ 17 2003 ಪು.ಸಂ– 02
10. ಆರನೇ ಚಾಲುಕ್ಯ ಸಾಮ್ರಾಜ್ಯೋತ್ಸವ ಸಂಚಿಕೆ ಪು.ಸಂ– 08
11. ಭಾರತೀಯ ಸಂಸ್ಕೃತಿ ಮತ್ತು ಕೃಷಿ ಕುರಿತ ವಿಚಾರ ಸಂಕೀರಣ ಸಂಚಿಕೆ
    ಮಿಥಿಕ್ ಸೊಸೈಟಿ ಪು.ಸಂ –204
12. ವಿಶ್ವಕರ್ನಾಟಕದ ತಿ.ತಾ.ಶರ್ಮ ಪು.ಸಂ– 154

ಅಧ್ಯಾಯ 5

ಪತ್ರಿಕೆ ಮತ್ತು ಲೇಖನಗಳು

ಕನ್ನಡ ಪತ್ರಿಕಾರಂಗ ಕಂಡ ಮಹಾನ್‌ಚೇತನ ತಿ.ತಾ ಶರ್ಮರು ಅವರು ಕನ್ನಡ ನಾಡು ಕಂಡ ಅಸಾಧರಣ ಪತ್ರಕರ್ತರು; ಸಂಪಾದಕರು ಆಗಿದ್ದರು. ತಮ್ಮ ವೃತ್ತಿಯ ಬಾಳು ಬದುಕಿನ ಬಹಳಷ್ಟು ಕಾಲವನ್ನು ಆ ವೃತ್ತಿಯ ಸಾರ್ಥಕ ವ್ಯವಸಾಯದಲ್ಲಿಯೇ ಸೆವೆಸಿದರು. ರಾಜಕೀಯದ ಬಿರುಗಾಳಿಗೆ ಸಿಕ್ಕಿ ಗೊಂದಲಕ್ಕೆ ಒಳಗಾಗಿದ್ದರೂ ಮಹಾತ್ಮರ ಆಶೀರ್ವಾದ ಬಲದಲ್ಲಿ ಪತ್ರಿಕಾ ರಂಗಕ್ಕೆ ಕಾಲಿಟ್ಟರು. 'ವಿಶ್ವಕರ್ಣಾಟಕ' ಎಂಬ ವಾರಪತ್ರಿಕೆಯನ್ನು ಆರಂಭಿಸಿದರು. ಈ ಪತ್ರಿಕೆಯಲ್ಲಿ ಕ್ರಾಂತಿಕಾರಕ–ಪ್ರೇರಕ ಲೇಖನ ಗಳನ್ನು ಪ್ರಕಟಿಸಿ ನಾಡಿನವರನ್ನು ಎಚ್ಚರಗೊಳಸಿದರು. ಕನ್ನಡಿಗರನ್ನು ನಾಡು–ನುಡಿಯತ್ತ ಸೆಳೆದು, ಅವರನ್ನು ಈ ನಾಡ ಸಾಂಸ್ಕೃತಿಕ ಏಕೀಕರಣಕ್ಕಾಗಿ ಹುರಿದುಂಬಿಸಿದರು.

ಆಂಧ್ರದ ಟಂಗಟೂರು ಪ್ರಕಾಶಂರವರ ನಿಕಟ ಸಾಮಿಪ್ಯದಿಂದಾಗಿ ಶರ್ಮರ ಆದರ್ಶ ಜೀವನ ಸೇವೆಗೆ ಹೊಸ ತಿರುವು ಪಡೆಯಿತು. ಟಿ. ಪ್ರಕಾಶಂರವರ ಸರಳಜೀವನ, ತ್ಯಾಗಶೀಲತೆ, ಉಜ್ವಲ ರಾಷ್ಟ್ರಪ್ರೇಮ ಹಾಗೂ ದೇಶದ ದಾಸ್ಯ ವಿಮೋಚನೆಗಾಗಿ ಎಂತಹ ತ್ಯಾಗಕ್ಕಾಗದರೂ ಸಿದ್ಧರಾಗಿದ್ದ ಅವರ ದೃಢಸಂಕಲ್ಪವು ಶರ್ಮರ ಮನ ಸೂರೆಗೊಂಡಿತು. ಗಾಂಧೀಜಿಯವರ ಅಹಿಂಸಾ ಸಂದೇಶವನ್ನು ಪ್ರಚಾರ ಮಾಡಲು, ದೇಶದ ಸಂಪೂರ್ಣ ಸ್ವಾತಂತ್ರ ಸಾಧನೆಗಾಗಿ ಅವರು "ಸ್ವರಾಜ್ಯ" ಪತ್ರಿಕೆಯನ್ನು ಆರಂಭಿಸಿದ್ದರು. ಮದ್ರಾಸ್‌ನಲ್ಲಿದ್ದಾಗಲೇ ಒಂದುದಿನ ತಂಗಟೂರು ಪ್ರಕಾಶಂರನ್ನು ಭೇಟಿ ಮಾಡಿದರು. ಪ್ರಕಾಶಂ ಶರ್ಮರನ್ನು ತಮ್ಮ "ಸ್ವರಾಜ್ಯ" ಪತ್ರಿಕಾ ಕಾರ್ಯಾಲಯಕ್ಕೆ ಕರೆದುಕೊಂಡು ಹೋದರು. ಕಾರ್ಯಾಲಯದ ಸಿಬ್ಬಂದಿಗೆ ಶರ್ಮರನ್ನು ಪರಿಚಯಿಸಿ ಪತ್ರಿಕಾಲಯದ ಬಗ್ಗೆ ತಿಳಿವಳಿಕೆ ನೀಡಲು ಹೇಳಿದರು. ಸ್ವರಾಜ್ಯ ಪತ್ರಿಕಾಲಯವನ್ನು ನೋಡಿದ ಶರ್ಮರು ಪುಳುಕಿತರಾದರು; ಪ್ರೇರಣೆಗೊಂಡರು. ಆಗಲೇ ಅವರಲ್ಲಿ ಹೃದಯ ಪರಿವರ್ತನೆ ಉಂಟಾಯಿತು.

ಸರ್ಕಾರಿ ನೌಕರಿ ಬಿಟ್ಟು ಬೆಂಗಳೂರಿಗೆ ಬಂದರು. ಕೆಲ ಸಮಯದ ನಂತರ ದೇಶ ಸೇವೆಯನ್ನು ಮಾಡಲು, ಕರ್ನಾಟಕದ ನೆಲೆಯಲ್ಲಿ–ನೆಲದಲ್ಲಿ ಭಾರತ ಮಾತೆಯ ಸೇವೆಗಾಗಿ–ಕರ್ನಾಟಕದ ಏಳಿಗೆಗಾಗಿ "ವಿಶ್ವಕರ್ಣಾಟಕ" ಎಂಬ ವಾರಪತ್ರಿಕೆಯನ್ನು ಆರಂಭಿಸಿದರು. ಮೈಸೂರು ಸಂಸ್ಥಾನದ ರಾಜಕೀಯವು ತನ್ನ ಬಾಲ್ಯದಿಂದ 'ಯೌವನಕ್ಕೆ ಕಾಲಿಟ್ಟ ಕಾಲ' ಆಗ 'ವಿಶ್ವ ಕರ್ನಾಟಕ' ಉದಯಿಸಿತು[1]. 'ಬಾಷೆಯ ನೆಲೆಯಲ್ಲಿ ಕನ್ನಡ ನುಡಿಯ ಕೃಷಿ, ಸಾಮಾಜಿಕ–ರಾಜಕೀಯ ವಿಚಾರ ವಿಮರ್ಶೆಯಲ್ಲಿ ದೇಶದ ರಾಜಕೀಯ ದತ್ತ ಅದರ ದೃಷ್ಟಿ', ಜನತೆಯನ್ನು ಆಕರ್ಷಿಸಿತು.

ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಜನರನ್ನು ಬಡಿದೆಬ್ಬಿಸಿ, ಸತ್ಯ–ಧರ್ಮ–ನೀತಿ–ಅಹಿಂಸೆ ತತ್ವಗಳ ಅರಿವು ಮೂಡಿಸಲು ವಿಶ್ವಕರ್ಣಾಟಕ ಸಂಕಲ್ಪ ಮಾಡಿತು. ಲೇಖನ

ವ್ಯವಸಾಯ, ಇತಿಹಾಸ,ಸಾಹಿತ್ಯಲೋಕ ಮಿಗಿಲಾಗಿ ದೇಶಭಕ್ತಿ ಈ ವಿಸ್ತಾರವನ್ನು ಶರ್ಮರು ಕಂಡುಕೊಂಡರು, ಮುಂದೆ ನಡೆದರು. ಉದ್ದಾಮ ಪತ್ರಕರ್ತರಾದರು. ಮೈಸೂರು ಸಂಸ್ಥಾನದಲ್ಲಿ ಆಗ ಪತ್ರಿಕೆ ಆರಂಭಿಸುವುದು ಸುಲಭದ ಕೆಲಸವಾಗಿರಲಿಲ್ಲ. ಮಹಾರಾಜ ಸರ್ಕಾರದವರು ಪತ್ರಿಕೆಯನ್ನು ಆರಂಭಿಸುವುದಕ್ಕೆ ಕಠಿಣ ವಿಧಿಗಳ ಕಾನೂನನ್ನು ರಚಿಸಿದ್ದರು[2]. ಆದ್ದರಿಂದ ಶರ್ಮರು ಪತ್ರಿಕೆ ಆರಂಭಿಸಲು ಸರ್ಕಾರದ ಅನುಮತಿ ಕೋರಿ ಅರ್ಜಿ ಸಲ್ಲಿಸಿದರು. ಅನುಮತಿಗಾಗಿ ಸರ್ಕಾರದ ಕಛೇರಿಗಳಿಗೆ ಯಾತ್ರೆ ಮಾಡಿದರು. ಅಲ್ಲಿನ ಅಧಿಕಾರಿಗಳು ಆಗ ಸರಿಯಾಗಿ ಸ್ಪಂದಿಸಲಿಲ್ಲ. ಶರ್ಮರು ಬೇಸರಗೊಂಡರು. ಎಂತೋ; ಏನೋ ಕಡೆಗೆ ಸರ್ಕಾರದ ಕಡೆಯಿಂದ ಪತ್ರ ಬಂತು. ಸಂದರ್ಶನಕ್ಕಾಗಿ ಜಿಲ್ಲಾ ಮ್ಯಾಜಿಸ್ಟ್ರೇಟರ್ ಕಛೇರಿಗೆ ಹೋದರು ಶರ್ಮಾಜಿ.

ಅಧಿಕಾರಿ ಶರ್ಮರನ್ನು 'ಪತ್ರಿಕೆ ಆರಂಭಿಸಲು ನಿಮಗೆ ಇರುವ ಅರ್ಹತೆ ಎನು?' ಎಂದು ಕೇಳಿದರು?. ಶರ್ಮಾಜಿ "ದೇಶ ಸೇವೆ ಸಲ್ಲಿಸಬೇಕೆಂಬ ನನ್ನ ಅಪೇಕ್ಷೆ ಮತ್ತು ಸಂಕಲ್ಪ. ದೇಶಸೇವೆ ಮಾಡಬೇಕೆಂಬ ಹಂಬಲ. ಪತ್ರಿಕೆಯ ಮೂಲಕ ಜನಸೇವೆ ಸಲ್ಲಿಸಲು ನಿರ್ಧರಿಸಿದ್ದೇನೆ" ಎಂದು ಹೇಳಿದರು. ಬಂಡವಾಳದ ವಿಚಾರ ಬಂದಾಗ "ಸ್ವಾಮಿ..., ನನ್ನ ದೇಶಕ್ಕೆ ನನ್ನ ಯೋಗ್ಯತಾನುಸಾರ ಸೇವೆ ಸಲ್ಲಿಸಬೇಕೆಂಬ ನನ್ನ ದೃಢ ಸಂಕಲ್ಪವೇ ನನ್ನ ಬಂಡವಾಳ" ಎಂದು ಹೇಳಿದರು. ಅಹಮದಬಾದಿನ ಕಾಂಗ್ರೆಸ್ ಅಧಿವೇಶನ ಸಮಯ ಬಾಪೂಜೀ "ಇನ್ನು ಮುಂದೆ ಎನು ಮಾಡುತ್ತೀಯಾ?" ಎಂದು ಕೇಳಿದರು "ಶರ್ಮಾಜಿ ಕನ್ನಡದಲ್ಲಿ ಒಂದು ಪತ್ರಿಕೆ ನಡೆಸಲು ಯೋಚಿಸುತ್ತಿದ್ದೇನೆ" ಎಂದು ಹೇಳಿದರು. ಬಾಪೂಜೀ "ಒಳ್ಳೆಯ ಅಪೇಕ್ಷೆ; ಆಸೆ, ಸಂತೋಷ; ಮಾಡಿ" ಎಂದು ಆಶೀರ್ವದಿಸಿದರು. ತುಮಕೂರಿನ ವಕೀಲ ಕೆ. ರಂಗಯ್ಯಂಗಾರ್ ಎಂಬುವವರ "ಮೈಸೂರು ಕ್ರಾನಿಕಲ್" ಎಂಬ ಇಂಗ್ಲೀಷ್ ಪತ್ರಿಕೆಯಲ್ಲಿ ಶರ್ಮರು ಕೆಲವು ಕಾಲ ಸಹಾಯಕರಾಗಿ ದುಡಿದರು.

ಶರ್ಮರು ವಿಶ್ವಕರ್ಣಾಟಕ ಎಂಬ ಕನ್ನಡ ಪತ್ರಿಕೆ ಆರಂಭಿಸಲು ಸಿದ್ಧತೆಯಲ್ಲಿ ತೊಡಗಿರುವ ವಿಚಾರ ಕೆ. ರಂಗಯ್ಯಂಗಾರ್ ಗಮನಕ್ಕೆ ಬಂತು. ಶರ್ಮರಿಗೆ ಪತ್ರ ಬರೆದು. ನನ್ನ 'ಮೈಸೂರು ಕ್ರಾನಿಕಲ್' ಎಂಬ ಇಂಗ್ಲಿಷ್ ವಾರಪತ್ರಿಕೆಯನ್ನು ಮುನ್ನಡೆಸಲು ನನ್ನಿಂದ ಸಾಧ್ಯವಾಗುತ್ತಿಲ್ಲ. ಅದನ್ನು ನೀವೆ ವಹಿಸಿಕೊಂಡು ಮುನ್ನಡಿಸಿರಿ ಎಂದು ಹೇಳಿದರು. ಈ ಪತ್ರಿಕೆಯನ್ನು ಶರ್ಮರು ವಹಿಸಿಕೊಂಡರು. ಮೈಸೂರು ಕ್ರಾನಿಕಲ್ ಸ್ವಲ್ಪ ಕಾಲ ಶರ್ಮರ ನೇತೃತ್ವದಲ್ಲಿ ಪ್ರಕಟವಾಯಿತು. ಮೂರನೇ ಸಂಪುಟದ ನಲವತ್ತನಾಲ್ಕನೇ ಸಂಚಿಕೆ ಶರ್ಮರ ಸಂಪಾದಕತ್ವದಲ್ಲಿ ಹೊಸಬೆಳಕು-ಬಾಳು ಕಂಡಿತು.

1925 ಆಗಸ್ಟ್ 02 'ವಿಜಯದಶಮಿಯ' ಶುಭದಿನ ಶರ್ಮರ ಸಂಪಾದಕತ್ವದಲ್ಲಿ "ವಿಶ್ವಕರ್ಣಾಟಕದ ಉದಯ" ವಾಯಿತು. ಮೈಸೂರಿನ ಪತ್ರಿಕಾ ಇತಿಹಾಸ ರಂಗದಲ್ಲಿ ನೂತನ ಶಕೆಯೊಂದರ ಆರಂಭವಾಯಿತು. ಕನ್ನಡ ಪತ್ರಿಕೆಗೆ ಇದ್ದ ಇಂಗ್ಲಿಷ್ ಹೆಸರನ್ನು

ತೆಗೆದುಹಾಕಿ "ವಿಶ್ವಕರ್ಣಾಟಕ" ಎಂಬ ಹೆಸರಿಟ್ಟರು. "ಸಮಸ್ತವೂ ಇಲ್ಲಿ ಕರ್ನಾಟಕ" ಎಂಬ ವ್ಯಾಪಕ ಅರ್ಥದಲ್ಲಿ ತಮ್ಮ ಪತ್ರಿಕೆಗೆ "ವಿಶ್ವಕರ್ಣಾಟಕ" ವೆಂಬ ಹೆಸರನ್ನಿಟ್ಟರು. ವಿಶ್ವಕರ್ಣಾಟಕ ಅವತರಿಸಿದ ಕಾಲದಲ್ಲಿ ಮೈಸೂರು ರಾಜಕೀಯ ಎಳೆತನದಿಂದ ತಾರುಣ್ಯಯಕ್ಕೆ ಕಾಲಿಡುತಿತ್ತು. ಪ್ರತಿ ರವಿವಾರ ಹೊರಡುತ್ತಿದ್ದ ಪತ್ರಿಕೆ ರವಿಯಂತೆ ಕನ್ನಡಿಗರಿಗೆ ಸುದ್ದಿಯ ಬೆಳಕು ನೀಡುತಿತ್ತು. ತಮ್ಮ ವಾರಪತ್ರಿಕೆಯು ಸರಕಾರದೊಂದಿಗೆ 'ವಾರ್' (war) ನಡೆಸುವ ಪತ್ರಿಕೆ ಎಂದು ತಮ್ಮ ಪತ್ರಿಕೆಯ ಆದರ್ಶವನ್ನು ಶರ್ಮರು ವ್ಯಾಖ್ಯಾನಿಸಿದರು. ಆರಂಭದಲ್ಲಿ ಇದು ವಾರ ಪತ್ರಿಕೆಯಾಗಿತ್ತು. ಮುಂದೆ ಅದು 1939ರಲ್ಲಿ ದಿನಪತ್ರಿಕೆಯೂ ಆಯಿತು.

"ಈಗ ಭರತ ಖಂಡದಲ್ಲಿ ನಡೆಯುತ್ತಿರುವ ಸ್ವರಾಜ್ಯ ಸಂಗ್ರಾಮದ ಸುದ್ದಿಗಳು ಬೇಕೋ"....?

"ಸತ್ಯಾಗ್ರಹಿಗಳ ಶೌರ್ಯ ಸಾಹಸಗಳ ವರ್ಣನೆ ಬೇಕೋ"...?

"ಭಾರತದ ಮಹಿಳೆಯರಿಂದು ಸ್ವರಾಜ್ಯ ಸಂಗ್ರಾಮದಲ್ಲಿ ಏನು ಮಾಡುತ್ತಿರುವರೆಂದು ನಿಮಗೆ ಗೊತ್ತಾಗಬೇಕೋ"...?

ಹಾಗಾದರೆ ಈಗಲೇ "ವಿಶ್ವಕರ್ಣಾಟಕ ವಾರಪತ್ರಿಕೆ" ಯನ್ನು ತರಿಸಿ ಬಿಡಿ. ಇದು ವಿಶ್ವಕರ್ಣಾಟಕ ತನ್ನನ್ನು ತಾನು ಬಣ್ಣಿಸಿಕೊಂಡ ಬಗೆ[3].

ಶರ್ಮರು "ವಿಶ್ವಕರ್ಣಾಟಕ" ವನ್ನು ಆರಂಭಿಸಿದಾಗ ಕರ್ನಾಟಕದ ಪತ್ರಿಕೋದ್ಯಮ ಇನ್ನೂ ಬಾಲ್ಯದಲ್ಲಿತ್ತು. ಪತ್ರಿಕೆಗಳ ವಿನ್ಯಾಸ, ಭಾಷಾ ಶೈಲಿ ಇವು ಜನರ ಮನಸ್ಸನ್ನು ಗೆದ್ದಿರಲ್ಲಿಲ್ಲ, ಅದ್ದರಿಂದ ಪತ್ರಿಕೆಗೆ ಹೊಸ ರೂಪ; ಹೊಸ ಆಕರ್ಷಣೆ ಕೊಡುವತ್ತ ಮುಖಪುಟವನ್ನು ಆಕರ್ಷಕವಾಗಿರುವಂತೆ ಮಾಡಿದರು. ಪತ್ರಿಕೆಯಲ್ಲಿ ರಾಜಕೀಯ-ಸಾಮಾಜಿಕ-ಸಾಹಿತ್ಯ ಹೀಗೆ ಅವರದೇ ಸೃಷ್ಟಿಯ ವಿವಿಧ ವಿಭಾಗಗಳನ್ನು ಮೀಸಲಿರಿಸಿದರು. ಪತ್ರಿಕೆಯೊಳಗೆ ಪ್ರತ್ಯೇಕ "ಮಹಿಳಾಲೋಕ-ಬೋರೆಗೌಡನ ಭಾರತ "(Rural India)-ಶಿಶುಗಳ ಲೋಕ ಮುಂತಾದ ಅಂಕಣಗಳನ್ನು ಆರಂಭಮಾಡಿದರು. ಭಾರತ ರಾಜಕೀಯದತ್ತ ಸೂಚ್ಯ ಬರಹಗಳ, ಮೈಸೂರು ಸಂಸ್ಥಾನದ ಜೀವನ ರಂಗದತ್ತ ತೀಕ್ಷ್ಣ ಬರಹಗಳು-ಮಕ್ಕಳಿಗೆ ಮುದ್ದುಮಾತಿನ ಕಥೆಗಳು, ಜೊತೆಗೆ ಇತಿಹಾಸದತ್ತ ಕಣ್ನೋಟದ ಚಿತಕಥೆಗಳು ಜನಮನವನ್ನು ಸೆಳೆಯಿತು. ಇತಿಹಾಸ, ಕಲೆ, ವಾಸ್ತುಶಿಲ್ಪ, ನಾಟಕ, ಸಂಗೀತ, ಭಾಷಾ ಸಾಹಿತ್ಯ ಇವು ಪತ್ರಿಕೆಯಲ್ಲಿ ತುಂಬಿದ್ದವು. ಅವರು ತಮ್ಮ ಪತ್ರಿಕೆಯ ಗುರಿ ಉದ್ದೇಶಗಳನ್ನು ಸೂಚಿಸುತ್ತಾ... "ಕನ್ನಡ ನಾಡಿನ ಮೇಲೆ ಪ್ರಧಾನ ದೃಷ್ಟಿದ್ದರೂ, ಮಾತೃಭೂಮಿ ಭಾರತದ ವಿದ್ಯಮಾನಗಳತ್ತ, ಹಾಗೂ ವಿಶ್ವದ ಘಟನೆಗಳನ್ನು ಕನ್ನಡಿಗರಿಗೆ ಯಥಾವತ್ತಾಗಿ ತಿಳಿಸುತ್ತಾ, ವಿಶ್ವದಲ್ಲಿ ಕರ್ನಾಟಕದ ಪಾತ್ರ, ಮತ್ತು ಪಾಲುದಾರಿಕೆ ಕುರಿತು ತಿಳಿಸಲು ಯತ್ನಿಸುತ್ತದೆ ಎಂದಿದ್ದರು"[4]. ಗಾಂಧೀಜಿಯವರು ಕರ್ನಾಟಕಕ್ಕೆ ಬಂದಾಗಿನ ಸುದ್ದಿಗಳು ಪತ್ರಿಕೆಯಲ್ಲಿ ಪ್ರಧಾನವಾಗಿ ಪ್ರಕಟಗೊಳ್ಳುತ್ತಿದ್ದವು.

ಪ್ರಸ್ತುತದ ಪತ್ರಿಕೆಗಳಲ್ಲಿ ಬರುವ ಪ್ರಜಾವಾಣಿಯ "ವಾಚಕರವಾಣಿ", ವಿಜಯ ಕರ್ನಾಟಕದ "ವಾಚಕರ ವಿಜಯ", ವಿಜಯವಾಣಿಯ "ಜನಮತ" ಗಳಂತೆ ತಮ್ಮ ಪತ್ರಿಕೆಯಲ್ಲಿ "ವಾಚಕರ ವಿಭಾಗ" ವನ್ನು ತೆರೆದಿದ್ದರು. ಸಾರ್ವಜನಿಕರ ಕುಂದು ಕೊರತೆಗಳ ಬಗೆಗೆ ಅದು ಸರ್ಕಾರದ ಗಮನವನ್ನು ಸೆಳೆಯುತ್ತಿತ್ತು.

"ವಿಶ್ವಕರ್ನಾಟಕ" ಪತ್ರಿಕೆಯು ಮುಖ್ಯವಾಗಿ ಮೂರು ಹಂತಗಳಲ್ಲಿ ಬೆಳೆದು ಬಂದಿರುವುದನ್ನು ಕಾಣಬಹುದಾಗಿದೆ. ಮೊದಲ ಹಂತ 1925ರಿಂದ1928ರವರೆಗೆ ಗುರುತಿಸಬಹುದಾಗಿದೆ. ಈ ಅವಧಿಯಲ್ಲಿ ಕನ್ನಡ ನಾಡು-ನುಡಿ, ಜೀವನ-ಕಲೆ, ಸಾಹಿತ್ಯಗಳ ಅನಿವಾರ್ಯ ಏಳಿಗೆಗಾಗಿ ಆ ಪತ್ರಿಕೆ ದುಡಿದಿದೆ. ಎರಡನೆಯ ಹಂತ 1928 ರಿಂದ 1939 ರವರೆಗೆ ಈ ಹಂತದಲ್ಲಿ ಗಾಂಧೀಜಿಯವರ ರಾಷ್ಟ್ರೀಯ ಹೋರಾಟ; ಮೈಸೂರು ಸಂಸ್ಥಾನದಲ್ಲಿನ ಘಟನೆಗಳು, ಸ್ವಾತಂತ್ರ ಚಳುವಳಿಗಳನ್ನು ಕೇಂದ್ರವಾಗಿಟ್ಟುಕೊಂಡ ಸುದ್ದಿ-ವಿವರಗಳು ಪ್ರಕಟಗೊಳ್ಳುತ್ತಿದ್ದವು. ಮೂರನೆಯ ಹಂತವನ್ನು 1939ರಿಂದ1946ರವರೆಗೂ ಗುರುತಿಸಬಹುದಾಗಿದೆ. ಈ ಅವಧಿಯಲ್ಲಿ ಮೈಸೂರು ಸಂಸ್ಥಾನದ ರಾಜಕೀಯ ಕ್ಷೇತ್ರದಲ್ಲಿ ಆದ ಆಡಳಿತದ ಸುಧಾರಣೆಗಳನ್ನು ಪತ್ರಿಕೆ ಪ್ರಕಟಿಸಿತು. "ಚಾಣಕ್ಯನ ಚಿಟಿಕಿಗಳು" ಬೋರೆಗೌಡನ ಭಾರತ ಶೀರ್ಷಿಕೆಗಳಡಿಯಲ್ಲಿ ಅನೇಕ ವೈಚಾರಿಕ ಲೇಖನಗಳು ಪ್ರಕಟಗೊಂಡವು. ರಾಜ್ಯದಲ್ಲಿ 'ಜವಾಬ್ದಾರಿ ಸರ್ಕಾರ, ಜನರ ಅಪೇಕ್ಷೆಯ ಸರ್ಕಾರ ಬರಬೇಕು; ರಾಷ್ಟ್ರ ಭಾರತದಲ್ಲಿ ಇಂಗ್ಲೇಂಡಿನ ಪ್ರಭುತ್ವ ಹೋಗಿ, ಸ್ವಾತಂತ್ರ್ಯ-ಸ್ವರಾಜ್ಯದ ಸ್ಥಾಪನೆಯಾಗಬೇಕು'. ಈ ಎರಡೂ ಗುರಿಗಳು ಸವ್ಯಸಾಚಿ ಹಸ್ತಗಳಾದವು. "ಸ್ವಯಂ ಆಡಳಿತ ರಾಜ್ಯಕ್ಕೆ-ಸ್ವರಾಜ್ಯ ರಾಷ್ಟ್ರಭಾರತಕ್ಕೆ" ಇದು ವಿಶ್ವಕರ್ನಾಟಕದ ಆಶಾ ಸೂಚಿಯಾಗಿತ್ತು.

"ವಿಶ್ವಕರ್ನಾಟಕ" ಪತ್ರಿಕೆಯ ಲೇಖನಗಳು ಜನಮನ್ನಣೆ ಪಡೆದವು. ರಾಜ್ಯದ-ರಾಷ್ಟ್ರದ ಮಹಾಧ್ಯೇಯಗಳ ಸಾಧನೆಗಾಗಿ ಪತ್ರಿಕೆ ದುಡಿಯಿತು. ಜನರ ಮನಪರಿವರ್ತನೆ ಮಾಡಿತು. ದೇಶದ ಸ್ವಾತಂತ್ರ್ಯಕ್ಕೆ ವೀರ ಕಹಳೆಯನ್ನೊದಿತು. ರಾಷ್ಟ್ರೀಯ ಪತ್ರಿಕೋದ್ಯಮದ ಸಂಪ್ರದಾಯ, ಸಂಪನ್ನತೆ ರೀತಿ-ನೀತಿಗಳನ್ನು ಎತ್ತಿಹಿಡಿದು ಪ್ರತಿಕಾ ಲೋಕಕ್ಕೇ ದಾರಿ ತೋರಿದ ಕೀರ್ತಿ ವಿಶ್ವಕರ್ನಾಟಕಕ್ಕೂ ಅದರ ಸಂಪಾದಕರಾದ ತಿರುಮಲೆ ತಾತಾಚಾರ್ಯ ಶರ್ಮರಿಗೂ ಸಲುತ್ತದೆ[5]. ಎರಡು ದಶಕಗಳ ಅವಧಿಯಲ್ಲಿ ವಿಶ್ವ ಕರ್ಣಾಟಕ ಪತ್ರಿಕೆಯನ್ನು ಒಂದು ಸಂಸ್ಥೆಯನ್ನಾಗಿ ಬೆಳೆಸುವತ್ತಾ ಶರ್ಮರು ವಹಿಸಿದ ಪಾತ್ರ ಅಮೋಘ. ಅವರ ಲೇಖನಗಳಲ್ಲಿ ರಾಷ್ಟ್ರಾಭಿಮಾನದ ಕಿಡಿ ಸಿಡಿದು ಉರಿಯುತ್ತಿತ್ತು. ಆತ್ಮಶಕ್ತಿಯ ಸಂಕಲ್ಪದ ಧ್ವನಿ ಘರ್ಜಿಸುತ್ತಿತ್ತು. ಲೇಖನಗಳಲ್ಲಿ ಭಾಷಾಪಾಂಡಿತ್ಯವೂ ತುಂಬಿ ಹರಿಯುತ್ತಿತ್ತು. ಸತ್ಯ ಶುದ್ಧ ಸುದ್ದಿಗಳು, ವಿಚಾರ ಪೂರಿತ ವಿಮರ್ಶೆಗಳು, ಶಾಸ್ತ್ರ ಮರ್ಯಾದೆಯ ಭಾಷೆ, ವಸ್ತು-ನಿಷ್ಠ ಲೇಖನಗಳು; ಇವು ವಿಶ್ವಕರ್ನಾಟಕದ ಗುಣವಿಶೇಷಗಳಾಗಿದ್ದವು[6].

ಶರ್ಮರು 'ವಿಶ್ವಕರ್ಣಾಟಕ' ಪತ್ರಿಕೆಯ ಸಂಪಾದಕರಾಗಿ ತತ್ವ ವಸ್ತುನಿಷ್ಠವಾದ ಸಂಪಾದಕೀಯ ಹಾಗೂ ವಿಮರ್ಶಾ ಲೇಖನಗಳನ್ನು ಬರೆಯುತ್ತಿದ್ದರು. ಕರ್ನಾಟಕ ಏಕೀಕರಣ ಚಳುವಳಿಯ ಬಗೆಗೆ ಜನರಲ್ಲಿ ಜಾಗೃತಿ ಆಸಕ್ತಿ ಉಂಟುಮಾಡಲು ವೃತ್ತ ಪತ್ರಿಕೆಗಳು ವಹಿಸಿದ ಪಾತ್ರ ಅಮೋಘವಾದುದು. ವೃತ್ತ ಪತ್ರಿಕೆಗಳು ಎಚ್ಚೆತ್ತ ಕನ್ನಡಿಗರ ಕಿವಿಯಲ್ಲಿ "ಪಾಂಚಜನ್ಯ" ವನ್ನು ಮೊಳಗಿಸಿದವು. ಅಂತಹ ಪ್ರಮುಖವಾದ ಕನ್ನಡ ವೃತ್ತ ಪತ್ರಿಕೆ ತಿ.ತಾ ಶರ್ಮರ "ವಿಶ್ವಕರ್ಣಾಟಕ" ಈ ದಿಸೆಯ ಅದರ ಯೋಗದಾನ ಚಿರ ಸ್ಮರಣೀಯ. ಈ ಪತ್ರಿಕೆಯು ಕನ್ನಡಿಗರಲ್ಲಿ ಭಾಷಾಭಿಮಾನವನ್ನೂ, ದೇಶಭಿಮಾನವನ್ನೂ ಬಡಿದೆಬ್ಬಿಸಿ "ಭಾರತದ ಸ್ವತಂತ್ರ್ಯಹೋರಾಟ" ಕ್ಕೆ, "ಕರ್ನಾಟಕ ಏಕೀಕರಣ ಚಳುವಳಿ" ಗೆ, "ಜವಾಬ್ದಾರಿ ಸರ್ಕಾರದ ಸ್ಥಾಪನೆ" ಗೆ ಮುನ್ನುಡಿ ಬರೆಯಿತು. ವಿಶ್ವಕರ್ಣಾಟಕ ಪತ್ರಿಕೆಯಲ್ಲಿ ಕನ್ನಡ ನಾಡು-ನುಡಿ ಜೀವನ ಕುರಿತು ಮನಸ್ಸು ಸೆಳೆಯುವ ಲೇಖನಗಳನ್ನು ಬರೆದು ಜನಜಾಗೃತಿ ಮೂಡಿಸಿದರು ಶರ್ಮಾಜಿ. ಇದರಿಂದಾಗಿ ನಾಡಿನಾದ್ಯಂತ ಭಾಷಾಭಿಮಾನದ ಹೊಳೆ ಉಕ್ಕಿ ಹರಿಯಿತು; ಕನ್ನಡ ತನವೆಂಬುದು ಮೆರೆಯಿತು.

ಪತ್ರಿಕೆಯು ದೇಶದ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹಾಗೂ ಕರ್ನಾಟಕ ಏಕೀಕರಣಕ್ಕಾಗಿ ದೃಢ ಸಂಕಲ್ಪ ಮಾಡಿತು. ಇದು "ರಾಷ್ಟ್ರವಾದೀ ಪತ್ರಿಕೆ"ಯಾದ್ದರಿಂದ ಬ್ರಿಟಿಷ್ ಸರ್ಕಾರ ಆ ಪತ್ರಿಕೆ ಮೇಲೆ ಕಣ್ಣಿಟ್ಟಿತ್ತು. ವಿಶ್ವಕರ್ಣಾಟಕದಲ್ಲಿ ಬರುತಿದ್ದ ಸಂಪಾದಕೀಯ ಲೇಖನಗಳನ್ನು ಇಂಗ್ಲೀಷ್ ಭಾಷೆಗೆ ಭಾಷಾಂತರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುತಿತ್ತು. ಬ್ರಿಟಿಷರು ದಕ್ಷಿಣ ಭಾರತದ ಕೆಲವು ದೇಶಭಾಷೆಯ ಪತ್ರಿಕೆಗಳನ್ನು "ಕಪ್ಪುಪಟ್ಟಿ" ಗೆ ಸೇರಿಸಿದ್ದರು. ಈ ಪಟ್ಟಿಗೆ ಸೇರಿದ ಮೈಸೂರು ಸಂಸ್ಥಾನದ ಏಕೈಕ ಪತ್ರಿಕೆ 'ವಿಶ್ವಕರ್ಣಾಟಕ'.

ಶರ್ಮರು ಕಷ್ಟ ಕಾರ್ಪಣ್ಯಗಳ ನಡುವೆಯೂ, ಏಳು-ಬಿಳುಗಳ ನಡುವೆಯೂ ಪತ್ರಿಕೆಯನ್ನು ನಡೆಸಿದರು. ಸರ್ಕಾರದ "ಕಠಿಣ ಪತ್ರಿಕಾ ಶಾಸನವನ್ನು ಧಿಕ್ಕರಿಸಿ, ಕರಾಳ ಪತ್ರಿಕಾ ಶಾಸನಗಳನ್ನು ತೆಗೆದು ಹಾಕುವವರೆಗೂ ಪ್ರಧಾನ ಲೇಖನಗಳನ್ನು ಬರೆಯುವುದಿಲ್ಲವೆಂದು ಶಪಥಗೈದು ನುಡಿದಂತೆ ನಡೆದರು[7]." "ವಿಶ್ವಕರ್ಣಾಟಕ" ದಲ್ಲಿ ಮಹಾತ್ಮ ಗಾಂಧಿಜೀಯವರ ಆತ್ಮಕಥೆ ಮೊಟ್ಟ ಮೊದಲ ಬಾರಿಗೆ ಪ್ರಕಟಗೊಂಡಿತು. ಗಾಂಧೀಜಿಯವರ ಆತ್ಮಕಥೆಯ ಶೀರ್ಷಿಕೆ (My Experiment with Truth) ಎಂದು ಅದನ್ನು ಶರ್ಮರು "ಸತ್ಯಶೋಧನ" ಎಂದು ಕನ್ನಡ ರೂಪಾಂತರ ಮಾಡಿದರು. ತಮ್ಮ ಪುಸ್ತಕ ಪ್ರಕಾಶನವನ್ನು "ಸತ್ಯಶೋಧನ ಪುಸ್ತಕ ಭಂಡಾರ" ಎಂದೇ ಕರೆದರು. ಗಾಂಧೀಜಿಯ ಆತ್ಮಕಥೆಯನ್ನು ಕನ್ನಡಕ್ಕೆ ಮಾಡಿದವರು ಪೂಜ್ಯರಾದ ದಿವಂಗತ ನಿಟ್ಟೂರು ಶ್ರೀನಿವಾಸರಾಯರು.

ಪತ್ರಿಕೆಯು ಆಡಳಿತದ ಕುಂದು-ಕೊರತೆಗಳನ್ನು, ನೀತಿ ನಿರ್ಧಾರಗಳನ್ನು ನಿರ್ಭಯವಾಗಿ ಟೀಕಿಸಿತು.[8] "ದೇಶದ ಸ್ವಾತಂತ್ರ್ಯ ಸಂಗ್ರಾಮ" ಮತ್ತು "ಕನ್ನಡ ನಾಡಿನ

ಏಕೀಕರಣ" ಕ್ಕೆ ಬೆಂಬಲ ನೀಡಿತು. ಎರಡು ದಶಕಗಳಿಗೂ ಹೆಚ್ಚು ಕಾಲ ಈ ಪತ್ರಿಕೆಯು ಕನ್ನಡ ಪತ್ರಿಕಾ ರಂಗದಲ್ಲಿ ಅದ್ವಿತಿಯ ಶಕ್ತಿಯಾಗಿ ಮೆರೆಯಿತು. ಸರ್ಕಾರದ ವಿರುದ್ಧ ಟೀಕಾ ಲೇಖನಗಳನ್ನು ಬರೆದು ಬ್ರಿಟಿಷರ ವಿರುದ್ಧದ 'ವಾರ್(war)ಪತ್ರಿಕೆ' ಯಾಯಿತು. ಆದ್ದರಿಂದಲೇ "ನಿರ್ಭಯ ರಾಷ್ಟ್ರೀಯ ಪತ್ರಕರ್ತ" ರೆಂದು ಖ್ಯಾತರಾದರು ಶರ್ಮರು. ಅವರದು "ಸಿಂಹಘರ್ಜನೆ", ಅದು ಆಂಗ್ಲ ಸರ್ಕಾರ ಮತ್ತು ಮೈಸೂರು ಒಡೆಯರ ಸರ್ಕಾರಗಳನ್ನು ಅಲ್ಲಾಡಿಸಲು ಶಕ್ತವಾಯಿತು. ಜೊತೆಗೆ ಪತ್ರಿಕೆಯ ಮುಖ್ಯ ಕಾಳಜಿ ನಾಡು-ನುಡಿಯ ಸುತ್ತ ಪಹರೆ ನಡೆಸುವುದು. ನಾಡಿನ ಏಕೀಕರಣದ ಬಗೆಗಿನ ಕಾಳಜಿ-ಕನ್ನಡ ಭಾಷೆಯ ಸತ್ವ-ಸತ್ಯತೆಗಳ ಆನಾವರಣ ಆತ್ಮ-ವಿಶ್ವಾಸ ಎಲ್ಲಾ ಆ ಪತ್ರಿಕೆಯಲ್ಲಿ ಎದ್ದು ಕಾಣುತಿತ್ತು.

"ವಿಶ್ವಕರ್ಣಾಟಕ ಪತ್ರಿಕೆಯು ಎದುರಿಸಿದ ಕಷ್ಟ ಕಾರ್ಪಣ್ಯಗಳನ್ನು ಆಗಿನ ಕಾಲಕ್ಕೆ ಯಾವ ಕನ್ನಡ ಪತ್ರಿಕೆಯೂ ಅನುಭವಿಸಿಲಿಲ್ಲ. 1928ರ ಬೆಂಗಳೂರಿನ ಇತಿಹಾಸದ ಪ್ರಸಿದ್ಧ "ಗಣಪತಿ ಗಲಾಟೆ" ಯ ಸಂದರ್ಭದಲ್ಲಿ ಪತ್ರಿಕೆಯು ಸರ್ಕಾರದ ನಿಲುವು ಖಂಡಿಸಿದ್ದರಿಂದ ಆಗಸ್ಟ 1-1928 ರಿಂದ ಆಗಸ್ಟ 20ರವರೆಗೆ ಪತ್ರಿಕಾ ಪ್ರಕಟನೆಯನ್ನು ಸರ್ಕಾರ ನಿಷೇಧಿಸಿತು. ನವೆಂಬರ್ 28-1938 ರಂದು ಸರ್ಕಾರಿ ಸಂಘ ಸಂಸ್ಥೆಗಳಿಗೆ ಹಾಗೂ ಶಾಲಾ-ಕಾಲೇಜುಗಳಿಗೆ "ವಿಶ್ವಕರ್ಣಾಟಕ" ವನ್ನು ತರಿಸಲಾಗದೆಂದು ಸರ್ಕಾರ ಆಜ್ಞೆ ಹೊರಡಿಸಿತು. ಪೋಲಿಸ್ ಧಾಳಿಗಳಿಂದಾಗಿ ಕೆಲವೊಮ್ಮೆ ಪತ್ರಿಕಾ ಕಾರ್ಯಲಯವೇ ಬೀಗಮುದ್ರೆಗೊಳಗಾಯಿತು. 1934 ರಿಂದ 1938ರ ನಡುವೆ ಪತ್ರಿಕೆಗೆ ಸರ್ಕಾರವು ಹಲವು ಬಾರಿ ಎಚ್ಚರಿಕೆ ಪತ್ರ ('ವಾರ್ನಿಂಗ್') ನೀಡಿತು. "ವಿದುರಾಶ್ವತ್ಥ ಪ್ರಕರಣ" ದ ಸಂದರ್ಭ ದಲ್ಲಿ ಕ್ರಾಂತಿಕಾರಕ ಲೇಖನಗಳನ್ನು ಬರೆದು ಪ್ರಚಾರ ಮಾಡಿದ್ದಕ್ಕಾಗಿ ಕೆಲವು ಕಾಲದವರೆಗೆ ಪತ್ರಿಕೆಯ ಪ್ರಕಟಣೆಯನ್ನು ಸರ್ಕಾರ ನಿಷೇಧಿಸಿತು. ಪತ್ರಿಕೆಯನ್ನು ಸದೆಬಡಿಯಲು ತಾನು ನೀಡುತ್ತಿದ್ದ ಅಷ್ಟಿಷ್ಟು ಸರ್ಕಾರೀ ಜಾಹೀರಾತುಗಳನ್ನೂ 1937 ರಿಂದ ನಿಲ್ಲಿಸಿಬಿಟ್ಟಿತು. ಪತ್ರಿಕೆಗೆ ರಿಯಾಯಿತಿ ದರದಲ್ಲಿ ನೀಡುತ್ತಿದ್ದ ಕಾಗದದ ಸರಬರಾಜನ್ನು ನಿಲ್ಲಿಸಿತು. ವೈಸರಾಯರಿಗೆ ಬರೆದ ಪತ್ರಗಳನ್ನು ಪ್ರಕಟಿಸಿದ್ದರಿಂದ ಒಂದು ತಿಂಗಳ ಕಾಲ ನಿಷೇಧಕ್ಕೆ ಒಳಗಾಯಿತು. ಜನವರಿ 20-1944ರಲ್ಲಿ "ಲಂಚ ನಿರ್ನಾಮವಾಗಬೇಕು" ಎಂಬ ಪ್ರಧಾನ ಲೇಖನ ಬರೆದಿದ್ದರಿಂದ ಒಂದು ವರ್ಷಕಾಲ ಪತ್ರಿಕೆಯ ಪ್ರಕಟಣೆಯನ್ನು ಸರ್ಕಾರ ರದ್ದುಗೊಳಿಸಿತು. ಪತ್ರಿಕೆಯು ಬಂಡವಾಳದ ಕೊರತೆಯನ್ನು ಎದರಿಸುತ್ತಿದ್ದ ಆ ಸಂದರ್ಭದಲ್ಲಿ ತಮ್ಮ ಪತ್ನಿ ಭಾರತಿ ಅವರು ತಮ್ಮ ಒಡವೆಗಳನ್ನು ಮಾರಿ ಪತ್ರಿಕೆ ನಡೆಸಿದರು[9].

ಈ ನಡುವೆ ಶರ್ಮರು ಅನಾರೋಗ್ಯಕ್ಕೆ ತುತ್ತಾಗಿದ್ದರಿಂದ ಸಿದ್ದವನಹಳ್ಳಿ ಕೃಷ್ಣಶರ್ಮರು ಪತ್ರಿಕೆ ಸಂಪಾದಕರಾದರು. 1946 ಜುಲೈ 31 ಮತ್ತು ಆಗಸ್ಟ್ 1 ರಂದು ಪ್ರಕಟವಾದ "ಮಾಡಿದ್ದುಣ್ಣೋ ಮಹಾರಾಯ" ಎಂಬ ಅಗ್ರಲೇಖನ ತಪ್ಪು ಅಭಿಪ್ರಾಯಕ್ಕೆ

ಕಾರಣವೇಂದು ಸರ್ಕಾರ ಪತ್ರಿಕೆಯ ಪ್ರತಿಗಳನ್ನು ಮುಟ್ಟುಗೋಲು ಹಾಕಿಕೊಂಡಿತು. ಈ ರೀತಿ, ಒಂದು ಪತ್ರಿಕೆಯ ಪ್ರತಿಗಳನ್ನು ಮುಟ್ಟುಗೋಲು ಹಾಕಿಕೊಂಡದ್ದು ಮೈಸೂರಿನ ವೃತ್ತ ಪತ್ರಿಕಾ ಲೋಕದ ಇತಿಹಾಸದಲ್ಲೇ ಮೊಟ್ಟ ಮೊದಲು ಘಟನೆ ಎನ್ನಬಹುದು. ಅದೇ ವೇಳೆ ಪತ್ರಿಕೆಯನ್ನು ಪುನಃ ಎರಡು ತಿಂಗಳ ಕಾಲ ನಿಷೇಧಿಸಲಾಗಿತ್ತು. ಪತ್ರಿಕೆ ನಡೆಸಲು ಠೇವಣಿ ಹಣ ಇಡುವಂತೆ ನೋಟಿಸ್ ಜಾರಿ ಮಾಡಲಾಯಿತು. ಕೆಲವು ದಿನಗಳ ಕಾಲ "ಮಹಾಕರ್ಣಾಟಕ" ಎಂಬ ಪತ್ರಿಕೆ ನಡೆಸಿದರು. ಈ ಎಲ್ಲಾ ಘಟನೆಗಳ ಕೆಲವು ಸಮಯದ ನಂತರ ಶರ್ಮರ ಪ್ರತಿಕಾ ವ್ಯವಹಾರವು ತೆರೆಯ ಮರೆಗೆ ಸರಿಯಿತು. 1946ರ ಆಗಸ್ಟ್ 21ರಂದು ಬೆಂಗಳೂರಿನ ಪತ್ರಿಕೆಗಳು ಹರತಾಳ ಆಚರಿಸಿದವು. ಆಗ ಶರ್ಮರು "ದಿವಾನ್ ಮಿರ್ಜಾರವರ ಹದಿನೈದು ವರ್ಷಗಳ ಅವಧಿಯಲ್ಲಿ ವಿಶ್ವಕರ್ಣಾಟಕದ ಮೇಲೆ ಆಪಾದನೆಗಳು ಬಂದವು. ನಡೆಯಬೇಕಾದದ್ದೆಲ್ಲಾ ನಡೆದುಹೋಯಿತು. ಆದರೆ ಅವರು ಒಮ್ಮೆಯೂ ಪತ್ರಿಕೆಯನ್ನು ನಿಷೇಧಿಸಿರಲಿಲ! ಸೆಕ್ಯೂರಿಟಿ ಕೇಳಲಿಲ್ಲ! ಶ್ರೀ ಮಾಧವರಾಯರ ಆಡಳಿತದಲ್ಲಿ ಪತ್ರಿಕೆಯು ಮೂರು ಬಾರಿ ನಿಂತಿತು. ಎರಡು ಬಾರಿ ಸೆಕ್ಯೂರಿಟಿ ಪಡೆಯುವ ನೋಟೀಸ್ ಪಡೆಯಿತು. ಒಮ್ಮೆ ಬಂಧನವೂ ಆಯಿತು! "ಮೂನ್ನೂರು ಅರವತ್ತೈದು ದಿನಗಳ ಅಜ್ಞಾತ ವಾಸವೂ ಆಯಿತು! ಸತ್ಯವನ್ನ ನುಡಿದವರಿಗೆ ಇಲ್ಲಿ ಸ್ಥಾನವಿಲ್ಲ. ಅದನ್ನು ಕೇಳುವ ಎದೆಗಾರಿಕೆ ಸರ್ಕಾರಕ್ಕಿಲ್ಲ." ಎಂದು ಬಹಳ ನೊಂದು ನುಡಿದರು ಶರ್ಮರು.

ನಾಡಕಟ್ಟುವ ಕಾರ್ಯದಲ್ಲಿ ತೊಡಗಿದ್ದ ಪತ್ರಿಕೆಯ ಕಾರ್ಯವನ್ನು ಪ್ರಜಾಪ್ರತಿನಿಧಿ ಸಭೆ ಸದಸ್ಯರಾಗಿದ್ದ ಹೊಸಕೊಪ್ಪದ ಕೃಷ್ಣರಾಯರು ಬಣ್ಣಿಸುತ್ತಾ...."ಈ ಕಾಲದಲ್ಲಿ ಇದು ಮಾಡುತ್ತಿರುವ ಕಾರ್ಯವು ಬಹಳ ಮಹತ್ವಪೂರ್ಣವಾದದ್ದು ಮೈಸೂರಿನ ಇಂದಿನ ದುಸ್ಥಿತಿಯಲ್ಲಿ ಈ ಪತ್ರಿಕೆಯು ಪ್ರಜಾಭಿಮತದ ಪ್ರಾಧಾನ್ಯಕ್ಕೆ ಕೊಡುತ್ತಿರುವ ಗಮನವು ಪ್ರಶಂಸನೀಯವಾಗಿದೆ. ಆಳರಸರ ದಬ್ಬಾಳಿಕೆಯನ್ನು ಎದುರಿಸಿ ಜನತೆಯ ಒಳ ಭೇದಗಳನ್ನು ಒಂದುಗೂಡಿಸಿ, ದೇಶವು ಧ್ಯೇಯವನ್ನು ಮುಟ್ಟುವುದಕ್ಕೆ ಸಾಧಿಸುವ ಮಹತ್ಕಾರ್ಯವನ್ನು ಪತ್ರಿಕೆ ಸುಲಲಿತವಾಗಿ ಮಾಡುತ್ತಿದೆ" ಎಂದು ಶ್ಲಾಘಿಸಿದ್ದರು. ವಿಶ್ವಕರ್ಣಾಟಕವು ಉದಯವಾಗಿ ಲೋಕಾದೀಪ ಸೂರ್ಯನಂತೆ ಕರ್ಣಾಟಕದಲ್ಲೆಲ್ಲಾ ಬೆಳಗುತ್ತಿದೆ ಎಂಬುದು ಮತ್ತೊಬ್ಬ ಗಣ್ಯರ ಅಭಿಪ್ರಾಯ.

ಲೇಖನಗಳು :–

1. ಬ್ರಾಹ್ಮಣರ ಇರುವಿಕೆ ಬ್ರಾಹ್ಮಣೇತರರ ಕೈಲಿ ಭದ್ರವಾಗಿದೆ.

ಬೆಂಗಳೂರಿನಲ್ಲಿ ನಡೆದ 'ಗಣಪತಿ ಗಲಾಟೆ' ಯ ಪರಿಣಾಮವಾಗಿ ಬ್ರಾಹಣ– ಬ್ರಾಹ್ಮಣೇತರರ ನಡುವೆ 'ಕೋಮು ಗಲಭೇ' ಉಂಟಾಯಿತು. ಆಗ ಶರ್ಮರು ಇಂದು ಬ್ರಾಹಣರು ನಿಸ್ವಾರ್ಥತೆಯಿಂದಲೂ, ತಮ್ಮ ಪಶ್ಚಾತಾಪದಿಂದಲೂ ಬ್ರಾಹ್ಮಣೇತರರನಂಬಿಕೆ ಪ್ರೀತಿ, ಗೌರವಗಳನ್ನು ಸಂಪಾದಿಸಬೇಕು. ಬ್ರಾಹ್ಮಣರ ಇರುವಿಕೆಯು ಬ್ರಾಹ್ಮಣೇತರರ

ಕೈಯಲ್ಲಿ ಭದ್ರವಾಗಿದೆ ಎಂಬುದನ್ನು ಸ್ಪಷ್ಟಗೊಳಿಸಬೇಕು. ಎಂಬ ಲೇಖನ ಬರೆದರು. (ವಿ.ಕ 25/11/1928)

2. ಹೆಣ್ಣು ಚಂದ, ಕಣ್ಣು ಕುರುಡು.

'ಹೇಳುವುದು ಒಂದು; ಮಾಡುವುದು ಮತ್ತೊಂದು' ಎಂಬಂತೆ ದಿವಾನರು ಭಾಷಣಗಳಲ್ಲಿ ಅಭಿವೃದ್ಧಿಯ ಜಪ ಮಾಡುತ್ತಾರೆ. ಬಡವರ ಯೋಗಕ್ಷೇಮ ಕುರಿತು ಚಿಂತಿಸುತ್ತಾರೆ. ಆದರೆ ಕೃತಿಯಲ್ಲಿ ಮಾತ್ರ ಏನೂ ಸಾಧಿಸುವುದಿಲ್ಲ. ಇದನ್ನು ಖಂಡಿಸಿ ಈ ಲೇಖನ ಬರೆದರು (ವಿ.ಕ 23/06/1929)

3. ಅಭಿನಂದನೆ.

"ಈ ಸರ್ಕಾರ ಬುಡಮಟ್ಟ ಮುರಿದು ಬೀಳಬೇಕು". "ಮಿ॥ ಮಿರ್ಜಾರವರ ದಿವಾನ್ ಗಿರಿಯು ಕೊನೆಮುಟ್ಟಬೇಕು;. "ಜವಾಬ್ದಾರಿ ಸರ್ಕಾರವು ಸ್ಥಾಪಿಸಲ್ಪಡಬೇಕು" ಎಂದಿದ್ದಕ್ಕಾಗಿ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಮಿ॥ ತಾಜ್‌ಪಿರಾನರು ಶ್ರೀ ಸೀತಾರಾಮ ಶಾಸ್ತ್ರಿ, ಅಶ್ವತ್ಥ ನಾರಾಯಣರಿಬ್ಬರಿಗೂ 124ನೇ ವಿಧಿ ಅನ್ವಯ ಆರು ತಿಂಗಳ ಸೆರೆಮನೆ ವಾಸ ಮತ್ತು 200 ರೂ ದಂಡ ವಿಧಿಸಿದರು. ದಂಡ ಕೊಡದಿದ್ದರೆ ಮತ್ತೆ ಮೂರು ತಿಂಗಳು ಸೆರೆಮನೆ ವಾಸದ ಶಿಕ್ಷೆ ಎಂದು ತೀರ್ಪು ನೀಡಿದರು. ಕನ್ನಡ ಪ್ರಜೆಗಳ ಏಳಿಗೆಗಾಗಿ ಸೆರೆಮನೆವಾಸಕ್ಕೆ ಗುರಿಯಾದ ಅವರನ್ನು ಶರ್ಮಾಜಿ ಅಭಿನಂದಿಸಿದರು. ಏಕೆಂದರೆ ಲೋಕಮಾನ್ಯ ತಿಲಕ್‌ರಂತವರು ದೇಶಕ್ಕಾಗಿ ಈ ವಿಧಿಯಲ್ಲೇ ಶಿಕ್ಷೆ ಅನುಭವಿದ್ದರು. ಒಂದು ರೀತಿಯಲ್ಲಿ ಅವರು ಇದೇ ದಾರಿ ಹಿಡಿದವರಲ್ಲವೆ..? ಎಂದಿತು ವಿಶ್ವ ಕರ್ನಾಟಕ (ವಿ.ಕ 11/08/1929)

4. ಉಪ್ಪಿನ ಸತ್ಯಾಗ್ರಹ.

ಈ ಯುಗದಲ್ಲಿ ಹುಟ್ಟಿದ ನಾವೇ ಧನ್ಯರು. ಗಾಂಧೀಜಿಯಂತಹ ಮಹಾ ಪುರುಷನ ಜೊತೆ ಜೊತೆಯಲ್ಲಿ ನಿಂತು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಅವಕಾಶದಿಂದ ಜೀವನ ಪಾವನವಾಯಿತು. ನಾಡ ಬಂಧುಗಳೇ! ಭಾರತಿಯು ಇಂದು ನಿಮ್ಮನ್ನು ಮಾನ ಸಂರಕ್ಷಣೆಗಾಗಿ ಕರೆಯುತ್ತಿರುವಳು. ಆಕೆಗೆ ನಿರಾಸೆ ಮಾಡಬೇಡಿ!. ಏಳಿ; ಎದ್ದೇಳಿ, ಕಾಲಹರಣ ಮಾಡಬೇಡಿ. ಎಂದು ಲೇಖನ ಪ್ರಕಟಗೊಂಡಿತು. (ವಿ.ಕ 13/04/1930).

5. ದುಷ್ಟಗ್ರಹಗಳು.

ಮಾದರಿ ಮೈಸೂರಿನ ವಿಚಾರದಲ್ಲಿ ಕೆಲವು ದುಷ್ಟಗ್ರಹಗಳು ಕಾಡುತ್ತಿರುವಂತೆ ಕಂಡುಬರುತ್ತದೆ. ಏಕೆಂದರೆ ಒಂದು ಕಡೆ ಮಿರ್ಜಾ ಇಸ್ಮಾಯಿಲ್‌ರವರು ಆಡಳಿತ ಯಂತ್ರದ ಕಾರ್ಯದಕ್ಷತೆ ಕುರಿತು ಮಾತಾಡುತ್ತಾರೆ. ಆದರೆ ಅವರ ಅಧಿಕಾರಿಗಳು ಅಧ್ಯಕ್ಷತೆ ದೌರ್ಜನ್ಯಗಳನ್ನು ಪ್ರದರ್ಶಿಸುತ್ತಾರೆ. ಆಡಳಿತದ ಸೂತ್ರಧಾರಿಗಳು ತಮ್ಮ ನೀತಿ ಧೋರಣೆಗಳನ್ನು ತಮ್ಮ ಕೆಳಗಿನ ಅಧಿಕಾರಿಗಳು ಪ್ರಾಮಾಣಿಕವಾಗಿ ಜಾರಿಮಾಡುವಂತೆ ಮಾಡದಿದ್ದರೆ ಅವರ ಬೆಣ್ಣೆಯಂತಹ ಮಾತಿಗೆ ಪ್ರಯೋಜನವಿಲ್ಲ, ಮಾದರಿ ಮೈಸೂರಿಗೆ

ಗರ ಬಡಿದಂತಾಗಿದೆ, ದುಷ್ಟಗ್ರಹಗಳು ಇಲ್ಲಿ ಪಿತೂರಿ ನಡೆಸುತ್ತಿರುವಂತೆ ಕಂಡುಬರುತ್ತದೆ. (ವಿ.ಕ 10/08/1930)

6. ಚರಮಶ್ಲೋಕ.

ಅಪಾಯಕಾರಿ ಸರ್ಕಾರದಿಂದ, ಅಧಿಕಾರಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಸಾರ್ವಜನಿಕರು ಉಪಾಯಗಳನ್ನು ಹುಡುಕಬೇಕು. ಸರ್ಕಾರದವರು ಮಾಡುವ ನೀತಿ - ನಿಯಮ, ಕೆಲಸ- ಕಾರ್ಯಗಳಿಗೆ ಪ್ರತಿಯಾಗಿ, ಪ್ರಜೆಗಳು ತಮ್ಮ ಸ್ವಾತಂತ್ರ್ಯ ಪಾಲನೆಗಾಗಿ ತಮ್ಮ ಪಾಲನೆಯ ಕರ್ತವ್ಯವನ್ನು ನಿಷ್ಠೆಯಿಂದ, ನಿರ್ಭಯದಿಂದ ಮಾಡಬೇಕು. ಮನಬಂದಂತೆ ನಡೆಯುವ ಅಧಿಕಾರಿಗಳಿಗೆ ಮೈಸೂರಿನಲ್ಲಿ ಅವಕಾಶವಿಲ್ಲವೆಂದು ಹೇಳಬೇಕು. ಹಳೆಯ ಕಾಲದ ದುಷ್ಟ ಪ್ರಭುತ್ವಕ್ಕೆ 'ಚರಮಶ್ಲೋಕ' ವನ್ನಾಡಿ ಅವರಿಗೆ ಆಧುನಿಕ ಪ್ರಜಾಪ್ರಭುತ್ವದ ತತ್ವಗಳನ್ನು ಬೋಧಿಸಬೇಕು (ವಿ.ಕ 10/08/1930)

7. ಕರ್ನಾಟಕ ಪ್ರಾಂತ್ಯ

ಕಳೆದ ವಾರ ಬೆಳಗಾವಿ ಜಿಲ್ಲೆಯ ಹುಕ್ಕೇರಿಯಲ್ಲಿ 'ಕರ್ನಾಟಕ ಪ್ರಾಂತಿಯ ರಾಜಕೀಯ ಪರಿಷತ್', 'ಕರ್ನಾಟಕ ಏಕೀಕರಣ ಪರಿಷತ್', 'ಕರ್ನಾಟಕ ಮಹಿಳಾ ಪರಿಷತ್' ಗಳು ಅಧಿವೇಶನ ನಡೆಸಿದವು. ಅದರ ಅಧ್ಯಕ್ಷರುಗಳು ಕರ್ನಾಟಕವು ಗಾಂಧೀಜಿಯವರಿಗೆ ಭಕ್ತಿ ತೋರಿಸಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನ್ನ ತ್ಯಾಗ ಶಕ್ತಿಗಳನ್ನು ತೋರಿಸಿ ಮೆರೆಯಿತು ಎಂದು ತಿಳಿಸಿದರು. ಪಟ್ಟಾಭಿ ಸೀತಾರಾಮಯ್ಯನವರು ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತ ದೇಶಿಯ ಭಾಷೆಗೆ ಅನುಗುಣವಾದ ಪ್ರಾಂತ್ಯಗಳ ವಿಂಗಡಣೆಯ ಚಳುವಳಿಯ ಇತಿಹಾಸವನ್ನು ತಿಳಿಸಿದರು. ಆಂಧ್ರ ಪ್ರದೇಶದ ಚಳುಚಳಿಯನ್ನು ಪರಿಚಯಿಸಿದರು. (ವಿ.ಕ 21/6/1931)

8. ಕರ್ನಾಟಕ ಪ್ರಾಂತ ನಿರ್ಮಾಣ

ಶರ್ಮರು ಭಾಷೆಗಳ ಆಧಾರದ ಮೇಲೆ ಪ್ರಾಂತಗಳ ವಿಂಗಡಣೆಗೆ ಸಂಬಂಧಿಸಿದಂತೆ ಈ ಲೇಖನದಲ್ಲಿ ಹೀಗೆ ಹೇಳಿದ್ದಾರೆ, ಭರತಖಂಡದ ಪ್ರಾಂತ್ಯಗಳ ವಿಭಾಗವು ಅಸ್ವಾಭಾವಿಕ ಮತ್ತು ಅವಿವೇಕಯುತವಾದುದು. ಇಲ್ಲಿ ಬ್ರಿಟಿಷ್ ಇಂಡಿಯಾ ಸರಕಾರದವರು ಭಾಷೆಗಳ ಆಧಾರದ ಮೇಲೆ ಪ್ರಾಂತ್ಯ ವಿಂಗಡಣೆ ಕುರಿತು ಚರ್ಚೆ ನಡೆಸಿದರು. ಪ್ರಾಂತ್ಯಗಳು ಸಣ್ಣದಾಗಿದ್ದರೆ ಜವಾಬ್ದಾರಿ ಸರ್ಕಾರಗಳು ಯಶಸ್ವಿಯಾಗುತ್ತವೆ. ಜನ ಸಾಮಾನ್ಯರ ಅನುಕೂಲಕ್ಕಾಗಿ ಭಾಷೆಯ ಬೆಳವಣಿಗೆಗಾಗಿ, ವೈಜ್ಞಾನಿಕ ಭಾಷೆಗೆ ಅನುಗುಣವಾದ ಪ್ರಾಂತ್ಯಗಳು ರಚನೆಯಾಗಬೇಕು. ಒಂದು ಭಾಷೆಯವರು ಒಂದು ಕಡೆ ಸೇರಿದರೆ ಆಡಳಿತವು ಸೂಸೂತ್ರವಾಗಿ ನಡೆಯುತ್ತದೆ. (ವಿ.ಕ 28/06/1931).

9. ಕನ್ನಡಿಗರಿಗೆ ತಂಗಳು ಸಾಕು

ಪ್ರಪಂಚದಲ್ಲಿ, ದೇಶ ದೇಶಗಳಲ್ಲಿ ನಡೆಯುವ ಸುದ್ದಿಗಳು ಕನ್ನಡದಲ್ಲಿ ಬರುವ ವೇಳೆಗೆ ತುಂಬ ಹಳೆಯ ಸುದ್ದಿಗಳಾಗಿರುತ್ತಿದ್ದವು. ಅದರಿಂದ ನೊಂದ ಶರ್ಮಾಜಿ

'ಕನ್ನಡಿಗರಿಗೆ ತಂಗಳು ಸಾಕು' ಎಂಬ ಲೇಖನ ಬರೆದು. ಒಂದು ವರ್ಷದ ಹಳೆಯ ಸುದ್ದಿಗಳು ಕನ್ನಡಿಗರಿಗೆ ಹೊಸ ಸುದ್ದಿಗಳು ಎಂತಹ ದುರಂತ ಎಂದು ದುಃಖಿಸಿದರು.(ವಿ.ಕ.23-08-1925).

10. ಮೈಸೂರು ಗ್ರಾಮ ಪಂಚಾಯಿತಿ ಮಸೂದೆ

ಗ್ರಾಮಗಳ ಅಭಿವೃದ್ಧಿ ಎಂದರೆ ಏನು? ಗ್ರಾಮಪಂಚಾಯಿತಿಗಳ ಕೆಲಸ ಹೇಗಿರಬೇಕು? ಜನರು ಕಟ್ಟುವ ತೆರಿಗೆ ಯಾವ ರೀತಿ ವೆಚ್ಚವಾಗುತ್ತದೆ ಎಂಬ ವಿಚಾರಗಳ ಕುರಿತು ತಿಳಿಸುತ್ತದೆ.(ವಿ.ಕ.20-09-1925).

11. ದಿವಾನರ ದೌರ್ಜನ್ಯ

ಸಾರ್ವಜನಿಕ ಪ್ರಧಾನ ಸಂಸ್ಥೆಗಳಲ್ಲಿ ದಿವಾನರ ದೌರ್ಜನ್ಯವನ್ನು ಕುರಿತು ಈ ಲೇಖನದಲ್ಲಿ ಬರೆದಿದ್ದಾರೆ. (ವಿ.ಕ.20-09-1925).

12. ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿದ್ದ ಪತ್ರಿಕಾ ಕಾನೂನು

ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿದ್ದ ಅತ್ಯಂತ ಕಠಿಣ ಸ್ವರೂಪದ ಪತ್ರಿಕಾ ಕಾನೂನನ್ನು ಧಿಕ್ಕರಿಸುವಂತೆ ಕೋರಿ, ಶರ್ಮರು ಸಂಪಾದಕೀಯದಲ್ಲಿ ಕನ್ನಡಿಗರಿಗೆ ಕರೆ ನೀಡಿದರು. ಬ್ರಿಟಿಷ್ ಇಂಡಿಯಾ ಸರ್ಕಾರದಲ್ಲಿರುವ ಕರಾಳ ಕಾನೂನು ನಮಗೇಕೆ? ಎಂದು ಘರ್ಜಿಸಿದರು. "ಬಂಧುಗಳೇ ಏಳಿ ಎದ್ದೇಳಿ", ನೀವೆಲ್ಲಾ ನಪುಂಸಕರಲ್ಲ ಪುರುಷ ಸಿಂಹಗಳೆಂಬುದನ್ನು ಆಡಳಿತಗಾರರಿಗೆ ತೋರಿಸಿ, ನಿಮ್ಮ ಸ್ವಾತಂತ್ರ್ಯವನ್ನು ಮಾನವನ್ನು ನೀವು ಕಾಪಾಡಿಕೊಳ್ಳಿ ಎಂದು ಪ್ರಾರ್ಥಿಸಿದರು.(ವಿ.ಕ.ಸಂ.ಸೂ 21-08-1927).

13. ಅರೆಕಾಸಿನ ಬೆಲೆ ಇಲ್ಲ

ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಹೆಚ್.ಕೆ. ಕೃಷ್ಣರಾಯರು ಜವಾಬ್ದಾರಿ ಸರಕಾರಕ್ಕೆ ಒತ್ತಾಯಿಸಿ ಗೊತ್ತುವಳಿಯೊಂದನ್ನು ಮಂಡಿಸಿದರು.ಆದರೆ ಸಭೆಯ ಅಧ್ಯಕ್ಷರಾಗಿದ್ದ ದಿವಾನರು ಗೊತ್ತುವಳಿಯನ್ನು ತಿರಸ್ಕರಿಸಿದರು. ಶರ್ಮರು ಆ ಸನ್ನಿವೇಶವನ್ನು ಕುರಿತು ಅಧ್ಯಕ್ಷರು ಪ್ರಜೆಗಳಿಂದ ಚುನಾಯಿತಗೊಂಡಿರಬೇಕು, ಅವರು ಸಾರ್ವಜನಿಕರಾಗಿರಬೇಕು. ಅಲ್ಲಿಯವರೆಗೂ ಪ್ರಜಾಪ್ರತಿನಿಧಿ ಸಭೆಗೆ ಅರೆಕಾಸಿನ ಬೆಲೆಯೂ ಇಲ್ಲ ಎಂದು ಬರೆದರು. (ವಿ.ಕ ಸಂ ಸೂ 12-10-1930).

14. ದಂಡವೋ, ತೆರಿಗೆಯೋ?

ಬ್ರಿಟಿಷ್ ಸರ್ಕಾರ ಅಂಚೆ ಚೀಟಿಗಳ ಬೆಲೆಗಳನ್ನು ಹೆಚ್ಚಿಸಿ ಆದಾಯವನ್ನು ಹೆಚ್ಚಿಸಿಕೊಂಡಿತು . ವಿ.ಪಿ. ಪಾರ್ಸಲುಗಳನ್ನು 3 ದಿನಗಳಿಗಿಂತ ಹೆಚ್ಚು ಕಾಲ ಅಂಚೆ ಕಛೇರಿಯಲ್ಲಿ ಬಿಟ್ಟರೆ ದಿನವೊಂದಕ್ಕೆ ಎರಡಾಣೆ ಕೊಡಬೇಕೆಂಬ ನಿಯಮ ಹಾಕಿತು. ಆಗ ಶರ್ಮರು ತಮ್ಮ ಪತ್ರಿಕೆಯಲ್ಲಿ ಈ ಲೇಖನ ಬರೆದರು.

15. ಬಹಿರ್ಭದ್ರತೆ

ಜರ್ಮನರ ಪ್ರಾಬಲ್ಯ- ಘೋರಯುದ್ದದ ತರುವಾಯ ಅಮೆರಿಕನ್ನರ ಸ್ನೇಹ, ಬೊಲ್ಲೆವಿಕ್ ಪ್ರಾಬಲ್ಯ ಕುರಿತು ಈ ಲೇಖನದಲ್ಲಿ ಬರೆದಿದ್ದಾರೆ. (ವಿ.ಕ ಆಗಸ್ಟ 03-1930)

16. ಭಾರತೀಯರು ಭೀತಚೇತನರಲ್ಲ.

ಭಾರತ ಸೇವಕರ ಸಂಘ (Servenat of India Society) ವನ್ನು ಸ್ವಾತಂತ್ರ್ಯ ಹೋರಟಗಾರರಾದ ಗೋಪಾಲಕೃಷ್ಣ ಗೋಖಲೆಯವರು ಸ್ಥಾಪಿಸಿದ್ದರು. ಈ ಸಂಘದ ಸದಸ್ಯರೂ, ಸಮಾಜ ಸಂಸ್ಕರಣ ಕಾರ್ಯನಿರತರೂ ಆದ ಶ್ರೀ ಅಮೃತಲಾಲ್ ಠಕ್ಕರ್‌ರವರನ್ನು ಹಿಡಿದು, ಅವರಿಗೆ 6 ತಿಂಗಳು ಕಠಿಣ ಶಿಕ್ಷೆಯನ್ನು ವಿಧಿಸಿತು ಪ್ರಭುತ್ವ ಆಗ ಶರ್ಮರು ತಮ್ಮ ಪತ್ರಿಕೆಯಲ್ಲಿ ಭಾರತಿಯರು "ಭೀತಚೇತನರಲ್ಲ" ಎಂಬ ಲೇಖನ ಬರೆದರು.

18. ಜವಾಬ್ದಾರಿ ಸರಕಾರವು ದೊರೆತನಕ್ಕೆ ವಿರುದ್ಧವೆ ?

ಜವಾಬ್ದಾರಿ ಸರ್ಕಾರ ವ್ಯವಸ್ಥೆಯಲ್ಲಿ ಜನರು ಪ್ರತಿನಿಧಿಗಳನ್ನು ಚುನಾಯಿಸಿ ಶಾಸನ-ಸಭೆಗಳಿಗೆ ಕಳುಹಿಸುತ್ತಾರೆ. ಅಂತಹ ಪ್ರತಿನಿಧಿಗಳಲ್ಲಿ ಪ್ರಬಲ ಪಕ್ಷದ ನಾಯಕರನ್ನು ಅರಸರು ತಮ್ಮ ಸಮ್ಮುಖಕ್ಕೆ ಕರೆಸಿಕೊಂಡು ಮಂತ್ರಿಮಂಡಲ ರಚಿಸಿ ಎಂದು ಆಜ್ಞೆ ಮಾಡುತ್ತಾರೆ. ಆಡಳಿತ ಸೂತ್ರಗಳನ್ನು ಆ ಮಂತ್ರಿಗಳೆ ವಹಿಸಿಕೊಳ್ಳುತ್ತಾರೆ. ಎಂದು ಈ ಲೇಖನದಲ್ಲಿ ತಿಳಿಸಿದ್ದಾರೆ. ಮುಂದುವರೆದು ಜವಾಬ್ದಾರಿ ಸರ್ಕಾರಕ್ಕೆ ಜನರು ತಮ್ಮ ಹಕ್ಕೊತ್ತಾಯವನ್ನು ಮಂಡಿಸಿದರೂ ಕೂಡ ಸರ್ಕಾರ ಪ್ರಜೆಗಳ ಅನಿಸಿಕೆಗಳಿಗೆ ಬೆಲೆ ಕೊಡದಿದ್ದಾಗ ಶರ್ಮರು ಜವಾಬ್ದಾರಿ ಸರ್ಕಾರವು ದೊರೆತನಕ್ಕೆ ವಿರುದ್ಧವೇ ಎಂಬ ಲೇಖನ ಬರೆದರು. (ವಿಶ್ವಕರ್ಣಾಟಕ ಡಿಸೆಂಬರ್ 27ನೇ 1937)

19. ನಮ್ಮ ಮಹಾರಾಜರಿಗೆ ಅಧಿಕಾರವಿಲ್ಲವೆ?

ನ್ಯಾಷನಲ್ ಪಾರ್ಟಿಯ ನಾಯಕರುಗಳು ಜವಾಬ್ದಾರಿ ಸರ್ಕಾರ ರಚಿಸುವ ಅಧಿಕಾರ ಜನರಿಗಿಲ್ಲ; ಅವರಿಗೆ ಜವಾಬ್ದಾರಿ ಸರ್ಕಾರ ಬೇಕಾದರೆ ಬ್ರಿಟಿಷರನ್ನೇ ಕೇಳಲಿ ಅಂದರು. ಆಗ ಶರ್ಮರು ಜವಾಬ್ದಾರಿ ಸರ್ಕಾರ ರಚಿಸಲು ಮಹಾರಾಜರಿಗೆ ಅಧಿಕಾರವಿಲ್ಲವೆ? ಎಂದು ಪ್ರಶ್ನಿಸಿ ಲೇಖನ ಬರೆದರು.

20. ಪ್ರಜೆಗಳು ಪೋಲೀಸು ಅಧಿಕಾರಿಗಳು.

ಬನ್ನಪ್ಪ ಪಾರ್ಕ್‌ನಲ್ಲಿ ನಡೆದ ಗಲಾಟೆಯ ಪರಿಣಾಮವಾಗಿ ಪೋಲೀಸ್‌ರವರು ಹನ್ನೆರಡು ಮಂದಿಯ ಮೇಲೆ ಮೊಕದ್ದಮೆ ಹೂಡಿದರು. ನ್ಯಾಯಾಧೀಶರು ಘಟನೆಗೆ ಸಂಬಂಧಿಸಿದ ವಿಚಾರಣೆಯನ್ನು ನಡೆಸಿ, ಗಲಾಟೆಗೆ ಸಂಬಂಧಿಸಿದ ಕಾರಣವನ್ನು ವಿವರಿಸುತ್ತಾ, ತೀರ್ಪು ನೀಡಿರುವುದನ್ನು ಕುರಿತು ಈ ಲೇಖನದಲ್ಲಿ ಬರೆಯಲಾಗಿದೆ.

21. ಸಂಧಾನ ಮುರಿದು ಬೀಳಲು ಕಾರಣವೇನು.

ಮೈಸೂರು ಸರ್ಕಾರದವರು ನಾಡ ಹೋರಾಟಗಾರರ ಮೇಲೆ ಹಾಕಿದ್ದ ಮೊಕದ್ದಮೆಗಳನ್ನು ತಿರುಗಿ ಪಡೆದರು. ಕಾಂಗ್ರೆಸ್ ಅಧ್ಯಕ್ಷರನ್ನು ಭೇಟಿ ಮಾಡಲು ನಿರ್ಧರಿಸಿದರು. ಆದರೆ ಆಕಸ್ಮಿಕವಾಗಿ ದಿವಾನರು ಮತ್ತು ಕಾಂಗ್ರೆಸ್ ಅಧ್ಯಕ್ಷರ ನಡುವೆ ನಡೆಯಬೇಕಾಗಿದ್ದ ಸಂಧಾನ ರದ್ದಾದ್ದರಿಂದ ಶರ್ಮರು ಸಂಧಾನ ಮುರಿದು ಬೀಳಲು ಕಾರಣವೇನು? ಎಂಬ ಲೇಖನ ಬರೆದರು.

22. ಶಿವಪುರ ರಾಜಕೀಯ ಸಮ್ಮೇಳನ

ಶಿವಪುರ ರಾಜಕೀಯ ಸಮ್ಮೇಳನವು ಮೈಸೂರು ಸಂಸ್ಥಾನದಲ್ಲಿ ರಾಜಕೀಯದ ಅಂಕುರ ಎನ್ನಬಹುದು. ಸಂಸ್ಥಾನದ 70 ತಾಲ್ಲೂಕುಗಳ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಾರ್ವಜನಿಕ ಹಿತಾಸಕ್ತಿಗಾಗಿ ಜನರು ಈ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಜವಾಬ್ದಾರಿ ಸರ್ಕಾರವೆಂದರೇನೆಂದು, ಅನೇಕರು ಅನೇಕ ರೀತಿ ಹೇಳುತ್ತಾರೆ. ಈ ವಿಚಾರವಾಗಿ ಮೈಸೂರಿನ ಜನರೆಲ್ಲರೂ ಒಂದು ದಿಟ್ಟವಾದ ಅಭಿಪ್ರಾಯ ಉಳ್ಳವರಾಗಬೇಕು, ಏಕ ಅಭಿಪ್ರಾಯವನ್ನು ಹೊಂದಬೇಕು. ಅಂತಹ ಜ್ಞಾನವನ್ನು ಅಭಿಪ್ರಾಯ, ಸಾಮರಸ್ಯವನ್ನು ಐಕ್ಯತೆಯನ್ನು ಜನರಲ್ಲಿ ಉಂಟು ಮಾಡುವುದಕ್ಕಿಂತ ಒಂದು ರಾಜಕೀಯ ಪಕ್ಷಕ್ಕೆ ಹೆಚ್ಚಿನ ಅಧಿಕಾರವಿರುವುದಿಲ್ಲ ಎಂದು ಈ ಲೇಖನದಲ್ಲಿ ತಿಳಿಸಿದ್ದಾರೆ.

: : ಅಡಿ ಟಿಪ್ಪಣಿ : :

1. ಕರ್ನಾಟಕ ಮಾಧ್ಯಮ ಆಕಾಡೆಮಿಯ–ಕನ್ನಡ ಪತ್ರಿಕಾಲೋಕದ ಧೀಮಂತರು–04 ಪು.ಸಂ– 29
2. ಶರ್ಮರ ಆತ್ಮಚರಿತ್ರೆ, ನನ್ನ ಜೀವನ ಮತ್ತು ಧ್ಯೇಯ ಪು.ಸಂ– 289
3. ಕರ್ನಾಟಕ ಮಾಧ್ಯಮ ಆಕಾಡೆಮಿಯ–ಕನ್ನಡ ಪತ್ರಿಕಾಲೋಕದ ಧೀಮಂತರು–04 ಪು.ಸಂ– 24
4. ಉದಯವಾಣಿ ನಮ್ಮ ಬೆಂಗಳೂರು ಪುರವಣಿ 31/07/2003 ಪು.ಸಂ – 02
5. ನಾಡಿಗ ಕೃಷ್ಣಮೂರ್ತಿ–ಭಾರತೀಯ ಪತ್ರಿಕೋದ್ಯಮ ಪು.ಸಂ – 446
6. ಅದೇ....... ಪು.ಸಂ– 446
7. ಅದೇ....... ಪು.ಸಂ– 447
8. ಕರ್ನಾಟಕ ಪತ್ರಿಕಾ ಇತಿಹಾಸ ಸಂಪುಟ–02 ಪು.ಸಂ – 13
9. ಸ್ವಾತಂತ್ರ್ಯ ಸಂಗ್ರಮದಲ್ಲಿ ನಮ್ಮ ವೀರ ವನಿತೆಯರು ಪು.ಸಂ– 25

ಅಧ್ಯಾಯ 06:

ತಿ.ತಾ ಶರ್ಮರ ಕೃತಿಗಳು ಮತ್ತು ಅವುಗಳ ವಿಶ್ಲೇಷಣೆ

ಕನ್ನಡ ನಾಡು ಕಂಡ ಸೃಜನಶೀಲ ಬರಹಗಾರರು-ಲೇಖಕರು ತಿರುಮಲೆ ತಾತಾಚಾರ್ಯ ಶರ್ಮರು. ಇವರು ಹಲವಾರು ಗ್ರಂಥಗಳನ್ನು ಹಾಗೂ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವು ಪ್ರಕಟಣೆಗೊಂಡಿವೆ. ಕೆಲವು ಅಪ್ರಕಟಿತವಾಗಿವೆ. ಶರ್ಮರು ಬರೆದಿರುವ ಕೃತಿಗಳು, ಗ್ರಂಥಗಳು, ಹಾಗೂ ಅವುಗಳ ವಿಶ್ಲೇಷಣೆ ಈ ಮುಂದಿನಂತಿವೆ.

1. ಜೂಲಿಯಸ್ ಸೀಜರ್ (1921 ದಾಸಪ್ರಭು ಅಂಡ್ ಸನ್, ಮಂಗಳೂರು)
2. ಕರ್ನಾಟಕ ಕೈಪಿಡಿ..(1924–ಕಾಂಗ್ರೆಸ್ ಸಮಿತಿ,ಬೆಳಗಾವಿ)
3. ಶಾಸನಗಳಲ್ಲಿ ಕಂಡುಬರುವ ಕನ್ನಡ ಕವಿಗಳು (ಭಾರತ ಸರ್ಕಾರ 1928)
4. ಬೆಂಗಳೂರು ದಂಡಿನ ಭವಿಷ್ಯ* (1934 –ವಿಶ್ವಕರ್ಣಾಟಕ)
5. ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನ (1934 –ವಿಶ್ವಕರ್ಣಾಟಕ)
6. ಕಾಂಗ್ರೆಸ್ ಸುವರ್ಣಮಹೋತ್ಸವ ಸಂಚಿಕೆ (1935– ವಿಶ್ವಕರ್ಣಾಟಕ)
7. ಜಗನ್ಮೋಹನ ಭವನದಿಂದ ವಿರುರಾಶ್ವತ್ಥಕ್ಕೆ (1938 – ವಿಶ್ವಕರ್ಣಾಟಕ)
8. ಮಧುರೆ ಮಠದ ಮಿಷನರಿಗಳು* (1938 ವಿಶ್ವಕರ್ಣಾಟಕ)
9. ಮೈಸೂರು ರಾಜಕೀಯ ಸುಧಾರಣೆಗಳ ತಿರುಳು (1940–ವಿಶ್ವಕರ್ಣಾಟಕ)
10. ಸ್ವಾತಂತ್ರ್ಯ ಸಂಗ್ರಾಮ ಅಥವಾ ಶಿವಪುರದಿಂದ ಸುಭಾಷ್ ನಗರಕ್ಕೆ (1945 – ನೆಹರು ಪ್ರಕಟಣ ಮಂದಿರ, ಬೆಂಗಳೂರು)
11. ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ (1800 ರಿಂದ 1857 ವರೆಗೆ) (1957 ಮೈಸೂರು ಸರಕಾರ)
12. ಭಾರತ ರತ್ನ ಮೋಕ್ಷಗುಂಡಂ ವಿಶ್ವೇಶ್ವರಯ್ಯ (ಲೋಕಶಿಕ್ಷಣ ಟ್ರಸ್ಟ್ – 1960)
13. ವಿಕ್ರಾಂತ ಭಾರತ (1965 – ಬೆಂಗಳೂರು)
14. ಮೈಸೂರು ಇತಿಹಾಸದ ಪುಟಗಳಿಂದ (1966– ನವನೀತ ಪ್ರಕಾಶನ, ಬೆಂ)
15. ಮಾಸ್ತಿಯವರ ಮನೋಧರ್ಮ (1969)
16. ವಿಚಾರ ಕರ್ನಾಟಕ (1970 – ಪುರೋಗಾಮಿ ಸಾಹಿತ್ಯ, ಬೆಂಗಳೂರು)
17. ಚಾರಿತ್ರಿಕ ದಾಖಲೆಗಳು (1971 ಕನ್ನಡ ಸಾಹಿತ್ಯ ಪರಿಷತ್)
18. ನಮ್ಮ ಜನ ನಡೆಸಿದ ಜೀವನ (1972 ಗೋಖಲೆ ವಿ.ಸಂ., ಬೆಂ)
19. ಕರ್ನಾಟಕ ವಾಸ್ತುಶಿಲ್ಪ (1976 ಬೆಂಗಳೂರು ವಿ.ವಿ)
20. ಭಗವಾನ್ ಶ್ರೀಕೃಷ್ಣ (1976– ಪರಿಮಳ ಪ್ರಕಾಶನ ನಂಜನಗೂಡು)
21. ಜೆಂಗರ್, ಟೈಮ್ಸ್ ಮತ್ತು ಘೋಷ್ (1976 ಮೈಸೂರು ವಿ.ವಿ.)

22. ರಷ್ಯನ್ ಸಾಹಿತ್ಯ ಪರಿಚಯ (1978 – ಬೆಂಗಳೂರು ವಿ.ವಿ.)
23. ರಾಷ್ಟ್ರಕೂಟಕ್ಕೆ ಮೈಸೂರಿನ ಸಪ್ತರ್ಷಿಗಳು
24. ಚಾರಿತ್ರಿಕ ದಾಖಲೆಗಳು.(ಕನ್ನಡ ಸಾಹಿತ್ಯ ಪರಿಷತ್ ಪ್ರಕಟಣೆ)
25. ಬಾಲಗಂಗಾಧರನಾಥ ತಿಲಕ್.(ಕನ್ನಡ ಸಾಹಿತ್ಯ ಪರಿಷತ್ ಪ್ರಕಟಣೆ)
26. ಜವಹಾರಲಾಲ್ ನೆಹರು.(ಕನ್ನಡ ಸಾಹಿತ್ಯ ಪರಿಷತ್ ಪ್ರಕಟಣೆ)
27. ಮಿಂಚಿನ ಬಳ್ಳಿಗಳು ಮತ್ತು ಇತರೆ ಸಣ್ಣಕಥೆಗಳು(ನವನೀತ ಪ್ರಕಾಶನ ಪ್ರಕಟಣೆ ಬೆಂಗಳೂರು)
28. ಗಲಿವರನ ಪ್ರವಾಸ
29. ಭಗವದ್ಗೀತೆ
30. ಶರ್ಮರ ವೈಗೋಂಕ್ತಿಗಳು

ಶರ್ಮರ ಆಯ್ದ ಕೃತಿಗಳ ವಿಶ್ಲೇಷಣೆ

1. ಮಿಂಚಿನ ಬಳ್ಳಿಗಳು ಮತ್ತು ಇತರ ಕಥೆಗಳು

ಶರ್ಮರ 'ಮಿಂಚಿನ ಬಳ್ಳಿಗಳು ಮತ್ತು ಇತರ ಕಥೆಗಳು' ಕನ್ನಡಕ್ಕೊಂದು ವಿಶಿಷ್ಟ ದೇಶಿಯ ಕೊಡುಗೆ. ವಿದ್ಯಾಶಾಲಾ ಪತ್ರಿಕೆ, ವಿದ್ಯಾ , ವಿಕ್ರಮ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ರಸಗತೆಗಳ ಸಂಗ್ರಹ ಈ ಕೃತಿ. ಮಿಂಚಿನ ಬಳ್ಳಿಗಳು ಕನ್ನಡದ ಮಿಂಚಿನ ಗದ್ಯ ಶೈಲಿಯ ಇತಿಹಾಸವನ್ನು ಗಮನದಲ್ಲಿಟ್ಟುಕೊಂಡು ವಿಮರ್ಶಿಲಾಗಿದೆ. ಆರಂಭದಲ್ಲಿ ಒಂದು ಪುಟದ ಕಥೆಗಳು ಕಂಡು ಬರುತ್ತವೆ. ಕೆಲವು ಕಥೆಗಳು ನಾಲ್ಕು–ಐದು ಪುಟಗಳನ್ನು ತುಂಬಿವೆ. ಇಲ್ಲಿಯ ಕಥೆಗಳ ಆಕಾರ ವೈವಿದ್ಯಯಮಯ ಜೀವನ ವಿಸ್ತಾರದ ಕಥೆಗಳನ್ನು ಒಳಗೊಂಡಿದೆ.

ಕನ್ನಡ ನಾಡಿನ ಇತಿಹಾಸವನ್ನು ಕಥಾರೂಪವಾಗಿ ಹೇಳುವ ಪ್ರಯತ್ನ ಮಾಡಲಾಗಿದೆ. ಇಲ್ಲಿ ಅದರ ಆತ್ಮದರ್ಶನಕ್ಕೆ ತಕ್ಕ ಸಮಯೋಚಿತ ಭಾಷಾಶೈಲಿ, ಅದರಲ್ಲಿರುವ ಆಶ್ಚರ್ಯಕರ ಸಂಗತಿಗಳು, ಸಂಭಾಷಣೆ ಓದುಗರ ಮನಸನ್ನು ಸೆಳೆದಿಡುತ್ತವೆ. ಹಿಂದೂ, ಮುಸ್ಲಿಂ, ಜೈನ, ಪಾರ್ಸಿ, ಕ್ರೈಸ್ತ ಬೌದ್ಧಧರ್ಮಗಳ ಸಾಹಿತ್ಯ ವನ್ನೆಲ್ಲ ಅದು ಒಳಗೊಂಡಿದೆ. ಇತಿಹಾಸ ಅಲ್ಲಲ್ಲಿ ಇಣುಕಿ ಹೋಗುತ್ತದೆ. ಇಲ್ಲಿರುವ ಕಥೆಗಳನ್ನು ಕಥೆಗಳು ಎನ್ನಲಾಗದಿದ್ದರೂ ಜಾನಪದ, ಇತಿಹಾಸದ ಸಂಗತಿಗಳು ಇಲ್ಲಿ ಉತ್ತಮವಾಗಿವೆ ಇಲ್ಲಿ ಶರ್ಮರು ಬಳಸಿರುವ ಬಾಷೆ, ಶಬ್ಧ ಸಂಪತ್ತು ವಿಶಿಷ್ಟವಾದುದ್ದು, ಸಮಯೋಚಿತ ಸ್ವರೂಪ್ಪದ್ದು ಆಗಿದೆ.

2. ವಿಕ್ರಾಂತ ಭಾರತ

ವಿಕ್ರಾಂತ ಭಾರತವು ವಿಶಾಲ ಭಾರತದ ಸ್ವಾತಂತ್ರಸಂಗ್ರಾಮದ ಘಟನೆಗಳ ಮಹಾಪಾತ್ರಗಳನ್ನು ಪರಿಚಯಿಸುತ್ತದೆ. ಪ್ರಜಾಮತದಲ್ಲಿ ಧಾರಾವಾಹಿಯಾಗಿ ಹರಿದುಬಂದ ಕ್ರಾಂತಿವೀರರ ಕಥೆಗಳು ಆಧುನಿಕ ಕನ್ನಡ ಸಾಹಿತ್ಯ ರಂಗದ ವೀರೋಚಿತ ಸಾಹಿತ್ಯ

ಕಥಾನಕವಾಗಿದೆ. ಬಾಲಚಂದ್ರ ಹರದಾಸ ಶಾಸ್ತ್ರಿಗಳ 'freedom struggle' ಎಂಬ ಕೃತಿಯಿಂದ ಪ್ರೇರಣೆಗೊಂಡ ಶರ್ಮರು ಈ ಕೃತಿ ರಚಿಸಿದರು. ಈ ಕೃತಿಯನ್ನು ತಮ್ಮ ಲೇಖನ ಚಟುವಟಿಕೆಗಳಿಗೆ ಸ್ಪೂರ್ತಿಯ ಸೆಲೆಯಾದ 'ಭಾರತಿ' ರವರಿಗೆ ಅರ್ಪಿಸಿದ್ದಾರೆ. ಈ ಕೃತಿಯಲ್ಲಿ ತೀವ್ರಗಾಮಿ ಹೋರಾಟಗಾರರಾದ ಲೋಕಮಾನ್ಯ ಖ್ಯಾತಿಯ ತಿಲಕರಿಂದ ಸುಭಾಷ್‌ಚಂದ್ರ ಬೋಸರವರೆಗಿನ ದೇಶ ಪ್ರೇಮಿಗಳ ರೋಚಕ ಕಥಾನಕಗಳನ್ನು ಒಳಗೊಂಡಿದೆ. ಕ್ರಾಂತಿವೀರರ ಜೀವನಹೋರಾಟದ ವಿವಿಧ ಮಜಲುಗಳನ್ನು ವಿವರಿಸುತ್ತದೆ. ದೇಶದ ಸ್ವಾತಂತ್ರ್ಯಕ್ಕಾಗಿ, ಬ್ರಿಟಿಷರಿಂದ ದಾಸ್ಯದ ವಿಮೋಚನೆಗಾಗಿ ಜೀವದ ಹಂಗು ತೊರೆದು ಹೋರಾಡಿ, ನೆತ್ತರು ಚೆಲ್ಲಿದ ನೇತಾರರ ಕಥೆಯನ್ನು ಪ್ರತಿಯೊಬ್ಬರೂ ಓದುವಂತೆ ಇಲ್ಲಿ ಚಿತ್ರಿಸಲಾಗಿದೆ.

3. ವಿಚಾರ ಕರ್ನಾಟಕ

ಇತಿಹಾಸಕಾರರೂ, ಶಾಸನ ತಜ್ಞರು ಆಗಿದ್ದ ಶರ್ಮಾಜಿಯವರು ಶಾಸನಗಳಲ್ಲಿ ಗೋಚರಿಸಿದ ಭಾರತೀಯ ಅದರ್ಶ ಜೀವನದ ಮೌಲ್ಯಗಳನ್ನು, ಪ್ರಾಚೀನ ಸಂಸ್ಕೃತಿಯ ಲಕ್ಷಣಗಳನ್ನು ಜನ ಸಾಮಾನ್ಯರಿಗೆ ಪರಿಚಯಿಸಲು ಕನ್ನಡ ನುಡಿ ಪತ್ರಿಕೆಯಲ್ಲಿ ಬರೆದ ಅನೇಕ ಟಿಪ್ಪಣಿಗಳ ಸಂಗ್ರಹವೇ 'ವಿಚಾರ ಕರ್ನಾಟಕ'. ಕನ್ನಡ ನಾಡು-ನುಡಿಗೆ ಸಂಬಂಧಿಸಿದಂತೆ ಬರೆದಿದ್ದ ವಿವಿಧ ವಿಚಾರಗಳನ್ನು ಇಲ್ಲಿ ಒಂದೊಟ್ಟಿಗೆ ಸೇರಿಸಲಾಗಿದೆ. ಈ ಗ್ರಂಥವು ಕರ್ನಾಟಕದ ಇತಿಹಾಸ, ಸಂಸ್ಕೃತಿ, ವಾಸ್ತುಶಿಲ್ಪ, ಕಲೆ, ಸಾಹಿತ್ಯ ಸಂಗೀತ ಇವೆಲ್ಲಾ ವಿಚಾರಗಳನ್ನೂ ಹೊಂದಿದ್ದು ನಾಡಿನ ಬಗ್ಗೆ ಅಭಿಮಾನ ಉಂಟು ಮಾಡಲು ಪ್ರೇರಕವಾಗಿದೆ. ಕರ್ನಾಟಕದಲ್ಲಿ ಈಗಾಗಲೇ ಆಗಿರುವ ಆಗಬೇಕಾಗಿರುವ ಅಧ್ಯಯನ-ಸಂಶೋಧನೆಗಳ ಬಗ್ಗೆ ತಿಳಿಸುತ್ತಾರೆ, ಮೌರ್ಯ-ಶಾತವಾಹನರ ಕಾಲದಿಂದ ಇಂದಿನವರೆಗಿನ ಕನ್ನಡಿಗರ ಜನಜೀವನದ ಮೇಲೆ ಬೆಳಕು ಚೆಲ್ಲಿ, ಕನ್ನಡ ಲಿಪಿ ಭಾಷೆಯ ಬಗ್ಗೆ ತಿಳಿಸುತ್ತದೆ. ದೇ.ಜವರೇಗೌಡರು ಈ ಕೃತಿಯ ಬಿಡುಗಡೆಯ ಕುರಿತು ವಿಚಾರ ಕರ್ನಾಟಕ ಒಂದು ರೀತಿಯಲ್ಲಿ ಕನ್ನಡಕ್ಕೊಂದು 'ವಿಶ್ವಕೋಶವಿದ್ದಂತೆ'. ಆಡಳಿತ ಭಾಷೆ ಕನ್ನಡವಾಗಲು ಶಬ್ಧ ಸಂಪತ್ತಿನ ಕೊರತೆ ಇದೆ ಎನ್ನುವವರಿಗೆ ಶರ್ಮರ ಸಾಧನೆ ಉತ್ತರವಾಗಿದೆ ಎಂದಿದ್ದಾರೆ. ಈ ಕೃತಿಯು ಶರ್ಮರ ಶಾಸನ ಸಂಶೋಧನೆಯ ನಾಡಭಕ್ತಿಯ ಕಲಾಭಿಮಾನದ ಫಲಶೃತಿಯಾಗಿ ಮೂಡಿಬಂದಿದೆ.

4. ಕರ್ನಾಟಕ ವಾಸ್ತು ಶಿಲ್ಪ

ಶರ್ಮರು ಬರೆದಿರುವ ಅನೇಕ ಸೂಚಿ ಕೃತಿಗಳಲ್ಲಿ 'ಕರ್ನಾಟಕವಾಸ್ತುಶಿಲ್ಪ' ವೂ ಒಂದಾಗಿದೆ. ಈ ಕೃತಿಯು ಕರ್ನಾಟಕ ರಾಜ್ಯವು ಅತ್ಯುನ್ನತ ಸ್ಥಿತಿಯಲ್ಲಿದಾಗ್ಗೆ ಪೂರ್ವಕ್ಕೆ ಮಹಾನದಿ; ಪಶ್ಚಿಮಕ್ಕೆ ಕರಾವಳಿ; ಉತ್ತರಕ್ಕೆ ನರ್ಮದಾ ನದಿ; ದಕ್ಷಿಣಕ್ಕೆ ಕಂಚಿಯವರೆಗೂ ವ್ಯಾಪಿಸಿತ್ತೆಂದು ತಿಳಿಯುತ್ತದೆ. ಕರ್ನಾಟಕ ಶೈಲಿಯ ಮೂಲದ ಬಗ್ಗೆ ತಿಳಿಸುತ್ತಾ. ದೇವಾಲಯ ನಿರ್ಮಾಣದ ಮೊದಲ ಪ್ರಯತ್ನಗಳು, ಪ್ರಯೋಗಗಳು ನಡೆದಿರುವುದು

ಐಹೊಳೆಯಲ್ಲಿ; ಉತ್ತರ ಭಾರತ- ದಕ್ಷಿಣ ಭಾರತದ ಶಿಲ್ಪಿಗಳ ಸಂಯೋಗದ ಪರಿಣಾಮವಾಗಿ "ಕರ್ನಾಟಕ ವಾಸ್ತುಶಿಲ್ಪ" ಬೆಳೆದಿದೆ ಎಂಬ ಮಾಹಿತಿಯನ್ನು ಈ ಕೃತಿ ಹೊಂದಿದೆ.

ಐಹೊಳೆಯಲ್ಲಿರುವ ಪ್ರಮುಖ ದೇವಾಲಯಗಳ ರಾಶಿಯಲ್ಲಿ 'ದುರ್ಗದೇವಾಲಯ' ವಿಶಿಷ್ಟವಾದ ಗರ್ಭಗೃಹ ಹೊಂದಿದೆ. ಮೇಲ್ಭಾಗದಲ್ಲಿ ಶಿಖರಗಳಿವೆ. ಹುಚ್ಚಿಮಲ್ಲಿಯ ಗುಡಿಯು ಗ್ರಾಮದ ಉತ್ತರ ದಿಕ್ಕಿನಲ್ಲಿದೆ. ಇಮ್ಮಡಿ ಪುಲಿಕೇಶಿಯ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ.634 ರಲ್ಲಿ ರವಿಕೀರ್ತಿಯ ನಿರ್ಮಿಸಿದ ಮೇಗುತಿ ದೇವಾಲಯವು ಐಹೊಳೆಯಲ್ಲಿದೆ. ಒಟ್ಟಾರೆಯಾಗಿ ಕಲೆ ಮತ್ತು ವಾಸ್ತುಶಿಲ್ಪದ ತವರೂರಾದ, ಬಾದಾಮಿ- ಐಹೊಳೆ-ಪಟ್ಟದ ಕಲ್ಲುಗಳ ದೇವಾಲಯಗಳ ಸಂಗ್ರಹ ಸೂಚ್ಯ ವಿಮರ್ಶಾತ್ಮಕವಾದ ಮಾಹಿತಿ ಈ ಗ್ರಂಥದಲ್ಲಿ ಇದೆ.

5. ಮೈಸೂರು ರಾಜಕೀಯ ಸುಧಾರಣೆಗಳ ತಿರುಳು

ಶರ್ಮರು ಕರ್ನಾಟಕ ರಾಜ್ಯದಲ್ಲಿ ರಾಜಕೀಯ ಸುಧಾರಣೆಗಳಿಗೆ ಒತ್ತಾಯಿಸಿದರು. 1940ರಲ್ಲಿ ಮೈಸೂರು ರಾಜಕೀಯ ಸುಧಾರಣೆಗಳ ತಿರುಳು ಎಂಬ ಗ್ರಂಥವನ್ನು ರಚಿಸಿ ಅವರೇ ಪ್ರಕಟಿಸಿದರು. ಮೈಸೂರು ರಾಜಕೀಯ ಸುಧಾರಣೆಗಳ ವರದಿಯ ಮೇಲೆ ಮೈಸೂರು ಸರ್ಕಾರದವರು ಒಂದು ಆಜ್ಞೆ ಹೊರಡಿಸಿದರು. ಆ ಆಜ್ಞೆಗೆ ಸಂಬಂಧಿಸಿದಂತೆ ವಿಶ್ವಕರ್ಣಾಟಕದಲ್ಲಿ ಒಂಭತ್ತು ಪ್ರಧಾನ ಲೇಖನಗಳು ಪ್ರಕಟಗೊಂಡವು. ಆ ಎಲ್ಲಾ ಲೇಖನಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಲಾಯಿತು. ಆ ಪುಸ್ತಕವೇ "ಮೈಸೂರು ರಾಜಕೀಯ ಸುಧಾರಣೆಗಳ ತಿರುಳು". ಶ್ರೀ ಡಿ. ವಿ. ಗುಂಡಪ್ಪನವರು ಈ ಕೃತಿಗೆ ಮುನ್ನುಡಿ ಬರೆದಿದ್ದಾರೆ. ಧಾರವಾಡದ ಸಾಧನ ಮುದ್ರಣಾಲಯದವರು ಈ ಗ್ರಂಥವನ್ನು ಮುದ್ರಿಸಿದ್ದಾರೆ. ಈ ಗ್ರಂಥದಲ್ಲಿ ಹಿಂದೆ ಇದ್ದ ಮೈಸೂರು ಸರ್ಕಾರದವರ ರಾಜಕೀಯ ಸುಧಾರಣೆಗಳ ಆದೇಶವನ್ನು ಪ್ರಸ್ತಾಪಿಸುತ್ತ, ಸರ್ಕಾರದ ಲೋಪ-ದೋಷಗಳನ್ನು ವಿಮರ್ಶೆ ಮಾಡಿ, ರಾಜ್ಯ ಸರ್ಕಾರದ ವ್ಯವಸ್ಥೆಯಲ್ಲಿ ಇರಬೇಕಾದ ಮೂಲ ತತ್ವಾಂಶಗಳನ್ನು ಪ್ರಸ್ತಾಪಿಸಿದ್ದಾರೆ. ನಮ್ಮ ರಾಜಕೀಯ ಅಧ್ಯಯನಕ್ಕೆ ಈ ಗ್ರಂಥವು ಸಾಧನವಾಗಿದೆ.

6. ಕರ್ನಾಟಕ ಇತಿಹಾಸದ ಸಿಂಹಾವಲೋಕನ

ಪಾಶ್ಚಾತ್ಯ ಲೇಖಕರು, ಭಾರತೀಯ ಲೇಖಕರನ್ನೂ ಒಳಗೊಂಡಂತೆ ಭರತಖಂಡದ ಇತಿಹಾಸ ರಚನೆ ಮಾಡಿದವರು ಉತ್ತರ ಭಾರತಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ದಕ್ಷಿಣ ಭಾರತದ ಇತಿಹಾಸದ ರಚನೆಯಲ್ಲಿ ಮಲತಾಯಿ ಧೋರಣೆಯನ್ನು ಅನುಸರಿಸಿದರು. ಕರ್ನಾಟಕದ ಇತಿಹಾಸದ ವಿಷಯವಂತೂ ಅವರ ಗಮನಕ್ಕೆ ಬರಲಿಲ್ಲ. ಅದು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಾಗಿತ್ತು. ರೈಸ್, ಹಯವದನರಾವ್, ಪೀಟ್, ನರಸಿಂಹಾಚಾರ್ಯ ಮೊದಲಾದವರ ಪ್ರಯತ್ನದ ಫಲವಾಗಿ ಕರ್ನಾಟಕ ಇತಿಹಾಸಕ್ಕೆ

ಒಂದು ಸ್ಪಷ್ಟ ರೂಪ ಬಂತು. ಈ ಕಾರ್ಯ ನಡೆಯುವವರಿಗೂ ಕರ್ನಾಟಕ ಪ್ರಸಿದ್ಧಿಗೆ ಬಂದಿರಲಿಲ್ಲ. ಆನಂತರ ಕೆಲವು ವಿದ್ವಾಂಸರು ಈ ನಿಟ್ಟಿನಲ್ಲಿ ಕಾರ್ಯ ಪ್ರವತ್ತರಾಗಿ ಮೌರ್ಯ, ಶಾತವಾಹನ, ಕದಂಬ, ಗಂಗ, ಚಾಲುಕ್ಯ ರಾಷ್ಟ್ರಕೂಟ, ಹೊಯ್ಸಳ ವಿಜಯನಗರ, ಕೆಳದಿ, ಮೈಸೂರು ಒಡೆಯರ ರಾಜಮನೆತನಗಳನ್ನು ಆ ಸಾಮ್ರಾಜ್ಯಗಳನ್ನೂ ಪರಿಚಯಿಸಲು ಪ್ರಯತ್ನಿಸಿದರು. ಇಂತಹ ಪ್ರಯತ್ನಗಳ ಯಶಸ್ವಿ ರೂಪವೇ 'ಕರ್ನಾಟಕ ಇತಿಹಾಸದ ಸಿಂಹಾವಲೋಕನ'. ಇದು ಅಖಂಡ ಕರ್ನಾಟಕದ ಇತಿಹಾಸವನ್ನು ಒಳಗೊಂಡಿದೆ.

7. ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ (1800–1857)

ಭಾರತದಲ್ಲಿ ಬ್ರಿಟಿಷರ ದುರಾಡಳಿತದ ವಿರುದ್ಧವಾಗಿ ನಡೆದ ಹೋರಾಟವು ಹಿಂಸಾತ್ಮಕ ಹಾಗೂ ಅಹಿಂಸಾತ್ಮಕ ಸ್ವರೂಪವನ್ನು ಒಳಗೊಂಡಿದೆ. ಭಾರತದಲ್ಲಿ ಬ್ರಿಟಿಷರ ವಿರುದ್ಧ ನಡೆದ ಹೋರಾಟದಂತೆಯೇ ಅದರ ಅವಿಭಾಜ್ಯ ಅಂಗವಾದ ಕರ್ನಾಟಕದಲ್ಲಿಯೂ ಬ್ರಿಟಿಷರ ಆಡಳಿತದ ವಿರುದ್ಧ ಹೋರಾಟಗಳು ಸಂಭವಿಸಿದವು. ಈ ಹೋರಾಟಗಳನ್ನು ಅನುಕ್ರಮವಾಗಿ ಗುರುತಿಸಿದ ಕೃತಿಯೇ ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ (1800–1857).

ಬ್ರಿಟಿಷರ ದಾಸ್ಯದ ವಿಮೋಚನೆಗಾಗಿ ಕರ್ನಾಟಕದಲ್ಲಿ ಹೋರಾಡಿದ ಹೋರಾಟಗಾರರ ಕುರಿತು ಈ ಕೃತಿಯು ಬೆಳಕು ಚೆಲ್ಲುತ್ತದೆ. ಅವರ ಧೈರ್ಯ, ಸಾಹಸ, ಶೌರ್ಯ, ತ್ಯಾಗ, ಬಲಿದಾನ, ಮಿಗಿಲಾದ ರಾಷ್ಟ್ರಪ್ರೇಮಗಳನ್ನು ವಿವರಿಸುತ್ತದೆ. ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರ ವಿರುದ್ಧ ಶಸ್ತ್ರ ಸಜ್ಜಿತ ಹೋರಾಟ ಮಾಡಿದ ಸುರಪುರದ ವೆಂಕಟನಾಯಕ, ಹಲಗಲಿಯ ಬೇಡರು, ರಾಣಿ ಚನ್ನಮ್ಮ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ನರಗುಂದದ ಬಾಬಾ ಸಾಹೇಬ್, ಭೀಮರಾವ್‌ಮುಂಡರಗಿ, ಮೊದಲಾದವರ ಹೋರಾಟವನ್ನು ಈ ಕೃತಿ ಒಳಗೊಂಡಿದೆ. ಮೈಸೂರು ಒಡೆಯರ ಆಡಳಿತದ ವಿವಿಧ ಒಳಮುಖಗಳನ್ನು ಪರಿಚಯಿಸುತ್ತದೆ. 1800–1857ರ ವರಗಿನ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಗಳ ಬಗ್ಗೆ ತಿಳಿಸುವ ಗ್ರಂಥವಾಗಿದೆ.

8. ಭಾರತದ ವಿದೇಶಾಂಗ ನೀತಿ

ಶರ್ಮರು ರಚಿಸಿರುವ ಹಲವಾರು ಕೃತಿಗಳಲ್ಲಿ ಭಾರತದ 'ವಿದೇಶಾಂಗ ನೀತಿ' ಕುರಿತದ್ದೂ ಒಂದಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಭಾರತವು ತನ್ನದೇ ಆದ ವಿದೇಶಾಂಗ ನೀತಿಯನ್ನು ಅನುಸರಿಸಿತು. ಈ ನೀತಿಯ ಬಗೆಗೆ ಈ ಗ್ರಂಥವು ಸಂಪೂರ್ಣ ಮಾಹಿತಿ ನೀಡುತ್ತದೆ. ಭಾರತದ 'ವಿದೇಶಾಂಗ ನೀತಿಯ ಶಿಲ್ಪಿ' ದೇಶದ ಮೊಟ್ಟಮೊದಲ ಪ್ರಧಾನಿ ಪಂಡಿತ್ ಜವಹರಲಾಲ್‌ನೆಹರುರವರು ರೂಪಿಸಿದ ಈ ವಿದೇಶಾಂಗ ನೀತಿ, ಅದರ ತತ್ವಗಳು, ಅದರ ಹಿನ್ನೆಲೆ ಬಗೆಗೆ ಗ್ರಂಥವು ಮಾಹಿತಿ ನೀಡುತ್ತದೆ. ಭಾರತ–ಚೀನಾ ನಡುವೆ ಏರ್ಪಟ್ಟ 'ಪಂಚಶೀಲ ತತ್ವ' ಗಳ ಒಪ್ಪಂದದ ಬಗ್ಗೆ

ವಿವರಿಸುತ್ತದೆ. ಕಾಮನ್‌ವೆಲ್ತ್ ಒಕ್ಕೂಟ 'ಭಾರತದ ಮೇಲೆ ಚೀನಾದ ಆಕ್ರಮಣ'; ಮುಂತಾದ ಮಾಹಿತಿಗಳನ್ನೂ ಒಳಗೊಂಡಿದೆ.

9. ಕರ್ನಾಟಕ ಕೈಪಿಡಿ (Karnataka Hand Book)

1924ರಲ್ಲಿ ಕರ್ನಾಟಕದ ಬೆಳಗಾಂನಲ್ಲಿ ನಡೆದ 'ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್' ಅಧಿವೇಶನ ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಸಮಾವೇಶಗೊಂಡಿತು. ಅದರ ಅಧ್ಯಕ್ಷತೆಯನ್ನು ಮಹಾತ್ಮಗಾಂಧೀಜಿಯವರು ವಹಿಸಿದ್ದರು. ಈ ಸಮಯದಲ್ಲಿ ಈ ಗ್ರಂಥವನ್ನು ರಚಿಸಲಾಯಿತು. ಸಮ್ಮೇಳನಕ್ಕೆ ಬರುವವರೆಗೆ ಕರ್ನಾಟಕವನ್ನು ಸಂಪೂರ್ಣವಾಗಿ ಪರಿಚಯಿಸುವುದಕ್ಕಾಗಿ ಈ ಕೃತಿ ರಚಿಸಲಾಯಿತು. ಕನ್ನಡ ನಾಡಿನ ಕಲೆ, ವಾಸ್ತು-ಶಿಲ್ಪ, ಜೀವನ ಸಂಸ್ಕೃತಿ, ಇತಿಹಾಸ, ಒಟ್ಟಾರೆಯಾಗಿ ಕನ್ನಡನಾಡಿನ ಬಗೆಗೆ ಸಂಪೂರ್ಣ ಮಾಹಿತಿಯನ್ನು ಈ ಗ್ರಂಥ ಒಳಗೊಂಡಿದೆ.

10. ಗಲೀವರ ಪ್ರವಾಸ:

ಇದೊಂದು ರೋಚಕ ಕಲ್ಪನಾ ಕಥಾನಾಕ. ಮೂಲ ಗ್ರಂಥ ಗಲಿವರ್ಸ್ ಟ್ರಾವೆಲ್ಸ್' ಜಾನ್‌ಥನ್ ಸ್ವಿಫ್ಟ್ ಎಂಬಾತನ ಇಂಗ್ಲೀಷ್ ಕಥಾನಕ. ಆದರ ವಸ್ತು-ವಿಚಾರ-ವಿವರ-ರೋಚಕತೆ ಇದನ್ನು ಗಮನಿಸಿದ ಶರ್ಮರಿಗೆ ನಮ್ಮ ಮಕ್ಕಳಿಗೂ ಈ ಕಥೆ ತಿಳಿಯಬೇಕು, ಅವರು ಓದಿ ಕಣಿದಾಡಬೇಕು ಎಂದು ಬಯಸಿದರು, ಆ ಬಯಕೆ ಅವರಿಂದ ಆ ಕಥಾನಕ ಕನ್ನಡ ರೂಪಾವತಾರ ತಾಳಿತು! ಮಕ್ಕಳಿಗಾಗಿ ಅಲ್ಲವೇ ಈ ಕತೆಗಳು, ಅದಕ್ಕೆ ತಕ್ಕ ಸರಳವಾದ ಕನ್ನಡದ ಶೈಲಿ ಈ ಪುಸ್ತಕದ ಬರಹ. ಕನ್ನಡದ ಬಾಲ ಸಾಹಿತ್ಯಕ್ಕೆ ಇದು ಶರ್ಮರ ಕೊಡುಗೆ-ವಾಸ್ತು ಪಾತ್ರಕ್ಕೆ ತಕ್ಕ ಸರಳಾಶೈಲಿಗೂ ಇದೊಂದು ಉದಾಹರಣೆ ಕೂಡ.

11. ಜೂಲಿಯಸ್ ಸೀಜರ್:-

ಷೇಕ್ಸ್‌ಪಿಯರ್‌ನ ಜ್ಯೂಲಿಯಸ್ ಸೀಜರ್ ನಾಟಕದ ಕತೆಯನ್ನು ಓದಿ 1918-1920 ರಲ್ಲಿ ಆ ಕತೆಯನ್ನು ಕನ್ನಡಕ್ಕೆ ಭಾಷಾಂತರಿಸಿದ ರೂಪವೇ ಜ್ಯೂಲಿಯಸ್ ಸಿಜರ್.

12. ಮಧುರೆ ಮತದ ಮಿಷನರಿಗಳು:

1938ರಲ್ಲಿ ವಿಶ್ವಕರ್ಣಾಟಕದಲ್ಲಿ ಪ್ರಕಟವಾದ ಲೇಖನಗಳ ಮಾಹಿತಿಯೇ ಮಧುರೆ ಮತದ ಮಿಷನರಿಗಳು. ಭಾರತಕ್ಕೆ ಮೊಟ್ಟಮೊದಲು ಕಾಲಿಟ್ಟ ಐರೋಪ್ಯರು ಪೋರ್ಚ್‌ಗೀಸರು, ಇವರ ನಂತರ ಹಲವಾರು ಯೂರೋಪಿನ ರಾಷ್ಟಗಳು ವ್ಯಾಪಾರಕ್ಕಾಗಿ ಭಾರತಕ್ಕೆ ಬಂದವು. ವ್ಯಾಪಾರದ ಜೊತೆಗೆ ತಮ್ಮ ಧರ್ಮವನ್ನು ಪ್ರಚಾರ ಮಾಡಲು ಕ್ರೈಸ್ತ ಮಿಷನರಿಗಳನ್ನು ಭಾರತಕ್ಕೆ ಕರೆತಂದರು. ಈ ಕ್ರೈಸ್ತ ಮಿಷನರಿಗಳನ್ನು ಶರ್ಮರು ಮಧುರೆ ಮತದ ಮಿಷನರಿಗಳು ಎಂದು ಕರೆದು ಅವರ ಕಾರ್ಯ ಚಟುವಟಿಕೆಗಳು ಹಾಗೂ ಧರ್ಮಪ್ರಚಾರವನ್ನು ಕುರಿತು ಈ ಗ್ರಂಥದಲ್ಲಿ ವಿವರಿಸಿದ್ದಾರೆ.

ಅಧ್ಯಾಯ : 07

ಉಪಸಂಹಾರ

ಕರ್ನಾಟಕ ಸ್ವಾತಂತ್ರ್ಯದ ದಿಟ್ಟ ಹೋರಾಟಗಾರರು, ನಿರ್ಭೀತ ಬರಹಗಾರರು. ಸತ್ಯಾನ್ವೇಷಕ ಸಂಶೋಧಕರು, ಪ್ರಸಿದ್ಧವಾಗ್ಮಿ ಆಗಿದ್ದ ಶರ್ಮರ ಹೆಸರು ಕರ್ನಾಟಕ ಇತಿಹಾಸದ ಪುಟಗಳಲ್ಲಿ ಶಾಶ್ವತವಾಗಿ ರಾರಾಜಿಸುತ್ತದೆ. ಅವರ ಹೆಸರು ಶಾಸನ ಸಂಶೋಧನಾ ಕ್ಷೇತ್ರದಲ್ಲಿ ಧ್ರುವತಾರೆಯಂತೆ ಮಿನುಗುತ್ತಿದೆ. ಕರ್ನಾಟಕ ಇತಿಹಾಸದ ಪುಟಗಳಲ್ಲಿ ಅವರ ಹೆಸರು ಅಜರಾಮರವಾಗಿದೆ.

ಶರ್ಮರ ಸರಳತೆ, ಸಜ್ಜನಿಕೆ, ಜೀವನ ಆದರ್ಶ, ರಾಷ್ಟ್ರಪ್ರೇಮ ಹಾಗೂ ನಾಡಭಕ್ತಿ ಇವೆಲ್ಲಾ ಯುವಜನಾಂಗಕ್ಕೆ ಆದರ್ಶವಾಗಿದೆ. ನಿಷ್ಠಾ ಗಾಂಧಿವಾದಿಯಾಗಿದ್ದ ಶರ್ಮರು ಗಾಂಧಿಯುಗದ, ಸ್ವಾತಂತ್ರ್ಯ ನಂತರದ, ದಿನಗಳಲ್ಲಿಯೂ ಬದುಕಿ ಬಾಳಿ ತಮ್ಮ ಬದುಕನ್ನು ಸಾರ್ಥಕ ಮಾಡಿಕೊಂಡವರು. ಬಹುಭಾಷಾ-ಪಾಂಡಿತ್ಯ ಸ್ವಾತಂತ್ರ್ಯ ಹೋರಾಟ, ಐತಿಹಾಸಿಕ ಜ್ಞಾನ ಹಾಗೂ ತಮ್ಮ ವಿದ್ವತ್ತುಗಳಿಂದ ಗಳಿಸಿದ ಅನುಭವಗಳಿಂದ ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿಗೆ ಅವರು ಸಲ್ಲಿಸಿದ ಸೇವೆ ಚಿರಸ್ಮರಣೀಯವಾದದ್ದಾಗಿದೆ. ಕರ್ನಾಟಕ ಏಕೀಕರಣ ಚಳುವಳಿಯ ಸಂದರ್ಭದಲ್ಲಿ ಕನ್ನಡಿಗರಲ್ಲಿ ಭಾಷಾಭಿಮಾನದ ಮೂಡಿಸಲು ಪ್ರಯತ್ನಿಸಿದರು. ದೇಶಭಕ್ತಿ-ಭಾಷಾಭಕ್ತಿ, ಎರಡನ್ನೂ ಕೂಡಿಸಲು ಹೋರಾಡಿದರು.

ಶರ್ಮರು ಯಾವುದೇ ಜವಾಬ್ದಾರಿ ವಹಿಸಿಕೊಂಡರೂ ಅದನ್ನು ಅತ್ಯಂತ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಆ ಕೆಲಸ ಆಗಿಯೇ ತೀರುವಂತೆ ದುಡಿಯಬಲ್ಲ ಚಾತಿಯುಳ್ಳವರಾಗಿದ್ದರು. ದೂರದರ್ಶಿತ್ವ, ಕಾರ್ಯತತ್ಪರತೆ, ಕರ್ತವ್ಯನಿಷ್ಠೆ, ಪರಿಶ್ರಮ, ಪಾರದರ್ಶಕತೆಗಳ ಮೊತ್ತವೇ ಶರ್ಮಾಜಿ. ಶರ್ಮರು ವ್ಯಕ್ತಿ-ವ್ಯಕ್ತಿತ್ವ, ರಾಷ್ಟ್ರಭಕ್ತಿ-ಭಾಷಾಸಂಸ್ಕೃತಿಯ ಅನನ್ಯ ಪ್ರೇಮ, ಅನಿವಾರ್ಯ ಬಾಂಧವ್ಯದ ಪ್ರತೀಕವಾಗಿದ್ದರು. ಕನ್ನಡದ ಕಟ್ಟಾಳು ಶರ್ಮರು, ನಾಡಿನ ಏಳಿಗೆಗಾಗಿ ಶ್ರಮಿಸಿದ ಮಹಾನೀಯರಲ್ಲಿ ಮೊದಲ ಸಾಲಿನವರಾಗಿದ್ದಾರೆ. ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಉದ್ಧಾರಕ್ಕಾಗಿ ದುಡಿದವರಾಗಿದ್ದಾರೆ. ಮಾತೃಭೂಮಿಗಾಗಿ ಸೇವೆ ಸಲ್ಲಿಸಿದ ಗಣ್ಯರಸಾಲಿನಲ್ಲಿ ಒಬ್ಬರಾಗಿ ದ್ದಾರೆ. ಗಾಂಧಿಯುಗದ ಕರ್ನಾಟಕ ಕಂಡ ಸ್ವಾತಂತ್ರ ಹೋರಾಟಗಾರರಲ್ಲಿ ತಿರುಮಲೆ ತಾತಾಚಾರ್ಯ ಶರ್ಮರೂ ಒಬ್ಬ ಪ್ರಮುಖರಾಗಿದ್ದಾರೆ. ಜೀವನದ ಐವತ್ತು-ಅರವತ್ತು ವರ್ಷಗಳ ಅವಧಿಯಲ್ಲಿ ಶರ್ಮರು ಪ್ರವೇಶ ಮಾಡದೆ ಬಿಟ್ಟ ಕ್ಷೇತ್ರವಿಲ್ಲ. ಎಲ್ಲ ರಂಗಗಳಲ್ಲೂ ಒಂದಲ್ಲ ಒಂದು ಪಾತ್ರವನ್ನು ನಿರ್ವಹಿಸಿದ್ದಾರೆ. ಭಾರತವಿಲ್ಲದೆ ಕರ್ನಾಟಕವಿಲ್ಲ, ಕರ್ನಾಟಕದ ಏಳಿಗೆಯು ಭಾರತದ ಏಳಿಗೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಅವರು ನಾಡ ಸೌಂದರ್ಯದಲ್ಲಿ ಸೌಂದರ್ಯ ಪಾಲರು, ನಾಡ

ಜೀವನದ ಅವಲೋಕನದಲ್ಲಿ ಇತಿಹಾಸಕಾರರು, ಭಾರತದ ಸ್ವಾತಂತ್ರ್ಯದ ಉದ್ಗಾರದಲ್ಲಿ ಒಬ್ಬ ಜೀವನ ಸತ್ಯದ ಅನ್ವೇಷಕರು-ವಿಮರ್ಶಕರಾಗಿದ್ದರು.

"ಮೊದಲು ನಾಡು; ಆಮೇಲೆ ನಮ್ಮ ಬದುಕು" ಎಂಬುದು ಶರ್ಮರ ಬಾಳ ಮಂತ್ರವಾಗಿತ್ತು. ಸತ್ಯವು ಅಮರ, ಅವಿನಾಶಿ. ಆದ್ದರಿಂದ ಶರ್ಮರ ನುಡಿ-ಬರಹಗಳು ಅಮರ ಅವಿನಾಶಿ. ಬದುಕಿನುದ್ದಕ್ಕೂ ನಾಡು, ನುಡಿ, ಕಲೆ, ಸಂಸ್ಕೃತಿ, ಸಾಹಿತ್ಯ ಸೇರಿದಂತೆ ಕನ್ನಡಮ್ಮನ ಸೇವೆಯಲ್ಲಿ ನಿರತರಾಗಿದ್ದವರು. ಈ ದೆಸೆಯಲ್ಲಿ ಶ್ಲಾಘನೀಯವಾದ ಶಾಶ್ವತ ಮೌಲ್ಯದ ಸೇವೆ ಸಲ್ಲಿಸಿದಾರೆ. ಅತ್ತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ, ಇತ್ತ ಸರ್ಕಾರಿ ನೌಕರಿ ಗೊಂದಲದ ಇಕ್ಕಟ್ಟಿನಲ್ಲಿ ಸಿಲುಕಿದರು. ಶರ್ಮಾಜಿ, ಅದೆಂಥ ಸಂಕಲ್ಪ ಮಾಡಿದರು !! ನೌಕರಿ ತ್ಯಜಿಸಿ, ಪತ್ರಿಕೆ ಸ್ಥಾಪಿಸುವ ಮೂಲಕ ರಾಷ್ಟ್ರೀಯ ಸೇವೆಯ ಆರಂಭ! ಪತ್ರಿಕಾ ಲೇಖನಗಳ ಮೂಲಕ ಸಾವಿರಾರು ಕನ್ನಡ ಹೃದಯಗಳ ನಾಡಿಯನ್ನು ದೇಶಸೇವೆಗೆ ಸೆಳೆದು, ನಾಡಿನ ಹಿರಿಮೆ-ಗರಿಮೆಗಳನ್ನು ಎತ್ತಿ ಹಿಡಿಯುವಂತೆ ಅವರನ್ನು ಪ್ರೇರೇಪಿಸಿ, ಪತ್ರಿಕಾ ಸಂಪಾದಕತ್ವದ ವೃತ್ತಿ ಗೌರವವನ್ನೇ ಹೆಚ್ಚಿಸಿದ್ದೇ ಅಲ್ಲದೇ, ಅದರ ಸ್ವರೂಪಕ್ಕೇ ಹೊಸ ಆಯಾಮವನ್ನು ಕೊಟ್ಟವರು-ಕನ್ನಡ ಪತ್ರಿಕಾ ಪ್ರಪಂಚಕ್ಕೆ ಒಂದು "ಕನ್ನಡ ಶೈಲಿ ಸ್ವರೂಪ" ಕೊಟ್ಟವರು ಶರ್ಮರು; ಇದರಲ್ಲಿ ಅತಿಶಯೋಕ್ತಿಯಿಲ್ಲ.

ಸ್ವಾತಂತ್ರ್ಯನಂತರ ಅವರ ತೀಕ್ಷ್ಣ ರಾಷ್ಟ್ರೀಯ ಹಿತದೃಷ್ಟಿಯ ಬರಹಗಳ ಕೆಚ್ಚು - ಮೆಚ್ಚುಗಳು ಅವರ ಸ್ವಚ್ಛ ಬಿಚ್ಚು ಹೃದಯದ ನಿರ್ಭಿತ "ಸ್ಪಂದನ - ಸ್ಫೋಟನ." ಶರ್ಮಾಜಿಯವರು "ಸ್ವತಂತ್ರ ಭಾರತದ ಸಂವಿಧಾನ" ರಚನೆಯನ್ನು ಕುರಿತು ಬರೆದಿರುವ ಲೇಖನಗಳು ಮೌಲಿಕ ಮಾತ್ರವಲ್ಲ; ನಿರ್ಭೀತ - ನಿರ್ಮಲ ಮಾತ್ರವಲ್ಲ; ಅವು ಶಾಶ್ವತ ಅಧ್ಯಯನ ರಾಜಕೀಯ ಸಾಹಿತ್ಯ. ಏಕೀಕರಣ ಹಾಗೂ ನಾಡನುಡಿಗೆ ಶ್ರೀಗಂಧದ ಮರವನ್ನು ತೇಯ್ದ ಪ್ರಾತಃಸ್ಮರಣಿಯರು ಶರ್ಮಾಜಿ ಅವರ ಬದುಕು-ಬರಹ ನಮಗೆಲ್ಲಾ ಸ್ಫೂರ್ತಿಯ ಸೆಲೆ. ನಾಡ ಯುವಜನಾಂಗಕ್ಕೆ ನಾಡು-ನುಡಿಯ ಬಗ್ಗೆಗೆ ಉತ್ಸಹ, ಅಭಿಮಾನ ಮೂಡಿಸಿ ಬೆಳೆಸುವಲ್ಲಿ ಅವರ ಬದುಕು-ಬರಹಗಳು ಪ್ರೇರಕ ಶಕ್ತಿಯೂ, ಮಾರ್ಗದರ್ಶಿಯೂ ಆಗಿದೆ. ಇತಿಹಾಸ ರಚನೆ ಮತ್ತು ಪತ್ರಿಕೋದ್ಯಮದಲ್ಲಿ ವಿಶೇಷ ಆಸಕ್ತಿ, ಅಭಿರುಚಿ ಒಳನೋಟ ಹೊಂದಿದ್ದವರು. ಅನುವಾದ ಸಾಹಿತ್ಯದಲ್ಲಿಯೂ ಸಿದ್ಧಹಸ್ತರೆನಿಸಿದ್ದರು. ಸರಳತೆ, ನಿಷ್ಠೆ, ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡಿದ್ದ ಶ್ರೀಯುತರು ಉಜ್ವಲ ರಾಷ್ಟ್ರ ಭಕ್ತರೇ ಆಗಿದ್ದರು. ಅವರ ಇತಿಹಾಸ ಪ್ರೇಮ, ರಾಷ್ಟ್ರ ಭಕ್ತಿ ನಮಗೆಲ್ಲಾ ಸದಾ ಸ್ಫೂರ್ತಿ.

ಪ್ರಗತಿಯ ಪಥದಲ್ಲಿ ಸಾಗುತ್ತಿರುವ ಕರ್ನಾಟಕ ಸಾಧಿಸಿದ್ದು ಬಹಳ ಸಾಧಿಸಬೇಕಾದದ್ದೂ ಅನೇಕ. ಆ ನಿಟ್ಟಿನಲ್ಲಿ ನಮ್ಮ ಭಾಷೆಯನ್ನು ನಾವು ಬೆಳೆಸಬೇಕಾಗಿದೆ, ನಮ್ಮ ನಾಡು, ನಮ್ಮ ಜನ, ನಮ್ಮ ಭಾಷೆ, ನಮ್ಮ ಬದುಕು, ನಮ್ಮ ಭವಿಷ್ಯ ಈ ಭಾವನಾತ್ಮಕ ಬೆಸುಗೆಯನ್ನು ಬೆಳೆಸಬೇಕಾಗಿದೆ. ಆ ದಿಸೆಯಲ್ಲಿ "ಕನ್ನಡದ ಯಜ್ಞದೀಕ್ಷೆ"

ತೊಟ್ಟು ಆದರ್ಶದ ಏಳಿಗೆಗೆ ಹೆಗಲು ಕೊಟ್ಟು ದುಡಿದ ಮಹನೀಯರಲ್ಲಿ ಒಬ್ಬರು. ಚಿರಸ್ಮರಣೀಯರು ಶರ್ಮಾಜಿ ಕನ್ನಡ ಸಾಹಿತ್ಯ ಸಮ್ಮೇಳನದ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗಲೇ ರಾಜ್ಯದ ಅಡಳಿತದ ಎಲ್ಲವೂ ಕನ್ನಡದಲ್ಲೇ ನಡೆಯಬೇಕೆಂದು ಒತ್ತಾಯಿಸಿದರು. ಕನ್ನಡ ಭಾಷೆ ರಾಜ್ಯದ ಆಡಳಿತ ಭಾಷೆ ಆಗಬೇಕೆಂದು ಹೇಳಿದರು.

ಕರ್ನಾಟಕದಲ್ಲಿ ಅವರ ಕಾರ್ಯ ಕ್ಷೇತ್ರ ವ್ಯಾಪಕವಾಗಿತ್ತು. ಪತ್ರಿಕೆಯಾಗಲಿ, ಗ್ರಂಥವಾಗಲಿ, ಪದಾಧಿಕಾರಿಯಾಗಲಿ ಅವರ ನಿಷ್ಠೆ, ಪ್ರಾಮಾಣಿಕತೆಗಳು ಯಾವಾಗಲು ಏಕ ರೀತಿಯಲ್ಲಿರುತ್ತಿದ್ದವು. ಶರ್ಮರು ಮರಣ ಹೊಂದಿದ ಅನಂತರದ ಶ್ರದ್ಧಾಂಜಲಿ ಸಭೆಯ ಅಧ್ಯಕ್ಷರಾಗಿದ್ದ ಕೆಂಗಲ್‌ಹನುಮಂತಯ್ಯನವರು ಮಾತನಾಡುತ್ತಾ ....“ಆದರ್ಶದ ಸ್ವಾತಂತ್ರ್ಯ ಹೋರಾಟಗಾರರು, ಲೇಖಕರು, ನಿರ್ಭೀತ ವಿಮರ್ಶಕರು; ನಿರರ್ಗಳ ವಾಗ್ಮಿಯೂ ಆಗಿದ್ದ ಶರ್ಮರು ಜನತೆಯ ಹೃದಯಕ್ಕೆ ಆದರ್ಶಗಳನ್ನು ತುಂಬುತ್ತಿದ್ದರು. ಪ್ರತಿಭಾವಂತರು, ವಿದ್ವಾಂಸರು, ಇತಿಹಾಸಕಾರರೂ, ಆಗಿ ಪ್ರಾಚೀನ ಶಾಸನ ತಜ್ಞರೂ ಆಗಿದ್ದು, ಅವರು ಹಲವಾರು ಸಂಘ ಸಂಸ್ಥೆಗಳಿಗೆ ಆಸರೆಯಾಗಿದ್ದರು. ಇಂಥ ಸತ್ಪುರುಷರ ಅಸ್ತಮದಿಂದ ಆ ಸಂಸ್ಥೆಗಳೆಲ್ಲವೂ ಅನಾಥವಾದವು” ಎಂಬ ಅವರ ಮಾತು ತುಂಬಾ ಅರ್ಥಗರ್ಭಿತವಾದದ್ದು.

ಯಾವ ಪರಿಸ್ಥಿತಿಯಲ್ಲೂ ಯಾವ ಸಂಕಷ್ಟದಲ್ಲೂ, ಶರ್ಮರು ತಮ್ಮ ಆದರ್ಶ, ಧೋರಣೆಗಳನ್ನು ಬಿಡಲಿಲ್ಲ. ಜಿ. ಪಿ. ರಾಜರತ್ನಂ ಹೇಳಿದಂತೆ “ನಾಲ್ಗೆ ಸೀಳ್ಸಿ ಬಾಯ್ ಹೊಲ್ದುಹಾಕಿದ್ರೂನೂ ಮೂಗ್ನಾಗ್ ಕನ್ನಡ ಪದವಾಡ್ತೀನಿ” ಎಂಬಂತೆ ತಮ್ಮ ನಿಷ್ಠೆಯನ್ನು ಬಿಟ್ಟುಕೊಟ್ಟವರೇ ಅಲ್ಲ. ನೀಲತ್ತಹಳ್ಳಿ ಕಸ್ತೂರಿಯವರು ‘ಕಸ್ತೂರಿ’ ಪತ್ರಿಕೆಯ ಲೇಖನವೊಂದರಲ್ಲಿ ಶರ್ಮರ ‘ವಿಶ್ವಕರ್ಣಾಟಕ’ವನ್ನು ಬಣ್ಣಿಸುತ್ತಾ... ‘ಅದು ಹೊಟ್ಟೆಪಾಡಿನ ದಂಧೆಯಾಗಿರಲಿಲ್ಲ. ಅದೊಂದು ವ್ರತ; ವೀರವ್ರತ. ತರುಣರಿಗೆ ಬರವಣಿಗೆಯ ದೀಕ್ಷಾ ಸ್ಥಾನ; ಸಾಹಿತ್ಯದ ಅನೇಕ ಪ್ರಯೋಗಗಳಿಗೆ ಆಶ್ರಯ; ಹೊಸ ಪದಗಳ ಟಂಕಸಾಲೆ; ರಾಷ್ಟ್ರ ಪೇಮದ ಕಾವೇರಿ.... ಈ ಮಹಾಯಜ್ಞದಲ್ಲಿ ಸಂಪಾದಕರಿಗೆ ದೊರೆತ ಫಲ; ಸಾಲ, ಆಸ್ತಿ ಪಾಸ್ತಿಯ ವಿಕ್ರಯ, ಶ್ರಮ, ಜೈಲು, ಕಾಯಿಲೆ, ಬಡತನ. ಆದರೂ ಸತ್ಯ-ನಿಷ್ಠೆ. ರಾಷ್ಟ್ರ-ನಿಷ್ಠೆಗಳನ್ನು ಬಿಡದೆ ಪಾಲಿಸಿದ ಕೃತಕೃತ್ಯತೆಯ ಆನಂದ ಲೋಕಕ್ಕೆ ಸ್ಫೂರ್ತಿ” ಎಂದಿದ್ದರವರು. ಶರ್ಮರು ದೇಶದ ಸ್ವಾತಂತ್ರ್ಯಕ್ಕಾಗಿ, ಕರ್ನಾಟಕದ ಏಕೀರಣಕ್ಕಾಗಿ ದುಡಿದ ಓರ್ವ ಧೀಮಂತ ವ್ಯಕ್ತಿ. ಸಂಮೃದ್ಧ ಕರ್ನಾಟಕದ ಕನಸುಗಾರ ರಾಗಿದ್ದು, ಕನ್ನಡನಾಡು ಕನ್ನಡನುಡಿಗಳ ಅಭಿವೃದ್ದಿಗೆ ಅಪಾರ ಸೇವೆ ಸಲ್ಲಿಸಿದವರು. ಶ್ರೇಷ್ಠ ವಿದ್ವಾಂಸರೂ, ಶ್ರೇಷ್ಠ ಶಾಸನ ತಜ್ಞರೂ, ಪ್ರಭಾವೀ ಪತ್ರಿಕೋದ್ಯಮಿಯೂ, ಸಮಾಜಸೇವಕರೂ ಆಗಿದ್ದ ಶರ್ಮರು ಬಹುಮುಖ ಪ್ರತಿಭೆಯ ಗಣಿಯಂತಿದ್ದರು.

ಭಾರತದ ಸ್ವಾತಂತ್ರ್ಯ ಕರ್ನಾಟಕ ಏಕೀಕರಣ, ಇತಿಹಾಸ ಸಂಶೋಧನೆ ಕುರಿತ ಬಲ್ಮೆ-ಗೈಮೆ ಅದರ ತ್ಯಾಗ, ಭೋಗ, ವೈಭವಗಳನ್ನು ಮನಮುಟ್ಟುವಂತೆ ಜನಕ್ಕೆ ತಿಳಿಯಹೇಳಿದರು. ಪ್ರಜಾಪ್ರಭುತ್ವದ ಸಾಧನೆಯಲ್ಲಿ ಅವರದು ತತ್ವ ನಿಷ್ಠ ಸತ್ಯನಿಷ್ಠ ಹೋರಾಟ. ಅದಕ್ಕೆ ಅವರು ಅನುಭವಿಸಿದ್ದು ಕಷ್ಟ-ಕಾರ್ಪಣ್ಯ, ಕಾರಾಗೃಹವಾಸ ಕರ್ನಾಟಕದ ನಿರ್ಮಾಣಕ್ಕಾಗಿ ತಾತ್ವಿಕವಾಗಿ ವಾದಿಸಿದವರು. "ಕರ್ನಾಟಕ" ರಾಜ್ಯ ನಿರ್ಮಾಣಕ್ಕಾಗಿ ಹೆಣಗಾಡಿದವರು. ಕನ್ನಡ ಭಾಷೆಗೆ "ಹೊಸ ಉಸಿರು ತುಂಬುವಲ್ಲಿ ಬರಹಕ್ಕೆ ತಮ್ಮದೇ ಆದ ರೀತಿ ರಸ-ಸತ್ವ-ಶಕ್ತಿ-ತುಂಬಿ "ಶೈಲಿ"ಯೊಂದನ್ನು ರೂಪಿಸಿದವರು. "ವಿಶ್ವಕರ್ಣಾಟಕ" ಪತ್ರಿಕೆಯ ಸಂಪಾದಕೀಯ ಸೂಚನೆಗಳಲ್ಲಿ ಅವರ ಬರಹ ನಿತ್ಯ ವರ್ಷ-ಅದು ಹನಿಮಳೆ, ಜಡಿಮಳೆ, ಅಥವಾ ಆಲಿಕಲ್ಲು ಮಳೆಯೂ ಆಗಬಹುದು !! ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನಾಡಿಗಾಗಿ ದುಡಿದವರು.

ನಡೆಯಲ್ಲಿ ಹುಲಿಯ ಗಾಂಭೀರ್ಯ, ನುಡಿಯಲ್ಲಿ ಸಿಂಹಗರ್ಜನೆ, ಇದು ಶರ್ಮರ ವ್ಯಕ್ತಿತ್ವದ ನೆಲೆ. ಅವರು ತಮ್ಮ ಶಕ್ತಿಯುತ ವ್ಯಕ್ತಿತ್ವದ ಮೂಲಕ, ಪ್ರಭಾವ ಪೂರ್ಣ ಭಾಷಣಗಳ ಮೂಲಕ, ಪ್ರಚೋದಕ ಬರಹಗಳ ಮೂಲಕ ಸುಪ್ತ ಚೇತನವನ್ನು ಜಾಗ್ರತಗೊಳಿಸಿದರು. ರಾಷ್ಟ್ರ ಮಟ್ಟದ ನಾಯಕರುಗಳು ಕನ್ನಡ ನಾಡಿಗೆ ಬಂದಾಗ ಅವರ ಭಾಷಣಗಳನ್ನು ಕನ್ನಡಕ್ಕೆ ಭಾಷಾಂತರಿಸುವ ಅದ್ಭುತ ಭಾಷಾಂತರಕರಾಗಿದ್ದರು.

ಪತ್ರಿಕೆಗಳು ಮಾನವನ ದೇಶದ ರಕ್ತನಾಳಗಳಿದ್ದಂತೆ, ಮಾನವ ಜೀವಂತವಾಗಿರಲು ರಕ್ತನಾಳಗಳು ಎಷ್ಟು ಮುಖ್ಯವೋ ಸುದ್ಧಿ ಪ್ರಚಾರಕ್ಕೆ ಪತ್ರಿಕೆಗಳು ಅಷ್ಟೆ ಮುಖ್ಯ ಶರ್ಮಾಜಿಯವರು ತಮ್ಮ "ವಿಶ್ವಕರ್ನಾಟಕ" ಎಂಬ ರಾಷ್ಟ್ರೀಯ ಪತ್ರಿಕೆಯಲ್ಲಿ ಬ್ರಿಟಿಷರ ದಬ್ಬಾಳಿಕೆ, ದುರಾಡಳಿತ, ಅನ್ಯಾಯ, ಲೋಪದೋಷಗಳನ್ನೂ ಉಗ್ರವಾಗಿ ಖಂಡಿಸುವ ಮೂಲಕ ಭಾರತೀಯರನ್ನು-ಕನ್ನಡಿಗರನ್ನು ಎಚ್ಚರಗೊಳಿಸಿದರು. ಪತ್ರಿಕೆ ನಡೆಸುವುದು ಹಾಗೂ ರಾಜಕೀಯದಲ್ಲಿ ಪಾಲ್ಗೊಳ್ಳುವುದು ಅವರಿಗೆ ರಾಷ್ಟ್ರಗೌರವದ ಸಂಕೇತವಾಗಿತ್ತು.

"ಲೇಖನಿ ಖಡ್ಗಕ್ಕಿಂತ ಹರಿತವಾದುದು" ಎಂಬಂತೆ ಇವರ ಪತ್ರಿಕೆಯ ಲೇಖನಗಳು ಹರಿತವಾಗಿರುತ್ತಿದ್ದವು. ಈ ಲೇಖನಗಳ ಮೂಲಕ ನಾಡಿನ ಜನತೆಯನ್ನು ಸ್ವಾತಂತ್ರ್ಯ ಚಳುವಳಿಯತ್ತ ಹಾಗೂ ನಾಡಿನ ಏಕೀಕರಣದತ್ತ ಮುನ್ನಡೆಸಿದರು. ಅನ್ಯಾಯ, ಅನಾಚಾರ, ಅವ್ಯವಸ್ಥೆಗಳ ವಿರುದ್ಧ ಜನರನ್ನು ಜಾಗ್ರತಗೊಳಿಸಿದರು. ರಾಜ್ಯದ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಲು ಹಾಗೂ ಅಭಿವೃದ್ಧಿಪಡಿಸಲು ಶ್ರಮಿಸಿದರು. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾಗ ಸಾಹಿತ್ಯ ಸಮ್ಮೇಳನಗಳು ಕೇವಲ ಹಬ್ಬ-ಜಾತ್ರೆಯಾಗದೆ ಕನ್ನಡ ಭಾಷೆ, ನೆಲ, ಜಲದೊಂದಿಗೆ ಸಂಬಂಧ ಬೆಳೆಸಬೇಕು ಹಾಗೂ ಕನ್ನಡಕ್ಕಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಫ್ರಾನ್ಸಿನ "ರಾಷ್ಟ್ರವೀರ" ನೆಪೋಲಿಯನ್ ಚಕ್ರವರ್ತಿ ಹಾಗೂ ಬ್ರಿಟೀಷರ ವಿರುದ್ಧ ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಸ್ವಾತಂತ್ರ್ಯ ಕಹಳೆಯನ್ನೂದಿದ ಹೈದರಾಲಿ-ಟಿಪ್ಪುವನ್ನು ಶರ್ಮಾಜಿ ಮೆಚ್ಚಿಕೊಂಡಿದ್ದರು. ಶರ್ಮಾಜಿ ತಮ್ಮ ಬದುಕಿನುದ್ದಕ್ಕೂ ಪರಿಶುದ್ಧ ಸಾರ್ಥಕ ಜೀವನ ನಡೆಸಿದವರು. ಸಾರ್ವಜನಿಕ ಜೀವನ ತಮಗೆ ಬಂದ ಅವಕಾಶ ಎಂದು ಅವರು ಭಾವಿಸಿದ್ದರು. ಗಾಂಧೀಜಿಯವರ ಆದರ್ಶಗಳಿಗೆ ಮಾರುಹೋಗಿ, ಸರಳ-ಸತ್ಯನಿಷ್ಠೆಯ, ಸೇವೆಯ ಜೀವನವನ್ನು ಮೈಗೂಡಿಸಿಕೊಂಡಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ರಚನಾತ್ಮಕ ಕಾರ್ಯಗಳನ್ನು ಕೈಗೊಂಡರು. ಕರ್ನಾಟಕ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ರಚನಾ ಸಮಿತಿಯ ಅಧ್ಯಕ್ಷರಾಗಿ ಶರ್ಮರು ಸಲ್ಲಿಸಿದ ಸೇವೆ ಅಮೂಲ್ಯ, ಅನನ್ಯ. ನಾಡಿನಾದ್ಯಂತ ಸಂಚರಿಸಿ, ಸ್ವಾತಂತ್ರ-ಸಂಗ್ರಾಮ ಕುರಿತ ಮಾಹಿತಿಗಳನ್ನು ಸಂಗ್ರಹಿಸಿ, ಸಾಕ್ಷಾಧಾರ ಸಹಿತ ಆ ಇತಿಹಾಸ ಬರೆದರು. ಅದರ ಒಂದು ಸಂಪುಟ ಪ್ರಕಟಗೊಂಡಿತು. ಆದರೆ ಮುಂದಕ್ಕೆ ಸಾಗಲು ಸರ್ಕಾರ ಇವರ ಸೇವೆಯನ್ನು ಬಳಸಿಕೊಳ್ಳಲಿಲ್ಲ. "ನಿಮ್ಮ ಕಛೇರಿ ಮುಚ್ಚಿ" ಎಂದು ಆಜ್ಞೆ ಮಾಡಿತು. ಸುಮಾರು ಐನೂರು-ಆರುನೂರು ಪುಟಗಳ ಕೈಬರಹಗಳ ಮತ್ತೆ ದೊರೆಯಲಿಲ್ಲ. ಇದು ನಮ್ಮ ಪ್ರಭುತ್ವದ ಹೆಜ್ಜೆ ಗುರುತುಗಳಲ್ಲಿ ಅತ್ಯಂತ ದುಃಖದ-ದುರಂತದ ಅಧ್ಯಾಯ. ಶರ್ಮರಿಗೆ ನಷ್ಟವೇನೂ ಆಗಲಿಲ್ಲ; ಅವರ ಸತ್ಯ ನಿಷ್ಠೆ ಅಡಗಲಿಲ್ಲ-ಕುಗ್ಗಲಿಲ್ಲ. ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದ ಭವ್ಯ-ಹೃದಯಂಗಮ ನಿವೇದನೆಯು ನಿರ್ನಾಮವಾಯಿತು. ಶರ್ಮರು ಸತ್ಯಶೀಲರು; "ಗತಂ ಶೋಚಯೇತ್" ಎಂಬ ಮಾತು ನೆನಪಾಗಿ ಅವರು ತಮ್ಮ ಅನ್ವೇಷಣ-ಅಧ್ಯಯನದಲ್ಲಿ ತೊಡಗಿದರು. ಪ್ರಜಾಪ್ರಭುತ್ವದ ಆಡಳಿತ ಬಯಸಿ ಹೋರಾಡಿದ ಶರ್ಮರ ಜೀವನದ ಅಂಗವಾಗಿದ್ದ ಇತಿಹಾಸ ಕ್ಷೇತ್ರದ ವ್ಯವಸಾಯ ಫಲ ಮಣ್ಣು ಸೇರಿತು; ಒಪ್ಪಿ ಕೈಯಿಟ್ಟ ತಪ್ಪಿಗಾಗಿ ಒಂದುವಾರ ಉಪವಾಸ ಕೈಗೊಂಡರು ಆತ್ಮಶಾಂತಿಗಾಗಿ-ವೈರಿಭಾವದಿಂದಲ್ಲ. ಅದು ಶರ್ಮ ವ್ಯಕ್ತಿತ್ವದ ಪರಿಶುದ್ಧತೆ-ಎತ್ತರ-ವೈಶಾಲ್ಯ!

ಶರ್ಮರದು ನೇರ ನಡತೆಯುಳ್ಳ ಸ್ವಭಾವ, ತನಗೆ ಸರಿಕಾಣದ್ದನ್ನು ಸಹಿಸದೆ, ಅದನ್ನು ಬಹಿರಂಗವಾಗಿಯೇ ಟೀಕಿಸುವ ಸ್ವಭಾವ, ತಮ್ಮ ತತ್ವ ಸಿದ್ಧಾಂತಗಳೊಂದಿಗೆ ಎಂದಿಗೂ ರಾಜಿ ಮಾಡಿಕೊಂಡವರಲ್ಲ. ಅವರೊಬ್ಬ ಅಪ್ಪಟ ಸ್ವಾಭಿಮಾನಿ ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ತಂದುಕೊಳ್ಳುವುದನ್ನು ಎಂದೆಂದಿಗೂ ಸಹಿಸಿದವರಲ್ಲ. ಅವರಿಗೆ ಅಧಿಕಾರದ ಆಸೆ ಇರಲಿಲ್ಲ. ಸಕ್ರಿಯ ರಾಜಕಾರಣದಿಂದ ದೂರವೇ ಉಳಿದವರು. ತಾವು ಕಾರ್ಯ ನಿರ್ವಹಿಸಿದ ಎಲ್ಲಾ ಕ್ಷೇತ್ರಗಳಲ್ಲಿಯೂ ನಿಸ್ವಾರ್ಥ ಸೇವೆ ಸಲ್ಲಿಸಿದವರು. ಶ್ರೀಸಾಮಾನ್ಯರ ಹಿತಕ್ಕಾಗಿ ಶ್ರಮಿಸಿದರು. ಕ್ರಿಯಾಶೀಲರಾಗಿ ಸದಾ ಚಟುವಟಿಕೆಯಿಂದ ಕೆಲಸ ನಿರ್ವಹಿಸಿದವರು. ತಮ್ಮ ಬದುಕಿನುದ್ದಕ್ಕೂ ಆದರ್ಶಪ್ರಾಯರಾಗಿ ಬದುಕಿದ ಶರ್ಮರ ಸ್ವಚ್ಛ ಬದುಕು ಆದರ್ಶ ಅನುಕರಣೀಯವಾಗಿದೆ.

ಪರಮಾರ್ಶನ ಗ್ರಂಥಗಳು

1. ಆರನೆಯ ಚಾಲುಕ್ಯ ಸಾಮ್ರಾಜ್ಯೋತ್ಸವ ಸಂಚಿಕೆ – ಕರ್ನಾಟಕ ನವೋದಯ ಬೆಂಗಳೂರು 1994–1995 ಪ್ರಕಟಣೆ.
2. ಕರ್ನಾಟಕ ಪತ್ರಿಕಾ ಇತಿಹಾಸ ಸಂಪುಟ2 – ಕರ್ನಾಟಕ ಪತ್ರಿಕಾ ಅಕಾಡಮಿ ಬೆಂಗಳೂರು ಪ್ರಥಮ ಮುದ್ರಣ 1999
3. ಕನ್ನಡ ಪತ್ರಿಕೋದ್ಯಮದ ಧೀಮಂತರು 04 –ಕರ್ನಾಟಕ ಪತ್ರಿಕಾ ಅಕಾಡಮಿಯ ಪ್ರಕಟಣೆ 1990.
4. ಕಮಲಾ ಸಂಪಳ್ಳಿ – ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ವೀರ ವನಿತೆಯರು. ಪ್ರಕಾಶಕರು ಕಮಲಾ ಸಂಪಳ್ಳಿ ಅಭಿರಾಮ, ಆನಂದನಗರ ಬೆಂಗಳೂರು.
5. ಕುಮಾರಸ್ವಾಮಿ ಎಂ. – ಮೈಸೂರು ಸಂಸ್ಥಾನದ ರಾಷ್ಟ್ರೀಯ ಹೋರಾಟದಲ್ಲಿ ಸ್ಥಳೀಯ ಪತ್ರಿಕೆಗಳ ಪಾತ್ರ ಒಂದು ಅಧ್ಯಯನ (1885–1947) ಅಪ್ರಕಟಿತ ಪಿಎಚ್.ಡಿ ಕ. ರಾ. ಮು. ವಿ. ಮೈಸೂರು
6. ಗೋಪಾಲರಾವ್ ಹೆಚ್.ಎಸ್ – ಕರ್ನಾಟಕ ಏಕೀಕರಣಕ್ಕೆ ದುಡಿದ ಮಹಾನೀಯರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು–2010,
7. ಚಂದ್ರಶೇಖರ ಎಸ್. – ವಸಾಹತುಕಾಲೀನ ಕರ್ನಾಟಕ, ಕನ್ನಡ ಸಂಸ್ಕೃತಿ, ಇಲಾಖೆ, ಬೆಂಗಳೂರು
8. ಡಿ. ವಿ. ಗುಂಡಪ್ಪ – ದಿ ಪ್ರಸ್ ಇನ್ ಮೈಸೂರು
9. ತಿ. ತಾ. ಶರ್ಮರ – ಕರ್ನಾಟಕ ಸ್ವಾತಂತ್ರ್ಯ ಸಂಗ್ರಾಮ (1800–1857)
10. ತಿ. ತಾ. ಶರ್ಮರ – ಜೆಂಗರ್ ಟೈಮ್ಸ್ ಮತ್ತು ಗೋಷ್ ಮೈಸೂರು ವಿ.ವಿ. ಪ್ರಕಟಣೆ
11. ತಿ. ತಾ. ಶರ್ಮ – ಶಾಸನ ಸಂಶೋಧನಾ ಟಿಪ್ಪಣಿಗಳು
12. ತಿ. ತಾ. ಶರ್ಮರ – ಕನ್ನಡ ನಾಡು, ಕನ್ನಡ ಭಾಷೆ ಮತ್ತು ಸಂಸ್ಕೃತಿ ಕುರಿತ ಲೇಖನ ಮಾಲೆ
13. ತಿ. ತಾ. ಶರ್ಮ – ಕರ್ನಾಟಕ ಕೈಪಿಡಿ
14. ತಿ. ತಾ. ಶರ್ಮ – ಛಿದ್ರ ಕನ್ನಡನಾಡು ಭದ್ರ ಕರ್ನಾಟಕವಾಯಿತು.
15. ತಿ. ತಾ. ಶರ್ಮ – ವೀರಗಲ್ಲು–ಮಾಸ್ತಿಗಲ್ಲು
16. ತಿ. ತಾ. ಶರ್ಮ – ಮೈಸೂರು ರಾಜಕೀಯ ಸುಧಾರಣೆಗಳ ತಿರುಳು (1950)
17. ತಿ.ತಾ ಶರ್ಮ – ಕರ್ನಾಟಕ ವಾಸ್ತುಶಿಲ್ಪ, ಮಾಳವಿಕ ಪ್ರಕಾಶನ, ಮೈಸೂರು.
18. ತಿ.ತಾ ಶರ್ಮ – ಗಲೀವರನ ಪ್ರವಾಸ

19. ತಿ.ತಾ ಶರ್ಮ – ಮಧುರೆ ಮಠದ ಮಿಷನರಿಗಳು
20. ತಿರುಮಲೆ ತಾತಾಚಾರ್ಯ ಶರ್ಮ– ನನ್ನ ಜೀವನ ಮತ್ತು ಧ್ಯೇಯ (ಆತ್ಮ ಚರಿತ್ರೆ) ನವನೀತ ಪ್ರಕಾಶನ ವಿಶ್ವೇಶ್ವರಪುರ ಬೆಂಗಳೂರು-04
21. ತಿರುಮಲೆ ತಾತಾಚಾರ್ಯ ಶರ್ಮ – ಬಾಲಗಂಗಾಧರ ತಿಲಕ, ಕನ್ನಡ ಸಾಹಿತ್ಯ ಪರಿಷತ್.ಬೆಂಗಳೂರು.
22. ತಿರುಮಲೆ ಶ್ರೀರಂಗಾಚಾರ್ಯ ಮತ್ತು ಎಂ.ಕುಮಾರಸ್ವಾಮಿ – ಮೈಸೂರು ಸಂಸ್ಥಾನದ ವೃತ್ತ ಪತ್ರಿಕಾ ಇತಿಹಾಸ ನವನೀತ ಪ್ರಕಾಶನ ವಿ ವಿ ಪುರಂ, ಬೆಂಗಳೂರು
23. ತಿ. ತಾ. ಶರ್ಮ – ಶಿಲಾಶಾಸನಗಳ ಅವಲೋಕನ ಕನ್ನಡ ಸಾಹಿತ್ಯ ಪರಿಷತ್ ಕನ್ನಡ ನುಡಿ ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು.
24. ತಿ.ತಾ ಶರ್ಮ – ಮಾಸ್ತಿಯವರ ಮುನೋಧರ್ಮ ಕವಿಜನಾಶ್ರಯ 54 ಶಂಕರವನ ಬೆಂಗಳೂರು.
25. ತಿ. ತಾ. ಶರ್ಮ – ಜ್ಯೂಲಿಯಾಸ್ ಸೀಸರ್, ಪ್ರಕಾಶಕರು. ಸಾಹಿತ್ಯ ಪ್ರಕಟನಾಲಯ ಬೆಂಗಳೂರು.
26. ತಿ. ತಾ. ಶರ್ಮ – ಮೈಸೂರು ಇತಿಹಾಸದ ಹಳೆಯ ಪುಟಗಳು, ನವನೀತ ಪ್ರಕಾಶನ ಬೆಂಗಳೂರು ಮೊದಲ ಪ್ರಕಟಣೆ 1996.
27. ತಿ. ತಾ. ಶರ್ಮ – ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ 1800 ರಿಂದ 1857 ರ ವರಗೆ ಪ್ರಕಾಶಕರು ಮೈಸೂರು ಸಂಸ್ಥಾನದ ಸರಕಾರ, ಬೆಂಗಳೂರು.
28. ತಿರುಮಲೆ ತಾತಾಚಾರ್ಯ ಶರ್ಮರ – ಅಪ್ರಕಟಿತ ಲೇಖನಗಳು ಮತ್ತು ಬರಹಗಳು
29. ದೊರೆಸ್ವಾಮಿ ಹೆಚ್. ಎಸ್. – ಸ್ವಾತಂತ್ರ್ಯ ಸಂಗ್ರಾಮ, ಕರ್ನಾಟಕ ಸಾಹಿತ್ಯ ಮಂದಿರ 2000
30. ನಾಡಿಗ ಕೃಷ್ಣಮೂರ್ತಿ – ಭಾರತಿಯ ಪತ್ರಿಕೋದ್ಯಮ, ಮೂಲ ಪ್ರಕಟಣೆ ಮೈಸೂರು ವಿಶ್ವವಿದ್ಯಾನಿಲಯ. ಮರು ಪ್ರಕಟಣೆ ಕರ್ನಾಟಕ ಮಾಧ್ಯಮ ಅಕಾಡಮಿ ಬೆಂಗಳೂರು ಮೊದಲ ಮುದ್ರಣ 1969 ಮರು ಮುದ್ರಣ 2006.
31. ಪಾಲಾಕ್ಷ & ಆರ್.ಎಂ.ಶೇಖರಯ್ಯ – ಸಮಗ್ರ ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ ಶಶಿ ಪ್ರಕಾಶನ ತಿಪಟೂರು. ಮೊದಲ ಮುದ್ರಣ 1970.
32. ಪಾರ್ಥಸಾರಥಿ ಟಿ.ಎನ್ –ಭಾರತದ ಗ್ಯಾಸೆಟಿಯರ್–ಕರ್ನಾಟಕ ರಾಜ್ಯ ಮಂಡ್ಯ ಜಿಲ್ಲೆ,

33. ಪಾರ್ವತಿ ಹೆಚ್.ಎಸ್. – ತಿರುಮಲೆ ರಾಜಮ್ಮ, ಕನ್ನಡ ಸಾಹಿತ್ಯ ಪರಿಷತ್ ಪ್ರಕಟಣೆ ಬೆಂಗಳೂರು 2000.

34. ಭಾರತೀಯ ಸಂಸ್ಕೃತಿ ಮತ್ತು ಕೃಷಿ ಕುರಿತ ವಿಚಾರ ಸಂಕಿರಣ ಸಂಚಿಕೆ – ಮಿಥಿಕ್ ಸೊಸೈಟಿ ಬೆಂಗಳೂರು.

35. ಭಟ್ಟ ಜಿ. ಎಸ್. – ತಿರುಮಲೆ ತಾತಾಚಾರ್ಯ ಶರ್ಮ ಚೇತನ ಪ್ರಿಂಟರ್ಸ್ ಅಂಡ್ ಪಬ್ಲಿಷ್‌ರ್ ಮೈಸೂರು 2006.

36. ಮೈಸೂರು ರಾಜ್ಯ ನವೆಂಬರ್ 1.1956 – ಮೈಸೂರು ಸರ್ಕಾರದ ವಾರ್ತಾ ಇಲಾಖೆಯಿಂದ ಪ್ರಕಟಿಸಲಾಗಿದೆ. ಸರ್ಕಾರಿ ಮುದ್ರಣಾಲಯ 1956.

37. ವಸಂತಲಕ್ಷ್ಮೀ ಕೆ. – ವಿಶ್ವಕರ್ಣಾಟಕದ ತಿ.ತಾ.ಶರ್ಮ

38. ವಾಸುದೇವ ಶೆಟ್ಟಿ – ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಪತ್ರಿಕೆಗಳ ಪಾತ್ರ, ಕರ್ನಾಟಕ ಮಾಧ್ಯಮ ಅಕಾಡಮಿ ಪ್ರಕಟಣೆ ಬೆಂಗಳೂರು ಪ್ರಥಮ ಮುದ್ರಣ 2008.

39. ಶ್ರೀನಿವಾಸ ರಾವ್ ಎಸ್.ವಿ. – ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು–ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು.

40. ಶ್ರೀನಿವಾಸರಾವ್ ಎಸ್.ವಿ. – ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರುಗಳು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಣೆ ಬೆಂಗಳೂರು 2011.

41. ಷೇಕ್ ಅಲಿ ಮತ್ತು ಚಂದ್ರಶೇಖರ್ ಎಸ್. – ಕರ್ನಾಟಕ ಚರಿತ್ರೆ ಸಂಪುಟಗಳು ಕನ್ನಡ ವಿ.ವಿ. ಹಂಪಿ (1997)

42. ಸಿದ್ದವನಹಳ್ಳಿ ಕೃಷ್ಣಶರ್ಮ – ಗಾಂಧೀ ಮತ್ತು ಕರ್ನಾಟಕ ಗಾಂಧೀಸ್ಮಾರಕ ನಿಧಿ ಬೆಂಗಳೂರು – 1970.

43. ಸೂರ್ಯನಾಥ ಕಾಮತ್ – ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಲೋಕಶಿಕ್ಷಣ ಟ್ರಸ್ಟ್ ಗ್ರಂಥ ಮಾಲೆ, ಹುಬ್ಬಳ್ಳಿ–ಬೆಂಗಳೂರು 1992

44. ಸೂರ್ಯನಾಥ ಕಾಮತ್ – ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂ.ಪು. 1, 2, 3, ಗೀತಾ ಬುಕ್ ಹೌಸ್ ಮೈಸೂರು–1977

45. ಹಾಲಪ್ಪ ಜಿ.ಎಸ್ – ಹಿಸ್ಟ್ರೀ ಆಫ್ ಫ್ರೀಡಮ್ ಮೂಮೆಂಟ್ ಇನ್ ಕರ್ನಾಟಕ / ಸಂಪುಟ–2

46. South Indian Inscriptions Vol.IX- Part-1

47. South Indian Inscriptions Vol.IX- Part-1

48. Bombay Karnataka Inscriptions Vol.P1 No.92

49. Karnataka Inscriptions Vol.5

50. Mysore Archaeological Report,1924

51. Mysore Archaeological Report, 1945

52. South Indian Inscriptions.Vol.XI- Part-1

53. South Indian Inscriptions.Vol.XI- Part-1


ಸಂದರ್ಶನದ ಮಾಹಿತಿ:

1. ತಿರುಮಲೇ ಶ್ರೀ ರಂಗಚಾರ್ಯರು. ಶ್ರೀ ತಿ. ತಾ. ಶರ್ಮರ ಹಿರಿಯ ಪುತ್ರ. ಸ್ವಾತಂತ್ರ ಹೋರಾಟಗಾರರು, ಬೆಂಗಳೂರು
2. ಡಾ॥ ಹೋ. ಶ್ರೀನಿವಾಸಯ್ಯ. ಅಧ್ಯಕ್ಷರು ಕರ್ನಾಟಕ ಗಾಂಧಿ ಸ್ಮಾರಕ ನಿಧಿ. ಗಾಂಧಿಭವನ ಬೆಂಗಳೂರು–1
3. ಹೆಚ್. ಎಸ್. ದೊರೆಸ್ವಾಮಿ. ಹಿರಿಯ ಸ್ವಾತಂತ್ರ್ಯ ಹೋರಾಟಗಾರರು. ಬೆಂಗಳೂರು.
4. ಡಿ.ನಂ.ವೆಂಕಟರಮಣಯ್ಯ. ಸಮಾಜ ಸೇವಕರು, ಕನ್ನಡಪರ ಹೋರಾಟಗಾರರು ಬೆಂಗಳೂರು.

ಪತ್ರಿಕೆಗಳು:–

1. ಉದಯವಾಣಿ ದಿನ ಪತ್ರಿಕೆ–ನಮ್ಮ ಬೆಂಗಳೂರು ಪುರವಣಿ 2003 ಜೂನ್ ಅಕ್ಟೋಬರ್
2. ವಿಶ್ವಕರ್ನಾಟಕ ವಾರ ಪತ್ರಿಕೆ
3. ವಿಶ್ವಕರ್ನಾಟಕ ದಿನ ಪತ್ರಿಕೆ
4. ಪೌರವಾಣಿ ಪತ್ರಿಕೆ.
5. ಉತ್ಥಾನ ಪತ್ರಿಕೆ.
6. ನೀಲತ್ತಹಳ್ಳಿ ಕಸ್ತೂರಿಯವರ ಕಸ್ತೂರಿ ಪತ್ರಿಕೆ.

ಶರ್ಮರವರ ವಿಶ್ವಕರ್ಣಾಟಕ ಪತ್ರಿಕೆಯ ಪ್ರತಿ



ರಾಷ್ಟ್ರೀಯ ವಾರ ಪತ್ರಿಕೆ

ವಿಶ್ವಕರ್ಣಾಟಕ

ಸಂಪಾದಕರು
ಶ್ರೀ ತಿರುಮಲೆ ತಾತಾಚಾರ್ಯಶರ್ಮ
ಬಿಡಿ ಪತ್ರಿಕೆ

ಸಂಪುಟ ೨೦] ಬೆಂಗಳೂರು ನಗರ, ... ಭಾನುವಾರ ... [ಸಂಚಿಕೆ ...

ಸಾಹುಕಾರರಿಗೆ ಸತ್ತ ಮೇಲೆ ಬುದ್ಧಿಭ್ರಮಣೆ ಅಪವಾದ

★

ಬಡವರಿಗೆ ಬದುಕಿರುವಾಗಲೆ ಆ ಅಪವಾದದ ಬವಣೆ

ಶಾಸನ ಕತೆಗಳು


ಜಲವೇ ಅನ್ನ! ಅನ್ನವೇ ಬ್ರಹ್ಮ!

ದಕ್ಷಿಣ ಭಾರತದಲ್ಲಿ ...

ಯುದ್ಧ ಗೆಲ್ಲುವುದಕ್ಕಿಂತ ನಿಲ್ಲಿಸುವುದೇ ಮೇಲು!

ಅಂತರ ರಾಷ್ಟ್ರೀಯ ಪೋಲೀಸ್ ದಳವು ಅಗತ್ಯ

ಇದು ಶರ್ಮರ ಕೈಬರಹದ ಶಾಸನ ಪಾಠದ ಪ್ರತಿ



ತಿರುಮಲೆ ತಾತಾಚಾರ್ಯ ಶರ್ಮ 1895–1973

